
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


28 ಮೇ 2014 ಪುಟ 20 ರೂ. 15/-




ಬಾಯಿಗೆ ಬೀಗ



ಭಾರತಕ್ಕೆ ಗ್ರಹಣ




ನಟ ರಘುವೀರ್ ಅನರ್ಥ ಬದುಕು ವ್ಯರ್ಥ ಸಾವು!



ಡಾ.ವಾಸು ಎಚ್.ವಿ.

ಪ್ರತೀ ದೇಶವೂ ತನ್ನ ಯೋಗ್ಯತೆಗನುಗುಣವಾದ ಫ್ಯಾಸಿಸಂ ಅನ್ನು ಪಡೆಯುತ್ತದೆ


(every country gets fascism it deserves)



ಪ್ರತೀ ದೇಶವು ತನ್ನ ಯೋಗ್ಯತೆಗನುಗುಣವಾದ ಸರ್ಕಾರವನ್ನು ಪಡೆಯುತ್ತದೆ ಎಂಬುದು ಜೋಸೆಫ್ ಡಿ ಮೆಸ್ತ್ರೆಯ ಮಾತು. ಆತ 18 ಮತ್ತು 19ನೇ ಶತಮಾನದಲ್ಲಿ ಬದುಕಿದ್ದ ಫ್ರೆಂಚ್ ರಾಜತಾಂತ್ರಿಕ/ಬರಹಗಾರ. ಪ್ರಪಂಚದ ಫ್ಯಾಸಿಸ್ಟ್ ಪ್ರಭುತ್ವಗಳ ಕುರಿತು ಮಾತನಾಡುತ್ತಾ, ಖ್ಯಾತ ಚಿಂತಕ ಏಜಾಜ್ ಅಹಮದ್ ಅವರು ಈ ಮಾತನ್ನು ಸ್ವಲ್ಪ ಬದಲಿಸಿ 'ಪ್ರತೀ ದೇಶವೂ ತನ್ನ ಯೋಗ್ಯತೆಗನುಗುಣವಾದ ಫ್ಯಾಸಿಸಂಅನ್ನು ಪಡೆಯುತ್ತದೆ' ಎಂದು ಹೇಳಿದ್ದರು: (ಫ್ಯಾಸಿಸಂ ಎಂದರೆ ಒಂದು ಸರ್ವಾಧಿಕಾರಿ, ರಾಷ್ಟ್ರೀಯವಾದಿ ಮತ್ತು ಬಲಪಂಥೀಯ ಸಂಘಟನೆ ಮತ್ತು ಸರ್ಕಾರೀ ವ್ಯವಸ್ಥೆ)

ನರೇಂದ್ರ ಮೋದಿ ಪ್ರಧಾನಿಯಾಗುವುದರೊಂದಿಗೆ ಭಾರತದ ಬಲಪಂಥೀಯ ರಾಜಕಾರಣ ಮಹತ್ತರವಾದ ಬಲವನ್ನು ಪಡೆದುಕೊಂಡಿದೆ. ಕನಿಷ್ಠ ಮುಂದಿನ 10 ವರ್ಷಗಳು ಈ ದೇಶದ ಪ್ರಜಾತಂತ್ರದ ಪಾಲಿಗೆ ಕರಾಳವಾಗಲಿವೆ. ಈ ಸಂದರ್ಭದಲ್ಲಿ ಜರ್ಮನಿಯಲ್ಲಿ ಹಿಟ್ಲರನ ಕಾಲದಲ್ಲಿ ಬಂದ ಫ್ಯಾಸಿಸ್ಟ್ (ನಾಜಿ?) ಆಡಳಿತದ ಕಾಲವನ್ನು ನಾವು ನೆನಪಿಸಿಕೊಳ್ಳಬೇಕು. ಅದನ್ನು ನೆನೆಯುವುದು ಭಾರತಕ್ಕೂ ಅದಕ್ಕೂ ಇರುವ ಸಾಮ್ಯತೆಗಳನ್ನು ಅರ್ಥ ಮಾಡಿಕೊಳ್ಳಲು ಮಾತ್ರವಲ್ಲ, ಅದಕ್ಕೂ ಭಾರತಕ್ಕೂ ಇರುವ ವ್ಯತ್ಯಾಸಗಳನ್ನೂ ಅರಿಯಬೇಕು. ಅಷ್ಟು ಮಾತ್ರವಲ್ಲ, ಈ ದೇಶದ ಫ್ಯಾಸಿಸಂ ವಿರುದ್ಧದ ಹೋರಾಟದ ದಾರಿ ಯಾವುದಾಗಿರಬೇಕು ಎಂದು ಕಂಡುಕೊಳ್ಳಲೂ ಸಹ ಅದು ಅಗತ್ಯ.

ಏಕೆಂದರೆ, ಪ್ರತೀ ದೇಶವೂ ಫ್ಯಾಸಿಸಂ ವಿರುದ್ಧದ ಹೋರಾಟದಲ್ಲಿ ತನ್ನದೇ ದಾರಿಯನ್ನೂ ಕಂಡುಕೊಳ್ಳುತ್ತದೆ.



ಮುಸೊಲಿನಿ



ಗ್ರಾಮ್ಷಿ



ಹಿಟ್ಲರ್

ಹಾಗೆ ನೋಡಿದರೆ ಜರ್ಮನಿಯಲ್ಲಿ ಹಿಟ್ಲರನ ನಾಜೀವಾದ ವಿಜೃಂಭಿಸಲು ಆರಂಭಿಸಿದಾಗ ಅಲ್ಲಿ ಪ್ರಜಾತಂತ್ರವು ಇನ್ನೂ ಆಳವಾಗಿ ಬೇರು ಬಿಟ್ಟಿರಲಿಲ್ಲ, ಆದರೆ ಆ ಮಟ್ಟಿಗಿನ ಪ್ರಜಾತಂತ್ರವನ್ನೂ ಅಲ್ಲಿನ ಕಾರ್ಪೋರೇಟ್‌ಗಳು ಸಹಿಸಿಕೊಳ್ಳಲು ಸಿದ್ಧರಿರಲಿಲ್ಲ. ಅವರ ತಡೆಯಿಲ್ಲದ ಲಾಭಕೋರತನಕ್ಕೆ ಪ್ರಜಾತಂತ್ರವು ಅಡ್ಡಿಯಾಗಿತ್ತು, ಅದಕ್ಕಾಗಿ ಅವರು ತಮ್ಮ (ಅಂದರೆ ಜರ್ಮನಿಯ ಆಳುವ ವರ್ಗದ್ದೇ ಭಾಗವಾಗಿದ್ದ) ಜೊತೆಗೇ ಇದ್ದ ಯಹೂದಿಗಳನ್ನೇ ಗುರಿ ಮಾಡಿಕೊಂಡು ಹತ್ಯಾಕಾಂಡವನ್ನು ನಡೆಸಿದರು. ಭಾರತದಲ್ಲೂ ಕಾರ್ಪೋರೇಟ್ ಕಂಪೆನಿಗಳಿಗೆ ಇಂದು ಇರುವಷ್ಟು ಪ್ರಜಾತಂತ್ರವೂ ಅಡ್ಡಿಯೆನಿಸತೊಡಗಿದೆ. ಜನರು ಬದುಕಿ, ದುಡಿಯುವಷ್ಟನ್ನಾದರೂ ನೀಡಿ ಬಂಡವಾಳಿಗರಿಗೆ ಲಾಭ ಮಾಡಿಕೊಡುವ ಕಾಂಗ್ರೆಸ್‌ನ ವರಸೆಯೂ ಅವುಗಳಿಗೆ ಬೇಡವಾಗಿದೆ. ಹಾಗಾಗಿಯೇ ಅವರು ಈ ಚುನಾವಣೆಯಲ್ಲಿ ಯಾವ ಹಿಂಜರಿಕೆಯೂ ಇಲ್ಲದೇ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯ ಪರ ನಿಂತರು.

ಇದು ಎಷ್ಟರಮಟ್ಟಿಗೆಂದರೆ ಸ್ವತಃ ರಾಹುಲ್‌ಗಾಂಧಿಯೇ, 'ಮೋದಿಯ ಈ ಪ್ರಮಾಣದ ಪ್ರಚಾರಕ್ಕೆ ಹಣ ಎಲ್ಲಿಂದ ಹರಿದುಬಂತು? ಅದಾನಿಯ ಕಂಪೆನಿಗಳಿಗೆ ಇವರು ಅಕ್ರಮವಾಗಿ ಭೂಮಿ ನೀಡಿದ್ದು ಕ್ರೋನಿ ಕ್ಯಾಪಿಟಲಿಸಂ ಅಲ್ಲವೇ?' ಎಂದೆಲ್ಲಾ ಹೇಳುವಷ್ಟು. ಸ್ವತಃ ಕಾಂಗ್ರೆಸ್ ಪಕ್ಷವೂ ನಿಷ್ಠಾವಂತ ಕಾರ್ಪೋರೇಟ್ ಏಜೆಂಟ್ ಪಕ್ಷವಾಗಿದ್ದು, ಅದರ ನೇತಾರನಿಗೇ ಈ ರೀತಿ ಅನ್ನಿಸುವಷ್ಟು ಮಟ್ಟಿಗೆ, ಬಹಿರಂಗವಾಗಿ ಭಾರತದ ದೊಡ್ಡ ಕಂಪೆನಿಗಳು ಮೋದಿಯ ಪರ ನಿಂತಿದ್ದವು. ಒಂದು ಮೂಲದ ಪ್ರಕಾರ ಸ್ವತಃ ಮುಖೇಶ್ ಅಂಬಾನಿ ತನ್ನಂತಹ ಲೂಟಿಕೋರ ಬಂಡವಾಳಿಗರಿಂದ ಮೋದಿಯನ್ನು ಪ್ರಧಾನಿ ಮಾಡುವ ಸಲುವಾಗಿ 25,000 ಕೋಟಿ ರೂ.ಗಳಷ್ಟು ಸಂಗ್ರಹಿಸಿಕೊಟ್ಟಿದ್ದನಂತೆ. ಅದು ಸಾಕಾಗಲಿಲ್ಲವೆಂದು ನಂತರ ಇನ್ನಷ್ಟು 10,000 ಕೋಟಿ ರೂ.ಗಳನ್ನು ನೀಡಲಾಯಿತು ಅಂತ ನಂತರ ಮತ್ತೊಂದು ಸುದ್ದಿ ಬಂದಿತು.

ಹಿಂದೂಸ್ತಾನ್ ಟೈಮ್ಸ್‌ನ ಅಂದಾಜಿನ ಪ್ರಕಾರ ಬಿಜೆಪಿ ಪಕ್ಷವು ಜಾಹೀರಾತಿಗೆ ಸುರಿದ ಹಣ ಅಧಿಕೃತವಾಗಿ 5,000 ಕೋಟಿ. (2 ತಿಂಗಳ ಕಾಲ ಮೊದಲ ಪುಟದಲ್ಲಿ 20ಕ್ಕೂ ಹೆಚ್ಚು ಪ್ರಮುಖ ದಿನಪತ್ರಿಕೆಗಳು, ಟಿವಿ ಜಾಹೀರಾತುಗಳು, ದೇಶಾದ್ಯಂತ ಹೋರ್ಡಿಂಗ್ಸ್‌ಗಳಿಗಾಗಿ). ಇದಲ್ಲದೇ ಮೋದಿ ದೇಶಾದ್ಯಂತ ನಡೆಸಿದ್ದು 420 ರ್‍ಯಾಲಿಗಳು: ಒಂದೊಂದಕ್ಕೆ 5 ಕೋಟಿ ರೂ. ಖರ್ಚಾಗಿರಬಹುದು ಅಂತ ಹಿಡಿದರೆ, ಅದಕ್ಕೇ 2000 ಕೋಟಿ ರೂ. ಇದರಾಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ನಡೆಸಿದ ಪ್ರಚಾರ, ಮೋದಿಯ ಭಾಷಣ 1100 ಕಡೆ ಏಕಕಾಲದಲ್ಲಿ ಒಂದು ಸಾರಿ, ಇನ್ನೊಂದು ಸಾರಿ 2,500 ಕಡೆ ಪ್ರಸಾರ ಮಾಡಲು ನಡೆಸಿದ ಖರ್ಚು, 425 ವ್ಯಾನ್‌ಗಳು ಸುಮಾರು 2 ತಿಂಗಳ ಕಾಲ ಉತ್ತರ ಪ್ರದೇಶವಿಡೀ ಸಂಚರಿಸಿದ್ದು ಇವೆಲ್ಲವೂ ಮೇಲ್ನೋಟಕ್ಕೆ ಕಂಡುಬಂದ ಖರ್ಚು. ಇದರಾಚೆಗೆ ಮಾಧ್ಯಮ ಸಂಸ್ಥೆಗಳನ್ನು ಕೊಂಡುಕೊಳ್ಳಲೂ ಸೇರಿದಂತೆ, ಬೇರೆ ಬೇರೆ ಪಕ್ಷಗಳ ಕಾರ್ಯಕರ್ತರನ್ನು ಕೊಳ್ಳಲು, ಮತದಾರರಿಗೆ ಹಂಚಲು ಎಲ್ಲವೂ ಸೇರಿದರೆ ಮೇಲೆ ಹೇಳಲಾದ ಪ್ರಮಾಣದ ಹಣ ಖರ್ಚಾಗಿರುವುದರಲ್ಲಿ ಯಾವ ಆಶ್ಚರ್ಯವಿಲ್ಲ.

ಈ ಪ್ರಮಾಣದ ಮಾಧ್ಯಮಗಳು ಮತ್ತು ಪ್ರಚಾರ ಹಿಟ್ಲರನ ಕಾಲದಲ್ಲಿ ಇರಲಿಲ್ಲ. ಆದರೆ ಅಲ್ಲಿನ ಬಂಡವಾಳಿಗರಲ್ಲಿ ಒಂದು ಬಣ ಆತನ ಜೊತೆಗೆ ಇಷ್ಟೇ ಭದ್ರವಾಗಿ ನಿಂತಿದ್ದವು. ಆ ವಿಚಾರದಲ್ಲಿ ವ್ಯತ್ಯಾಸವಿಲ್ಲ. ಎಲ್ಲವೂ ಏತಕ್ಕಾಗಿ? ಪ್ರಜಾತಂತ್ರವೇ ತಮಗೆ ಅಡ್ಡಿಯಾದುದಕ್ಕಾಗಿ. ಸಂವಿಧಾನ ಬದ್ಧವಾಗಿಯೇ, ಸಾಂವಿಧಾನಿಕ ಸಂಸ್ಥೆಗಳ ವಿರುದ್ಧ, ಪ್ರಜಾತಂತ್ರದ ಮೌಲ್ಯಗಳ ವಿರುದ್ಧ ದಾಳಿ ನಡೆಸಿಯೂ ಮಾನ್ಯತೆ ಪಡೆದುಕೊಳ್ಳಲಿಕ್ಕಾಗಿ. ಈ ರೀತಿಯ ಸಾಮಾಜಿಕ ಮಾನ್ಯತೆಯನ್ನು ಪಡೆದುಕೊಳ್ಳಲು ಅಭಿವೃದ್ಧಿಯ ಸುಳ್ಳನ್ನು, ಕೋಮುವಾದವನ್ನು, ಜಾತಿಯನ್ನು, ಮಾಧ್ಯಮಗಳ ಮೂಲಕ ಭ್ರಾಂತಿಯನ್ನು, ಸೂಪರ್ ಪವರ್ ಮಾಡುವ ಉನ್ಮಾದವನ್ನು ಎಲ್ಲವನ್ನೂ ಬಳಸಲಾಗಿದೆ.

ಇವೆಲ್ಲವ ಮೂಲಕ-ಭಾರತದಲ್ಲಿ ಜಾರಿಗೆ ಬರಲಿರುವ ಫ್ಯಾಸಿಸಂನ ರೂಪವು ನಿರ್ಧಾರಿತವಾಗುತ್ತಿದೆ. ಅದು ಕಾರ್ಪೋರೇಟ್‌ಶಾಹಿ, ಬ್ರಾಹ್ಮಣ್ಯವಾದಿ ಹಿಂದುತ್ವದ ರೂಪವಾಗಿದೆ.

ಹಿಟ್ಲರನ ಕಾಲದಲ್ಲಿ ಇಡೀ ಪ್ರಪಂಚವು ಪ್ರಬಲವಾದ ಎಡಪಂಥೀಯ ಮತ್ತು ಬಲಪಂಥೀಯ ಧಾರೆಗಳನ್ನು ಹೊಂದಿತ್ತು, ಫ್ಯಾಸಿಸಂಅನ್ನು ಎಡಪಂಥಕ್ಕೆ ಬಂದ ಪ್ರತಿಕ್ರಿಯೆ ಎಂತಲೂ ಭಾವಿಸಲಾಗಿದೆ. ಆರಂಭದಲ್ಲಿ ಮುಸೊಲಿನಿ ಮಾತನಾಡಿದ್ದೂ ಸಮಾಜವಾದವನ್ನೇ, ಜರ್ಮನಿಯಲ್ಲಿ ಶ್ರೀಮಂತ ಯಹೂದಿಗಳ ವಿರುದ್ಧ ಕೆಳಶ್ರೇಣಿಗಳ ಜನರನ್ನು ಎತ್ತಿಕಟ್ಟಲಾಯಿತು. ಆದರೆ ಕಮ್ಯುನಿಸ್ಟರು ಜನರನ್ನು ವರ್ಗಗಳ ಆಧಾರದಲ್ಲಿ ಒಡೆಯುತ್ತಾರೆ, ನಾವು ರಾಷ್ಟ್ರೀಯತೆಯ ಆಧಾರದಲ್ಲಿ ಒಗ್ಗೂಡಿಸುತ್ತೇವೆ ಎಂದು ಹೇಳಿದರು. ಹರಂಪರೆ, ಅಸ್ಮಿತೆಗಳನ್ನೆಲ್ಲಾ ಬಳಸಲಾದ ಆ ರಾಜಕಾರಣಕ್ಕೆ, ಎಡ ಮತ್ತು ಪ್ರಗತಿಪರ ಚಳವಳಿಗಳಲ್ಲಿದ್ದವರೂ ತೇಲಿಹೋಗಿದ್ದರು. ಹೊಸದಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಬಂಡವಾಳಿಗರಿದ್ದ

ಜರ್ಮನಿ, ಇಟಲಿ, ಜಪಾನ್‌ಗಳಂತಹ ದೇಶಗಳಲ್ಲಿ
ನಡೆದಿತ್ತು, ಈ ವಿದ್ಯಮಾನದ ವಿರುದ್ಧ ಮಾತನಾಡುವ
ಅಪರಾಧಿಗಳೆಂಬಂತೆ ಚಿತ್ರಿತವಾಗತೊಡಗಿದರು.

ಇಂದು ಜಗತ್ತಿನಲ್ಲಿರಲಿ, ಭಾರತದಲ್ಲೇ
ಎಡಪಂಥದ ಅಲೆಯೇನೂ ಇಲ್ಲ, ಮೇಲೆ ಹೇಳಿ
ಕಾಂಗ್ರೆಸ್‌ನಂತಹ ಕಾರ್ಪೋರೇಟ್ ಪಕ್ಷವನ್ನೂ ಸಹಿಸಿಕೊ
ಮಟ್ಟಕ್ಕೆ ಬಂಡವಾಳದ ಹಸಿವು ಏರಿದೆ. ಅ
ಜಾಗತೀಕರಣೋತ್ತರ ಕಾಲದ ಫ್ಯಾಸಿಸಂನ ಗುಣ ಭಿನ್ನವಾ
ಇದು ದೇಶಕ್ಕೆ ತಕ್ಕ ಫ್ಯಾಸಿಸಂ ಮಾತ್ರವಲ್ಲದೇ,
ತಕ್ಕ ಫ್ಯಾಸಿಸಂ ಕೂಡಾ ಆಗಿರುತ್ತದೆ. 21ನೇ ಶತಮಾ
ಮೊದಲ ದಶಕ ಕಳೆದ ನಂತರದ, ನವ ಉದಾರ
ಆರ್ಥಿಕತೆಯಡಿಯಲ್ಲಿ ಎರಡೂವರೆ ದಶಕ ಕಳೆದ ನಂ
ಜಾತಿಗ್ರಸ್ತವಾದ-ಕೋಮುವಾದೀ ವಿಷ ಬೆಳೆಯಲು ಬೆ
ತಳಹದಿಯನ್ನು ಹೊಂದಿರುವ ಈ ಕಾ
ತಯಾರಿಸಿಕೊಂಡಿರುವ ಆಕ್ರಮಣಕಾರಿ ಫ್ಯಾಸಿಸಂ

ಇದನ್ನು ಎದುರುಗೊಳ್ಳುವ ಸಾಮರ್ಥ್ಯ
ಹೊಂದಿರುವ ಶಕ್ತಿಯೂ ಹೊಸ ಕಾಲಕ್ಕೆ
ತಯಾರಾಗಿರಬೇಕಾಗುತ್ತದೆ. ಅದು ಎಲ್ಲಿಂದ ವ
ಬರುತ್ತದೆ? ಈ ಪ್ರಶ್ನೆಯೂ ಬಹಳ ಮುಖ್ಯವಾದ
ಅದಕ್ಕೆ ಸಂಸದೀಯ ವಿರೋಧವನ್ನು ನೀಡಬಹುದ
ಕಾಂಗ್ರೆಸ್‌ನಂತಹ 'ಜಾತ್ಯತೀತ' ಪಕ್ಷಗಳು ಅ
ಎಡಪಕ್ಷಗಳು ನೆಲಕಚ್ಚಿವೆ. ಈ ಕುಸಿತಕ್ಕೆ ಕಾರಣವ
ಕಾಂಗ್ರೆಸ್ ಹೇಗೂ ಜನಪರವಾದ ರಾಜಕಾರಣದ
ಅಲ್ಲವೇ ಅಲ್ಲ, ಇನ್ನು ಎಡ ಪಕ್ಷಗಳೂ ಸಹ ಜ
ರಾಜಕಾರಣದ ಸಂಗತಿಯಲ್ಲಿ ತಾವು ಸಂಪೂರ್ಣ
ಎಂದು ಜನರಿಗೆ ಮನವರಿಕೆ ಮಾಡಿಕೊಡುವಲ್ಲಿ ಅ
ವೈಫಲ್ಯವು ಕೇವಲ ಕಾರ್ಯಶೈಲಿಯದ್ದಾಗಿಲ್ಲ.
ಬಂಗಾಳದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ
ಹೀನಾಯ ಪರಿಸ್ಥಿತಿಯನ್ನು ಮುಟ್ಟಲು ಕಾರಣವಾಗಿದ್ದು
ಸಿಪಿಎಂ ಸರ್ಕಾರದ ಕಾರ್ಪೋರೇಟ್ ಕಂಪೆನಿಗಳ ಪ
ನಿಲುವೂ ಒಂದಾಗಿತ್ತು.

ಆದ್ದರಿಂದಲೇ ನಮ್ಮ ಮುಂದಿನ ದಿನ
ಕರಾಳವಾಗಿರುತ್ತವೆ ಎಂಬುದರಲ್ಲಿ ಅನುಮಾನ
ಹಾಗೆಂದು ಮನೋಸ್ಥೈರ್ಯ ಕಳೆದುಕೊಳ್ಳಬೇಕಾದ್ದಿಲ್ಲ.
ಹೇಳಿದಂತೆ 'ಕಗ್ಗತ್ತಲ ಕಾಲದಲ್ಲೂ ಕಾವ್ಯವಿರಬಹು
ಇರಬಹುದು, ಕಗ್ಗತ್ತಲ ಬಗ್ಗೆ'. ಇದು ಕೇವಲ
ಅನ್ವಯಿಸುವ ಮಾತಲ್ಲ, ಕಗ್ಗತ್ತಲಿನಿಂದ ಹೊರಬರಬ
ಚಿಂತನೆ, ಚಳವಳಿ ಎಲ್ಲಕ್ಕೂ ಅನ್ವಯಿಸುತ್ತದೆ.
ಇನ್ನೊಂದನ್ನೂ ನೆನೆಸಿಕೊಳ್ಳಬೇಕಿದೆ. ಅದು ಇಟ
ಫ್ಯಾಸಿಸಂನ ಅತ್ಯಂತ ಭೀಕರ ದಾಳಿಗೆ ಗುರಿಯಾಗಿದ್ದ ವ
ಚಿಂತಕ ಗ್ರಾಮ್ಷಿ ಹೇಳಿದ್ದು. 'ಬೌದ್ಧಿಕತೆಯಲ್ಲಿ ವಾಸ್ತ
ಮನೋಬಲದಲ್ಲಿ ಆಶಾವಾದ' (pessimism
intellect, optimism of the will -Gra
ಇದನ್ನು ಮಾತ್ರ ಕಳೆದುಕೊಳ್ಳಲಾಗದು; ಕಳೆದುಕೊಳ್ಳ


ಮೋದಿ ಗೆದ್ದಾಯಿತು, ಈಗಲಾದರೂ ಎದ್ದೇಳು ಸಿದ್ದರಾಮಣ್ಣ!

ಭಾರತಕ್ಕೆ ಗ್ರಹಣ ಹಿಡಿದಿದೆ.

ಇವತ್ತು ಹೊರಬಿದ್ದಿರುವ ಚುನಾವಣಾ ಫಲಿತಾಂಶದ ಗ್ಗೆ ನಮ್ಮ ತಂಡದ ಅಭಿಪ್ರಾಯವಿದು.

ಈ ಕುರಿತು ಚುನಾವಣಾ ಫಲಿತಾಂಶದ ಬಗೆಗಿನ ರದಿಗಳಲ್ಲಿ ವಿವರಗಳಿರುವುದರಿಂದ ನಾನು ಇಲ್ಲಿ ಅದರ ಗ್ಗೆ ಹೆಚ್ಚು ಹೇಳಲು ಇಚ್ಛಿಸುವುದಿಲ್ಲ.

ಈ ಬಾರಿ ಕರ್ನಾಟದಲ್ಲೂ ಬಿಜೆಪಿ ಮತ್ತೆ ತನ್ನ



ರಾಳ ತಲೆಯನ್ನು ಎತ್ತಿದೆ. ಅದರಲ್ಲೂ ಯಾವ ರಾವಳಿಯಲ್ಲಿ ಕಳೆದ ವರ್ಷ ಕೋಮುವಾದಿ ಚೆಡ್ಡಿಗಳನ್ನು ನ ಸೋಲಿಸಿದ್ದರೋ ಅದೇ ಅನಾಹುತಕಾರಿಗಳನ್ನು ಈ ರಿ ಗೆಲ್ಲಿಸಿದ್ದಾರೆ.

ದೇಶದಾದ್ಯಂತ ಕೆಟ್ಟ ಸೋಲನ್ನು ಅನುಭವಿಸಿರುವ ಂಗ್ರೆಸ್ ರಾಷ್ಟ್ರ ಮಟ್ಟದಲ್ಲಿ ಮತ್ತೆ ಗಟ್ಟಿಗೊಳ್ಳುವುದು ಯಾವ ಕಾಲಕ್ಕೋ. ಆದರೆ ಬಿಜೆಪಿಯ ಈ ಗೆಲುವಿನಲ್ಲಿ ರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯವರಿಗೆ ಒಂದು ಚ್ಚರಿಕೆ ಅಡಗಿದೆ. ಬಿಜೆಪಿ ಗೆದ್ದಿರುವ ಈ ಸಂದರ್ಭದಲ್ಲೇ ದ್ದರಾಮಯ್ಯನವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಧಿಕಾರ ಸ್ವೀಕರಿಸಿ ಒಂದು ವರ್ಷವಾಗಿದೆ. ಈ ಹಿನ್ನೆಲೆಯಲ್ಲಿ ದ್ದರಾಮಯ್ಯನವರಿಂದ ಕರ್ನಾಟಕದ ಜನ ನಿರೀಕ್ಷಿಸಿದ್ದೆಷ್ಟು ಮತ್ತು ಅವರು ಕೊಟ್ಟಿರುವ ಕೊಡುಗೆ ಏನು ಎಂದು ನೋಡುವುದು ಸೂಕ್ತ ಎನಿಸುತ್ತಿದೆ.

ರಾಜ್ಯವನ್ನು ಭಾರೀ ಅಭಿವೃದ್ಧಿ ಮಾಡುತ್ತೇನೆಂದು, ವಿರೋಧ ಪಕ್ಷಗಳು ಐವತ್ತು ವರ್ಷಗಳಿಂದ ಸಾಧಿಸದಿದ್ದದ್ದನ್ನು ಐದು ವರ್ಷಗಳಲ್ಲೇ ಸಾಧಿಸುತ್ತೇನೆಂದು, ಕರ್ನಾಟಕವನ್ನು ರಾಮ ರಾಜ್ಯವಾಗಿಸುತ್ತೇನೆಂದು ಬೊಗಳೆ ಬಿಟ್ಟಿದ್ದ ಯಡಿಯೂರಪ್ಪನಿಗೆ ಒಂದು ಅವಕಾಶ ಕೊಟ್ಟು ನೋಡೋಣವೆಂದು ಕನ್ನಡಿಗರು ಬಿಜೆಪಿಯನ್ನು 2008ರಲ್ಲಿ ಗೆಲ್ಲಿಸಿದ್ದರು. ಗೆದ್ದಿದ್ದೇ ತಡ, ಚೆಡ್ಡಿಗಳು ತಮ್ಮ ನೀಚ ಬುದ್ಧಿಯನ್ನು ತೋರಿಸಲಾರಂಭಿಸಿದರು. ಅದು ಮೊದಲು ವ್ಯಕ್ತವಾಗಿದ್ದೇ 'ಆಪರೇಶನ್ ಕಮಲ'ದಿಂದ. ಬಳ್ಳಾರಿಯ ರೆಡ್ಡಿ ಗ್ಯಾಂಗ್ ಅಕ್ರಮವಾಗಿ ಗಳಿಸಿದ್ದ ಗಣಿ ಹಣದಿಂದ ವಿರೋಧ ಪಕ್ಷಗಳ ಶಾಸಕರನ್ನೇ ಖರೀದಿಸಲಾರಂಭಿಸಿತು. ಪ್ರಜಾಪ್ರಭುತ್ವ ವ್ಯವಸ್ಥೆಗೆ 'ದೇಶ ಭಕ್ತ' ಚೆಡ್ಡಿಗಳು ಎಸಗಿದ್ದ ಇಂತಹ ಅವಮಾನದಿಂದ ನಮ್ಮ ಜನ ಚೇತರಿಸಿಕೊಳ್ಳುವ ಮುನ್ನವೇ ಬಿಜೆಪಿಗಳ ಸರಣಿ ಕರ್ಮಖಾಂಡಗಳು ಪ್ರಾರಂಭವಾದವು. ಭ್ರಷ್ಟಾಚಾರ, ಗಣಿ ಲೂಟಿ, ಸೆಕ್ಸ್ ಹಗರಣಗಳು, ಅಲ್ಪಸಂಖ್ಯಾತರ ಮೇಲೆ ದಾಳಿ, ಕ್ರಿಶ್ಚಿಯನ್ನರ ಪ್ರಾರ್ಥನಾ ಸ್ಥಳಗಳ ಧ್ವಂಸ, ಮಹಿಳೆಯರ ದಮನ, ಮುಖ್ಯಮಂತ್ರಿ ಸೇರಿದಂತೆ ಹಲವಾರು ಬಿಜೆಪಿ ನಾಯಕರು ಜೈಲು ಸೇರಿದ್ದೆಲ್ಲವೂ ಜಗತ್ತಿನ ಮುಂದೆ ಕರ್ನಾಟಕದ ಜನ ತಮ್ಮ ಇತಿಹಾಸದಲ್ಲೇ ಪ್ರಥಮ ಬಾರಿಗೆ ತಲೆ ತಗ್ಗಿಸುವಂತೆ ಮಾಡಿತ್ತು.

ಯಡ್ಡಿ ಅಧಿಕಾರದಿಂದ ತೊಲಗಿದ ನಂತರ ಮುಖ್ಯಮಂತ್ರಿಗಳಾದ ಸದಾನಂದ ಗೌಡ ಮತ್ತು ಜಗದೀಶ್ ಚೆಟ್ಟರ್ ಕೂಡ ಒಂದಿಷ್ಟೂ ಜನಪರವಾದ ಕಾಳಜಿಯನ್ನು ತೋರಲಿಲ್ಲ. ಇದೆಲ್ಲದರಿಂದ ರೋಸತ್ತಿದ್ದ ಜನತೆಗೆ ಆಶಾಕಿರಣದಂತೆ ಕಂಡಿದ್ದು ಸಿದ್ದರಾಮಯ್ಯ. ಈ ಹಿಂದೆ ಕೆಟ್ಟ ಆಡಳಿತ ಕೊಟ್ಟಿದ್ದ ಕಾಂಗ್ರೆಸ್ ಪಕ್ಷದಲ್ಲಿದ್ದರೂ ಅವರು ತಮ್ಮ ಪ್ರಾಮಾಣಿಕತೆ, ದಕ್ಷತೆ ಮತ್ತು ಜನಪರ ಕಾಳಜಿಯಿಂದಾಗಿ ರಾಜ್ಯದ ಪಾಲಿಗೆ ಮತ್ತೊರ್ವ ದೇವರಾಜ್ ಅರಸ್ ಆಗುತ್ತಾರೆಂದು, ದನಿ ಇಲ್ಲದ ದೀನರ ಪರ ಆಡಳಿತ ನಡೆಸುತ್ತಾರೆಂದು ಜನ ಅಂದುಕೊಂಡಿದ್ದರು. ಅದಕ್ಕೆ ಪ್ರಮುಖ ಕಾರಣ ಸಿದ್ದರಾಮಯ್ಯನವರ 'ಅಹಿಂದ' ಹಿನ್ನೆಲೆ.

ಸಿಧ್ದರಾಮಯ್ಯನವರ ಒಂದು ವರ್ಷದ ಅಧಿಕಾರಾವಧಿಯನ್ನು ವಿಮರ್ಶೆ ಮಾಡುವ ಮುನ್ನ ಅವರು ಮಾಡಿರುವ ಹಲವು ಕೆಲಸಗಳನ್ನು ಮೆಚ್ಚಲೇ ಬೇಕು. ಅದರಲ್ಲಿ ಮುಖ್ಯವಾದದ್ದು 'ಅನ್ನಭಾಗ್ಯ' ಯೋಜನೆ. ಒಂದು ರೂಪಾಯಿಗೆ ಒಂದು ಕೆಜಿ ಕೊಡುವ ಈ ಯೋಜನೆಯನ್ನು ಹಲವು ದುಷ್ಟರು ವಿರೋಧಿಸಿದ್ದರು, ಇದು ಬಡವರನ್ನು ಸೋಂಬೇರಿಗಳನ್ನಾಗಿಸುತ್ತದೆ ಎಂದು ಟೀಕಿಸಿದ್ದರು. ಆದರೆ ಸಿದ್ದರಾಮಯ್ಯನವರು ಇಂತಹ ಟೀಕೆಗಳ ಎದುರೂ ಈ ಯೋಜನೆಗೆ ಬೇಕಿರುವ ಸಂಪನ್ಮೂಲವನ್ನು ಕೊಟ್ಟು ಅದನ್ನು ಮುಂದುವರೆಸಿದ್ದು ಸ್ವಾಗತಾರ್ಹ.

ಎರಡನೆಯದು 'ಕ್ಷೀರ ಭಾಗ್ಯ' ಯೋಜನೆ. ಇದರಿಂದ ಸರ್ಕಾರಿ ಶಾಲೆಗಳಲ್ಲಿ ಓದುವ ಬಡ ಮಕ್ಕಳಿಗೆ ಒಂದಿಷ್ಟು ಪೌಷ್ಟಿಕತೆ ಸಿಗುತ್ತಿದೆ. ಮೂರನೆಯದು ಎಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಿಗೆ ಆಯ್ಕೆಯಾಗುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತ ಮಂಡಳಿಯಿಂದಲೇ ನೇರವಾಗಿ ಕಾಲೇಜು ಶುಲ್ಕ ಪಾವತಿ ಆಗುವ ಯೋಜನೆಯೂ ಒಳ್ಳೆಯದೆ.

ನಾಲ್ಕನೆಯದು ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸಂಬಂಧಿಸಿದ್ದು. ಈ ಹಿಂದೆ ಈ ಸಮುದಾಯಗಳ ಅಭಿವೃದ್ಧಿಗೆಂದು ಬರುತ್ತಿದ್ದ ಹಣವನ್ನು ಸರಿಯಾಗಿ ಉಪಯೋಗಿಸಲಾಗುತ್ತಿರಲಿಲ್ಲ. ಅದನ್ನು ತಡೆಯಲು ಸಿದ್ದರಾಮಯ್ಯನವರ ಸರ್ಕಾರ 'ಪರಿಶಿಷ್ಟ ಜಾತಿ/ವರ್ಗಗಳ ವಿಶೇಷ ಯೋಜನೆ'ಯನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರಬೇಕೆಂದು ಶಾಸನವನ್ನೇ ರೂಪಿಸಿ ಅದನ್ನು ಜಾರಿಗೆ ತಂದಿದ್ದಾರೆ, ಇದೂ ಕೂಡ ಜನಪರ ಯೋಜನೆಯೇ.

ಇವುಗಳಲ್ಲಿ ಹೆಚ್ಚಿನದು ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿ ಏಕಮಾತ್ರ ಸಂಪುಟ ಸದಸ್ಯರಾಗಿದ್ದ ದಿನ ಅವರೇ ಘೋಷಿಸಿದ್ದ ಯೋಜನೆಗಳು. ಆದರೆ ಇಷ್ಟನ್ನು ಮಾಡಿದ ನಂತರ ಸಿದ್ದರಾಮಯ್ಯ ಅದ್ಯಾಕೋ ಸುಮ್ಮನಾಗಿದ್ದಾರೆ ಅಥವಾ ಅವರನ್ನು ಸುಮ್ಮನಾಗಿಸಲಾಗಿದೆ. ನಿಜ, ವಿರೋಧ ಪಕ್ಷಗಳಲ್ಲಿರುವ ವೈರಿಗಳು, ಕಾಂಗ್ರೆಸ್ ಪಕ್ಷದಲ್ಲೇ ಇರುವ ಪ್ರತಿಸ್ಪರ್ಧಿಗಳು ಅವರ ಕೈ, ಕಾಲು ಮತ್ತು ಬಾಯಿ ಕಟ್ಟಿಹಾಕಿದ್ದಾರೆ. ಒಂದು ತಪ್ಪು ಮಾತು, ತಪ್ಪು ಹೆಜ್ಜೆ ಇಟ್ಟರೂ ಅವರನ್ನು ಅಧಿಕಾರದ ಗದ್ದುಗೆಯಿಂದ ಕೆಳಗಿಳಿಸಲು ಕಾತುರರಾಗಿದ್ದಾರೆ. ಅಷ್ಟೇ ಮುಖ್ಯವಾಗಿ ಲೋಕಸಭಾ ಚುನಾವಣೆಗಳು ಮುಗಿಯುವ ತನಕ ಹೆಚ್ಚಿನ ಬದಲಾವಣೆಗಳನ್ನು ತರದೆ ಇದ್ದರೆ ಸೂಕ್ತ ಎಂಬ ನಿರ್ಧಾರಕ್ಕೆ ಸಿದ್ದರಾಮಯ್ಯ ಮತ್ತು ಅವರ ಸರ್ಕಾರ ಬಂದಿರಲಿಕ್ಕೂ ಸಾಕು.

ಇದಕ್ಕೆ ಒಂದು ಉದಾಹರಣೆ 'ಮೌಢ್ಯ ವಿರೋಧಿ ಕಾಯಿದೆ'. ಅಧಿಕಾರಕ್ಕೆ ಬಂದ ಆರಂಭದಲ್ಲಿ ಸಿದ್ದರಾಮಯ್ಯ ಚಾರಿತ್ರಿಕವಾಗುವ ಸಾಧ್ಯತೆಯನ್ನು ಹೊಂದಿದ್ದ ಈ ಕಾಯಿದೆ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದರು. ಆದರೆ ಹಿಂದೂ ಕೋಮುವಾದಿಗಳು ಈ ಕಾಯಿದೆ ಬಗ್ಗೆ ಇಲ್ಲಸಲ್ಲದ ಅಪಪ್ರಚಾರವನ್ನು ದೊಡ್ಡ ಮಟ್ಟದಲ್ಲಿ ಮಾಡಿದರು. ಇದನ್ನು ನೋಡಿ ಸಿದ್ದರಾಮಯ್ಯನವರ ಸರ್ಕಾರ ಅದೆಷ್ಟು ಬೆಚ್ಚಿತೆಂದರೆ, ತಾನು ಮಾಡುತ್ತಿರುವುದು ಸರಿಯಾದದ್ದು, ಸಂವಿಧಾನದಲ್ಲಿರುವ ಆಶಯಕ್ಕೆ ಹತ್ತಿರವಾದದ್ದು, ಜನರನ್ನು ಮೌಢ್ಯದಿಂದ ಬಿಡುಗಡೆ ಮಾಡುವಂತದ್ದು ಎಂದೆಲ್ಲ ವಾದಿಸಿ ಜನರನ್ನು ಒಲಿಸಿಕೊಳ್ಳುವ ಬದಲು ಕಾಯಿದೆಯ ಕರಡನ್ನೇ ಬದಿಗೆ ಎಸೆಯಿತು.

ಇನ್ನು ಬಿಜೆಪಿ ಅವಧಿಯಲ್ಲಿ ಕೇಸರೀಕರಣಗೊಂಡಿದ್ದ ಆಡಳಿತಾಂಗವನ್ನು ಸ್ವಚ್ಛಗೊಳಿಸುವುದಾಗಿ ಸಿದ್ದರಾಮಯ್ಯ ಹೊಸತರಲ್ಲಿ ಹೇಳಿದ್ದರು. ಆದರೆ ಅದು ಸಾಧ್ಯವಾಗಿಲ್ಲ. ಇವತ್ತಿಗೂ ಕರಾವಳಿಯ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿಗಳು ಮುಂದುವರೆಯುತ್ತಿದ್ದು ಸ್ಥಳೀಯ ಪೋಲಿಸರು ಈಗಲೂ ಕೈಕಟ್ಟಿಕುಳಿತಿದ್ದಾರೆ. ಅಂತಹ ಪ್ರವೃತ್ತಿಯಿಂದಾಗಿಯೇ ಇತ್ತೀಚೆಗೆ ಕಬೀರ್ ಎಂಬ ಮುಸಲ್ಮಾನ ಯುವಕನನ್ನು ಎಎನ್‌ಎಫ್‌ನ ಪೇದ. . . ನಾಯಕ್ ಕೊಂದುಹಾಕಿದ್ದು. ಸಿದ್ದರಾಮಯ್ಯ ಮಾನವ ಹಕ್ಕುಗಳ ಆಯೋಗದ ನಿಯಮಗಳಂತೆ ನಾಯಕ್ ವಿರುದ್ಧ ಕ್ರಮವನ್ನೇನೋ ತೆಗೆದುಕೊಂಡರು ನಿಜ. ಆದರೆ ಇವತ್ತಿಗೂ ಕರಾವಳಿಯಲ್ಲಿ ಚೆಡ್ಡಿಗಳು ನಾಯಕ್‌ನನ್ನು ಕೊಂಡಾಡುತ್ತಾ, ಕಬೀರರನ್ನು ಬಾಯಿಗೆ ಬಂದಂತೆ ಬೈಯುತ್ತಾ ಸಭೆಗಳನ್ನು, ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಅವನ್ನು ತಡೆಯಲು ಸರ್ಕಾರ ಕಿಂಚಿತ್ತೂ ಪ್ರಯತ್ನಿಸಿಲ್ಲ.

ಇದೆಲ್ಲಾ ಹೀಗೆ ಮುಂದುವರೆದರೆ ಸಿದ್ದರಾಮಯ್ಯನವರಿಗೂ ಒಳ್ಳೆಯದಲ್ಲ, ರಾಜ್ಯಕ್ಕೂ ಒಳ್ಳೆಯದಲ್ಲ. ಆದ್ದರಿಂದ ಈಗಲಾದರೂ ಸಿದ್ದರಾಮಯ್ಯ ಎಚ್ಚರಗೊಳ್ಳಬೇಕಿದೆ. ತಮ್ಮನ್ನು ತಡೆಹಿಡಿಯುತ್ತಿರುವ ವೈರಿಗಳ ವಿರುದ್ಧ ಸೆಟೆದೆದ್ದು ಜನಪರವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿದೆ. ರಾಜ್ಯದ ಅಹಿಂದ ವರ್ಗಗಳನ್ನು, ದಮನಿತ ಜನರನ್ನು ಉದ್ಧಾರ ಮಾಡಬೇಕಿದೆ. 'ಅಹಿಂದ' ಎಂಬುದು ಕೇವಲ ವಿವಿಧ ಸಮುದಾಯಗಳ ಒಕ್ಕೂಟ ಮಾತ್ರವಾಗದೆ ಒಂದು ಪರ್ಯಾಯ ಚಿಂತನೆ ಮತ್ತು 'ಅಭಿವೃದ್ಧಿ ಮಾದರಿ' ಎಂಬುದನ್ನು ತೋರಿಸಬೇಕಿದೆ. ಆಗ ಮಾತ್ರ ಜನ ಸಿದ್ದರಾಮಯ್ಯನವರನ್ನು ಅರಸ್ ಮತ್ತು ನಜೀರ್ ಸಾಬ್ ಸ್ಥಾನದಲ್ಲಿಟ್ಟು ನೆನಪಿಸಿಕೊಳ್ಳುತ್ತಾರೆ.

ಇಲ್ಲವಾದರೆ ಇತರೆ ರಾಜಕಾರಣಿಗಳಂತೆ ಸಿದ್ದರಾಮಯ್ಯ ಕೂಡ ತಮ್ಮ ಆಕಾಂಕ್ಷೆಯಾಗಿದ್ದ ಮುಖ್ಯಮಂತ್ರಿ ಸ್ಥಾನ ಪಡೆದ ನಂತರ ಸುಮ್ಮನಾದರು ಎಂದೇ ಜನ ಈ 'ಅಹಿಂದ' ನಾಯಕನನ್ನು ನೆನಪಿಸಿಕೊಳ್ಳುತ್ತಾರೆ.



• ಗೌರಿ ಲಂಕೇಶ್
editorlankesh@gmail.com

ನಮ್ಮ ಸಮೀಕ್ಷೆ ತಪ್ಪಾಗಿದೆ: ಭಾರತದ ಪ್ರಜಾತಂತ್ರ ಆತಂಕದಲ್ಲಿದೆ


ಈ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕ ಮತ್ತು ಇಡೀ ದೇಶದ ಕುರಿತ ನಮ್ಮ ಸಮೀಕ್ಷೆ ತಪ್ಪಾಗಿದೆ. ನಮ್ಮ ಸಮೀಕ್ಷೆಯನ್ನು ಓದಿದ ಕೆಲವು ಬಿಜೆಪಿ ಬೆಂಬಲಿಗರು ಅದನ್ನು ಟೀಕೆ ಮಾಡಿ ಬರೆದ ಪತ್ರಗಳನ್ನು 'ತೋಗಿಕೆ-ತಗಿಕೆ'ಯಲ್ಲಿ ಪ್ರಕಟಿಸಿದ್ದೇವು. ನಾವು ಒಂದು ಕ್ಷೇತ್ರದಲ್ಲೂ ಬಿಜೆಪಿ ಗೆಲ್ಲುತ್ತದೆ ಎಂದು ಬರೆದಿಲ್ಲ ಎಂಬುದು ಅವರ ಆಕ್ಷೇಪವಾಗಿತ್ತು. ಆದರೆ ನಮ್ಮ ಸಮೀಕ್ಷೆಯಲ್ಲಿ ಎನ್‌ಡಿಎ ದೇಶದಲ್ಲಿ 220ರವರೆಗೂ ಬರಬಹುದು ಮತ್ತು ಕರ್ನಾಟಕದಲ್ಲಿ ಬಿಜೆಪಿಯು 10 ಸೀಟುಗಳನ್ನು ಗೆಲ್ಲಬಹುದು ಎಂದು ಬರೆದಿದ್ದೆವು. ಈಗ ಫಲಿತಾಂಶ ಬಂದಿದೆ: ಎನ್‌ಡಿಎ ಅದಕ್ಕಿಂತ 100ಕ್ಕೂ ಹೆಚ್ಚು ಸೀಟುಗಳನ್ನು ಗದ್ದಿದೆ ಮತ್ತು ಕರ್ನಾಟಕದಲ್ಲಿ ಬಿಜೆಪಿಯು 17 ಸೀಟುಗಳನ್ನು ಗದ್ದಿದೆ.


ದೇಶಾದ್ಯಂತ ಕಾಂಗ್ರೆಸ್ ವಿರೋಧಿ ಅಲೆ ಇದ್ದಿದ್ದು ಸ್ಪಷ್ಟವಾಗಿತ್ತು. ಕಾರ್ಪೋರೇಟ್ ಕಂಪೆನಿಗಳ ಸಾವಿರಾರು ಕೋಟಿ ಹಣದಿಂದ, ಕಾರ್ಪೋರೇಟ್ ಮಾಧ್ಯಮಗಳ ಸಂಪೂರ್ಣ ಬೆಂಬಲದೊಂದಿಗೆ ಮೋದಿ ನೇತೃತ್ವದಲ್ಲಿ ಆರೆಸ್ಸೆಸ್‌ನ ಪರಿವಾರ ಆಕ್ರಮಣಕಾರಿ ಪ್ರಚಾರ ನಡೆಸುತ್ತಿತ್ತು. ಮುಜಾಫರ್‌ನಗರದಲ್ಲಿ ಯೋಜಿತ ಕೋಮುಗಲಭೆ ನಡೆಸಿದ್ದು ಉತ್ತರಪ್ರದೇಶದಲ್ಲಿ ಬಿಜೆಪಿ ಪರವಾದ ಧ್ರುವೀಕರಣಕ್ಕೆ ಎಡೆಮಾಡಿಕೊಟ್ಟದ್ದೂ ಆಗಿತ್ತು. ಇವೆಲ್ಲದರ ಅರಿವೂ ನಮ್ಮ ಸಮೀಕ್ಷೆಗೂ ಒಂದು ತರ್ಕವಿತ್ತು. ರಾಜಸ್ತಾನ, ಗುಜರಾತ್, ಛತ್ತೀಸ್‌ಗಢ ಇತ್ಯಾದಿಗಳೆಡೆಯಲ್ಲಿ ಬಿಜೆಪಿ ಹೆಚ್ಚು ಕಡಿಮೆ ಸಂಪೂರ್ಣ ಸೀಟುಗಳನ್ನು ಪಡೆದುಕೊಳ್ಳಬಹುದೆಂತಲೂ ಅಂದಾಜಿಸಿದ್ದೆವು. ಆದರೆ ಈ ಎಲ್ಲಾ ತರ್ಕವನ್ನೂ ಮೀರಿ ನಮ್ಮ ನಿರೀಕ್ಷೆ ಹುಸಿಯಾಗಿದೆ. ಬಹುಶಃ ಬಿಜೆಪಿಯೂ ಇಷ್ಟು ನಿರೀಕ್ಷಿಸಿರಲಿಲ್ಲ.

ನಮ್ಮ ತರ್ಕ, ನಿರೀಕ್ಷೆ ಮತ್ತು ಆಶಯಗಳು ಸುಳ್ಳಾಗಿವೆ. ಕಳೆದ 5 ಸಾರ್ವತ್ರಿಕ ಚುನಾವಣೆಗಳ ಪೈಕಿ 4 ಚುನಾವಣೆಗಳಲ್ಲಿ ಕಾರ್ಪೋರೇಟ್ ಸಂಸ್ಥೆಗಳು ನಡೆಸಿದ ಸಮೀಕ್ಷೆಗಳು ಸುಳ್ಳಾಗಿದ್ದವು. ಅವರಿಗೂ ಒಂದು ತರ್ಕವಿತ್ತು, ಆ ತರ್ಕದ ಹಿಂದೆ ಈ ದೇಶದ ಭಾರೀ ಕುಬೇರರ ಹಿತಾಸಕ್ತಿಯಿತ್ತು. ನಮ್ಮ ಆಶಯ, ತರ್ಕಗಳ ಹಿಂದೆ ದೇಶದ ಸಾಮಾನ್ಯ ಜನರ ಹಿತಾಸಕ್ತಿಯಿತ್ತು. ನಮ್ಮ 'ಪತ್ರಿಕೆ'ಯು ಆ ರೀತಿಯಲ್ಲಿ ಜನರ ಪಕ್ಷಪಾತಿಯಾಗಿತ್ತು; ಮುಂದೆಯೂ ಜನಪರ ಹಿತಾಸಕ್ತಿಗಳ ಪಕ್ಷವೇ ಇರುತ್ತದೆ.

ಮುಂಬರುವ ದಿನಗಳು ಭಾರತದ ಪ್ರಜಾತಂತ್ರವನ್ನು ಆತಂಕಕ್ಕೆ ದೂಡಲಿವೆ. ಪ್ರಜಾತಾಂತ್ರಿಕ ಸಂವಿಧಾನಿಕ ಸಂಸ್ಥೆಗಳೂ ಆಳುವ ಸರ್ಕಾರದಿಂದಲೇ ದಾಳಿಗೊಳಗಾಗಲಿವೆ. ಅವೆಲ್ಲವನ್ನೂ ಎದುರಿಸಲು ನಿಮ್ಮ 'ಪತ್ರಿಕೆ'ಯು ಸಿದ್ಧವಿದ್ದೇ ಇದೆ.

—'ಲಂಕೇಶ್' ತಂಡ


ಪತ್ನಿ ಸಿಂಧು ಜೊತೆ



ನಟ ರಘುವೀರ್
ಅನರ್ಥ ಬದುಕು, ವ್ಯರ್ಥ ಸಾವು!

ಸುಖಪಟ್ಟೇ ಸಾಯುವುದು ಹೀಗೇನಾ? ಇದು ಸ್ವಯಂಕೃತಾಪರಾಧವಾ? ಅಥವಾ ಮನುಷ್ಯ ಯಾವ ರೀತಿ ಬಾಳಕೂಡದೆಂಬುದಕ್ಕೆ ನಿದರ್ಶನವಾ?

ನಟ ರಘುವೀರ್‌ಗೆ ಸಾಯುವ ವಯಸ್ಸಲ್ಲ, ಸಾಯಲು ಕಾರಣವಿಲ್ಲ, ಏನನ್ನೂ ಸಾಧಿಸದೆ, ಯಾವುದೋ ಭ್ರಮೆಗೆ ಬಿದ್ದು, ಏನೋ ಮಾಡಲು ಹೋಗಿ ಯಡವಟ್ಟು ಮಾಡಿಕೊಂಡು ಅಂತಿಮವಾಗಿ ಹುಡುಗಾಟಿಕೆ ಆಡಿಕೊಂಡೇ ಸತ್ತ ರಘುವೀರ್ ಎಂಬ ಒಂದಾನೊಂದು ಕಾಲದ ನಟನ ಸಾವಿಗೆ ಕಾರಣವಿರಲಿಲ್ಲ, ವಯಸ್ಸು ನಲವತ್ತಾರು. ಆದರೂ ಸಾಯುವ ವಯಸ್ಸಂತೂ ಖಂಡಿತ ಅಲ್ಲ.


ವರ್ಷದ ಹಿಂದೆ ಮೈಸೂರಿನ ಲಾಡ್ಜ್ ಒಂದರಲ್ಲಿ ವೇಶ್ಯಾವಾಟಿಕೆಯ ಆರೋಪದ ಮೇಲೆ ರಘುವೀರ್ ಪೊಲೀಸರಿಂದ ಬಂಧನಕ್ಕೀಡಾದಾಗಲೆ, ಆತನ ಪರಿಸ್ಥಿತಿ-ದುಸ್ಥಿತಿಯನ್ನು ಕಂಡವರಿಗೆ ಅಪಾಯದ ಮುನ್ಸೂಚನೆಯಿತ್ತು. ಅಷ್ಟೇ ಏಕೆ, ಪ್ರಾರಂಭದಿಂದಲೂ ನಟ ರಘುವೀರ್ ಕುರಿತಂತೆ ಇಂಥ ಅಪಶಕುನದ ಸುದ್ದಿಗಳೇ ಕೇಳಿಬರುತ್ತಿದ್ದವು. ಯಾವುದೋ ಸಿನಿಮಾ ತೋಪಾಯಿತಂತೆ, ಲಕ್ಷ ಲಕ್ಷ ಕೈಬಿಟ್ಟಿತಂತೆ, ಅಪ್ಪ ಮನೆಯಿಂದ ಹೊರದಬ್ಬಿದರಂತೆ, ಮನೆಯವರ ಇಚ್ಛೆಗೆ ವಿರುದ್ಧವಾಗಿ ಬೇರೆ ಜಾತಿ ಹುಡುಗಿಯನ್ನು ಮದುವೆಯಾಗಿದ್ದಕ್ಕೆ ಆಸ್ತಿ ಕೊಡಲಿಲ್ಲವಂತೆ, ಮದುವೆಯಾದ ಮಡದಿಯೇ ಮನೆಯಿಂದ ಹೊರದಬ್ಬಿದಳಂತೆ, ಕೊನೆಗೆ ಪತ್ನಿಯೇ ಸಿನಿಮೀಯವಾಗಿ ಸತ್ತಳಂತೆ... ಹೀಗೆ ನಟ ರಘುವೀರ್ ಕುರಿತಂತೆ ಮೇಲಿಂದ ಮೇಲೆ ಗಾಂಧಿನಗರದಲ್ಲಿ ಕೇಳಿಬರುತ್ತಿದ್ದದ್ದು ನಿರಾಶೆಯ, ನಷ್ಟದ, ದುಃಖದ ಅಪಶಕುನಗಳೇ.

ದುಡ್ಡಿನ ಬಲಕ್ಕೆ!

ಯಾವುದೋ ಸಿನಿಮಾ ಕ್ಲಿಕ್ಕಾಗಲಿಲ್ಲ, ಇನ್ನಾವುದೋ ಸಿನಿಮಾ ಅರ್ಧಕ್ಕೆ ಕಣ್ಣು ಮುಚ್ಚಿತು. ನೂರಾರು ಕೋಟಿಯ ಆಸ್ತಿಯಿದ್ದೂ ತಂದೆಯ ಕಾರಣಕ್ಕೆ ಅದ್ಯಾವುದೂ ಕೈ ಹತ್ತಲಿಲ್ಲ. ರಘುವೀರ್ ಕಾರಣಕ್ಕೇ ನಾರಾಯಣ್ ಮತ್ತು ಮಹೇಂದರ್ ಥರದ ನಿರ್ದೇಶಕರು ಹುಟ್ಟಿಕೊಂಡರು... ಹೀಗೆ ಮೇಲಿಂದ ಮೇಲೆ ಚರ್ಚೆ, ಅಚ್ಚರಿ, ಆಘಾತ, ವದಂತಿಗಳೆಲ್ಲದರ ಮೊತ್ತದಂತಿದ್ದ ರಘುವೀರ್ ಮಾರ್ಚ್ 8ರಂದು ಏಕಾಏಕಿ ಹೃದಯಾಘಾತಕ್ಕೆ ಸಿಲುಕಿ ಸತ್ತಿದ್ದೂ ಇಂಥದ್ದೇ ಅಪಶಕುನವೆ.

ದುಡ್ಡು ಬಿಟ್ಟರೆ ಸಿನಿಮಾ ಒಂದರ ಹೀರೋಗೆ ಇರಬೇಕಾದ ಯಾವುದೇ ಅರ್ಹತೆ, ಯೋಗ್ಯತೆಗಳು ರಘುವೀರ್‌ಗಿರಲಿಲ್ಲ. ದುಡ್ಡಿನ ಆಧಾರದ ಮೇಲೆಯೇ ಹೀರೋ ಆಗ ಹೊರಟರೆ ಅದಕ್ಕೆ ದುಡ್ಡೊಂದೇ ಕಾರಣವಾಗಿರುತ್ತದೆ ಎಂಬ ಕನಿಷ್ಠ ಪ್ರಜ್ಞೆಯೂ ಇರಲಿಲ್ಲ, ಸಿನಿಮಾ ಆಕರ್ಷಣೆ, ಗ್ಲಾಮರ್, ಭ್ರಮೆ ಹೇಗೆ ಮನುಷ್ಯನೊಬ್ಬನನ್ನು ಮುಗಿಸುತ್ತದೆ ಎಂಬುದು ದುಡ್ಡಿನ ಮುಂದೆ ಅರಿವಾಗಲಿಲ್ಲ. ಅದು ಶುರುವಾಗಿದ್ದೇ 'ಚೈತ್ರದ ಪ್ರೇಮಾಂಜಲಿ'ಯಿಂದ.

ರಘುವೀರ್ ತಂದೆ ಮುನಿಯಲ್ಲಪ್ಪ ಆ ಕಾಲಕ್ಕೇ


ಕಣ್ಣು ಮುಚ್ಚಿದ ರಘುವೀರ್

ಹೆಸರಾಂತ ಕಂಟ್ರಾಕ್ಟರ್. ಜಾತಿಯಲ್ಲಿ ತಿಗಳರಾದರೂ ಕಷ್ಟಪಟ್ಟು ಮೇಲೆ ಬಂದ ಮುನಿಯಲ್ಲಪ್ಪನವರ ನಾಲ್ವರು ಪುತ್ರರು ನಾಲ್ವರು ಪುತ್ರಿಯರ ಪೈಕಿ ರಘುವೀರ್‌ನೇ ಕೊನೇ ಮಗ. ವಿದ್ಯೆ, ಡಿಗ್ರಿ, ಇಂಜಿನಿಯರಿಂಗ್ ಏನೇನೂ ಇಲ್ಲದೆ ಕೇವಲ ಗಾರೆ ಕೆಲಸ ಮಾಡಿಕೊಂಡೇ ಕಂಟ್ರಾಕ್ಟರ್ ಆದ ಮುನಿಯಲ್ಲಪ್ಪ ಆ ಕಾಲಕ್ಕೇ ವರನಟ ರಾಜ್‌ಕುಮಾರರ ಸದಾಶಿವನಗರದ ಬಂಗಲೆ ಕಟ್ಟಿಸಿಕೊಟ್ಟವರು. ಕೆಂಪೇಗೌಡ ಬಸ್ ನಿಲ್ದಾಣ, ಪ್ರತಿಷ್ಠಿತ ಚೌಡಯ್ಯ ಸ್ಮಾರಕ ಭವನ, ಸಂಪಂಗಿರಾಮನಗರದ ವುಡ್‌ಲ್ಯಾಂಡ್ಸ್ ಹೋಟೆಲ್ ಇತ್ಯಾದಿ ಪ್ರಸಿದ್ಧ ಕಟ್ಟಡಗಳನ್ನು ನಿರ್ಮಿಸಿದ್ದ ಕಂಟ್ರಾಕ್ಟರ್ ಮುನಿಯಲ್ಲಪ್ಪನವರೇ ಜೆ.ಪಿ.ನಗರದ ಅಂಬರೀಷ್ ಬಂಗಲೆಯ ಕಾರಣಕರ್ತರು.

ಅಪ್ಪನ ಆಸ್ತಿ, ಅಂತಸ್ತಿತ್ತಾದ್ದರಿಂದ ಸಹಜವಾಗೇ ರಘುವೀರ್ ಸಿನಿಮಾ ಶೋಕಿಗೆ ಬಿದ್ದ. ಕೆಲಕಾಲ ಅಸಿಸ್ಟೆಂಟ್ ಡೈರೆಕ್ಟರ್ ಎಂದು ಓಡಾಡಿಕೊಂಡಿದ್ದ. ಮಗನ ಸಿನಿಮಾ ಹುಚ್ಚಿಗೆ ತಂದೆ ಶುರುವಿನಲ್ಲೇ ತಣ್ಣೀರೆರಚಿದ್ದರೆ ರಘುವೀರ್ ಬದುಕು ಬೇರೆಯದೇ ದಾರಿ ಹಿಡಿಯುತ್ತಿತ್ತೇನೊ. ಆದರೆ ತಂದೆ ಮುನಿಯಲ್ಲಪ್ಪಗೂ ಗ್ಲಾಮರ್ ವ್ಯಾಮೋಹವಿತ್ತು, ಮೊದಮೊದಲು ತಾವೇ ಮಗನ ಸಿನಿಮಾ ಭ್ರಮೆಗೆ ನೀರೆರೆದರು.

ಮುನಿಯಲ್ಲಪ್ಪನವರ ಎಂಟು ಮಕ್ಕಳ ಪೈಕಿ ಹಿರಿಯನಾದ ವಿಜಯ್ ತಂದೆಯಂತೆ ಕಂಟ್ರಾಕ್ಟರ್. ಎರಡನೇ ಮಗ ಮಹೇಶ್ ಕೂಡ ಕಾಮಗಾರಿಯನ್ನೇ ಆಯ್ದುಕೊಂಡರು. ಮತ್ತೊಬ್ಬ ಮಗ ಗೋವಿಂದ ರಿಯಲ್ ಎಸ್ಟೇಟ್ ಬಿಸಿನೆಸ್‌ಗೆ ಇಳಿದರು. ಆದರೆ ರಘುವೀರ್ ಮಾತ್ರ ತನ್ನದೇ ವಿಚಿತ್ರ ಖಯಾಲಿಯ ಬೆನ್ನಿಗೆ ನಡೆದುಬಿಟ್ಟ. ಮಿಕ್ಕಂತೆ ರಘುವೀರ್‌ನ ನಾಲ್ವರೂ ಅಕ್ಕತಂಗಿಯರಿಗೆ ಏನೇನು ಸವಲತ್ತು ಬೇಕೋ ಎಲ್ಲವನ್ನೂ ಮಾಡಿಕೊಟ್ಟ ತಂದೆಗೆ ರಘುವೀರ್ ಸಿನಿಮಾ ಹುಚ್ಚಿನ ಕುರಿತಂತೆ ಯಾವುದೇ ತಕರಾರಿರಲಿಲ್ಲ.

ತಕರಾರಿದ್ದದ್ದು ಆತನ ಮದುವೆಯ ಕುರಿತಂತೆ. ಅದೇ ರಘುವೀರ್‌ನ ಬದುಕಿಗೂ ಮುಳುವಾಯಿತು. ಸಾವಾಗಿ ಬೆನ್ನಟ್ಟಿತು.

ಪಿಯುಸಿವರೆಗೆ ಹಾಗೂಹೀಗೂ ತಳ್ಳಾಡಿಕೊಂಡೇ ಓದು ಮುಗಿಸಿದ ರಘುವೀರ್ ಆನಂತರ ಕಾಲೇಜಿನತ್ತ ತಲೆ ಹಾಕಲಿಲ್ಲ; ಕೆಲಕಾಲ ಎ.ಟಿ. ರಘು ಜೊತೆ ಸೇರಿಕೊಂಡು ಡೈರೆಕ್ಷನ್ ಕಲೀತೀನಿ ಎಂದು ಓಡಾಡಿಕೊಂಡಿದ್ದ ಒಂದೆರಡು ಅಂಬರೀಷ್ ಚಿತ್ರಗಳಲ್ಲಿ ರಘುವೇ ಸಣ್ಣಪುಟ್ಟ ಪಾರ್ಟು ಕೊಡಿಸಿದ್ದ. ಇದನ್ನೆಲ್ಲ ಸೂಕ್ಷ್ಮವಾಗೇ ಗಮನಿಸಿದ್ದ ತಂದೆ ಮುನಿಯಲ್ಲಪ್ಪ ಮಗನ ಸಿನಿಮಾ ಹುಚ್ಚಾದರೂ ಬಿಡಲೆಂದು ತಾವೇ ಬಂಡವಾಳ ಹಾಕಿ 'ಅಜಯ್ ವಿಜಯ್' ಎಂಬ ಸಿನಿಮಾ ನಿರ್ಮಾಣಕ್ಕಿಳಿದದ್ದು 1988ರಲ್ಲಿ.

ಖ್ಯಾತ ನಿರ್ದೇಶಕ ಸಿದ್ಧಲಿಂಗಯ್ಯನವರ ಮಗ ಮುರಳಿ ಹೀರೋ ಆಗಿ ರಘುವೀರ್ ಎರಡನೇ ನಾಯಕನಾಗಿ ನಟಿಸಿದ್ದ ಈ ಚಿತ್ರದಲ್ಲಿ ಜಗ್ಗೇಶ್‌ಗೂ ಪಾತ್ರವಿತ್ತು. ಎ.ಟಿ. ರಘುವೇ ಇದಕ್ಕೂ ನಿರ್ದೇಶಕ. ಸಿನಿಮಾ ಏನೋ ತೆರೆಕಂಡಿತಾದರೂ ಬಂದಷ್ಟೇ ಭರದಿಂದ ಅದು ನಾಪತ್ತೆಯಾಗಿತ್ತು. ಇದೊಂದೇ ಕಾರಣಕ್ಕೆ ತಂದೆ ಮುನಿಯಲ್ಲಪ್ಪ ಆ ಕಾಲಕ್ಕೇ 20 ಲ[…] ಕಳೆಕೊಂಡಿದ್ದರು. ಕೆಲ ಕಾಲ ತೆಪ್ಪಗಿದ್ದ ರಘುವೀರ್‌ಗೆ 1991[…] ಹೊತ್ತಿಗೆ ಗಂಟು ಬಿದ್ದವನು ಪ್ರಳಯಾಂತ[…] ಎಸ್.ನಾರಾಯಣ್.

ಆದ್ಯಾರು ತಲೆ ತುಂಬಿದ್ದರೋ ದುಡ್ಡಿನ ಕಂಟ್ರಾಕ್ಟರ್[…] ಮುನಿಯಲ್ಲಪ್ಪರಿಗೆ ಸಿನಿಮಾ ಶೋಕಿಯಿದೆ ಎಂಬುದನ್ನು[…] ಸೂಕ್ಷ್ಮವಾಗೇ ಗಮನಿಸಿದ್ದ ನಾರಾಯಣ್ "'ಚೈತ್ರದ[…] ಪ್ರೇಮಾಂಜಲಿ' ಕತೆಯನ್ನು ನಿಮ್ಮ ಮಗನಿಗಾಗೆ[…] ಮಾಡಿದ್ದೀನಿ" ಎಂದು ರಘುವೀರ್ ತಂದೆಯನ್ನು[…] ಒಪ್ಪಿಸಿಬಿಟ್ಟ. ಕನಿಷ್ಠ ಇದರಿಂದಾದರೂ ಮಗನ ಲಕ್[…] ಕುದುರಬಹುದೆಂದು ಲೆಕ್ಕ ಹಾಕಿದ ಮುನಿಯಲ್ಲಪ್ಪ[…] ನಾರಾಯಣ್ ಗಿಮ್ಮಿಕ್ಕಿಗೆ ತಲೆಕೊಟ್ಟಿದ್ದೇ ಕೊನೆ. 'ಚೈತ್ರದ[…] ಪ್ರೇಮಾಂಜಲಿ' ರಘುವೀರ್ ಬದುಕಿನ ದಿಕ್ಕನ್ನೆ[…] ಬದಲಾಯಿಸಿತು. ಮಾತ್ರವಲ್ಲ, ರಘುವೀರ್ ಕಥಾನಕದ[…] ದುರಂತಕ್ಕೂ ಕಾರಣವಾಯಿತು.


ಹಂಸಲೇಖಾ ಸಂಗೀತದಿಂದಾಗಿಯೇ ಗೆದ್ದ 'ಚೈತ್ರದ[…] ಪ್ರೇಮಾಂಜಲಿ' ಸಾಧಾರಣ ಹಿಟ್ಟಾಗಿತ್ತು, ತಲೆಕೂದಲು[…] ಉದುರುತ್ತಿದ್ದ ಕಪ್ಪಗಿದ್ದ ನೆಟ್ಟಗೆ ಕನ್ನಡ ಮಾತಾಡುವುದಕ್ಕೂ[…] ಪರದಾಡುತ್ತಿದ್ದ ಆಂಧ್ರಾ ಮೂಲದ ನಾಯ್ಡುವೋ, ತಮಿಳ[…] ಮೂಲದ ಒಡ್ಡನಂತೆಯೋ ಕಾಣುತ್ತಿದ್ದ ರಘುವೀರ್[…] ಕೊರತೆಯೆಲ್ಲವೂ ಸಂಗೀತ, ನಿರ್ದೇಶನ, ನಿರ್ಮಾಣ[…] ಮೂಲಕ ಸರಿದೂಗಿತ್ತು, ಆದರೆ ರಘುವೀರ್ ಇದನ್ನ[…] ತನ್ನ ಸ್ವಂತ ಇಮೇಜ್ ಎಂದು ಭ್ರಮಿಸಿದ. ತಾನಿನ್ನ[…] ಸ್ಟಾರ್ ಆಗೇ ಬಿಟ್ಟೆ ಎಂಬ ಮೂರ್ಖತನಕ್ಕೆ ಬಿದ್ದ. ಇದೆ[…] ಹುಮ್ಮಸ್ಸಿಗೆ ಬಿದ್ದು ಆಗಷ್ಟೇ ನಿರ್ಮಾಪಕರನ್ನು ಹುಡುಕುತ್ತಿ[…] ಮಹೇಂದರ್‌ನ ಬುಟ್ಟಿಗೆ ಬಿದ್ದ. ಅದು 'ಶೃಂಗಾರ ಕಾವ್ಯ'[…] ಎಂಬ ಮತ್ತೊಂದು ಹಿಟ್ ಚಿತ್ರದ ಸೃಷ್ಟಿಗೆ ಕಾರಣವಾಯಿತು.


ಹೀಗೆ ಮಹೇಂದರ್ ತಲೆಗಾರಿಕೆಗೆ ಸೃಷ್ಟಿಸಲ್ಪಟ್ಟ 'ಶೃಂಗಾರ[…] ಕಾವ್ಯ'ಕ್ಕೂ ರಘುವೀರ್ ತಂದೆಯೇ ದುಡ್ಡು ಹಾಕಿದ್ದರು[…] ತಂದೆ ಮುನಿಯಲ್ಲಪ್ಪ ಮಗನಿಗಾಗಿ ಈ ರೀತಿ ಲಕ್ಷ ಲ[…] ಬಂಡವಾಳ ಹಾಕುವುದಕ್ಕೂ ಕಾರಣವಿತ್ತು. ತನ್ನ ಮ[…] ಹೀಗೆ ಹೆಸರಾಂತ ನಟನೋ, ಜನಪ್ರಿಯನೋ ಆದನೆಂದ[…] ತನಗಿಂತ ಶ್ರೀಮಂತರೂ ಪ್ರಭಾವಿಗಳೂ ಆ[…] ಹೆಣ್ಣುಮಕ್ಕಳನ್ನು ಹಡೆದವರು ನೆಂಟಸ್ತಿಕೆಗೆ ಬಂದರೆಂದ[…] ಆದು ನೂರಾರು ಕೋಟಿಗಳ ಲೆಕ್ಕದ ಲಾಭದ ಬಾಬತ್ತೆಂ[…] ದುರಾಶೆ ಕಾರಣವಾಗಿತ್ತು. ಆ ಹೊತ್ತಿಗಾಗಲೇ 600 ಕೋ[…] ರೂಪಾಯಿಗಳ ಆಸ್ತಿವಂತರಾಗಿದ್ದ ಕಂಟ್ರಾಕ್ಟರ್ ಮುನಿಯಲ್ಲ[…] ತನ್ನ ಮಗನಿಗೆ ಸಾವಿರ ಕೋಟಿಯ ಮನೆ ಹೆಣ್ಣೇ ಆಗಬೇಕೆಂ[…] ದುರಾಶೆಗೆ ಬಿದ್ದಿದ್ದರು. ಇಂಥ ಲೆಕ್ಕ ಹಾಕಿಯೇ ಮಗ[…] ಎರಡನೇ ಚಿತ್ರ 'ಶೃಂಗಾರ ಕಾವ್ಯ'ಕ್ಕೂ ಬಂಡವಾಳ ಹಾಕಿದ್ದರು[…]

'ಶೃಂಗಾರ ಕಾವ್ಯ' ಮಹೇಂದರ್ ನಿರ್ದೇಶನದಲ್ಲಿ ಭರ್ಜರಿ[…] ಯಾಗೇ ಶುರುವಾಗಿತ್ತು, ರಘುವೀರ್‌ಗೆ ಇದಿರಾಗಿ ಹೀರೋ[…] ಯಿನ್ನಾಗಿ ಬಂದವಳು ತಮಿಳಿನ ಸಿಂಧು ಎಂಬ ಕ[…] ಸುಂದರಿ. ಅಂಥಾ ಸೌಂದರ್ಯ, ಗೌರವರ್ಣ, ಮೈಮಾಟವಿ[…] ದಿದ್ದರೂ ತನ್ನ ಕಣ್ಣೋಟ ಮಾತ್ರದಿಂದಲೇ ಎಂಥವರನ್ನು[…] ಮತ್ತೊಮ್ಮೆ ನೋಡುವಂತೆ ಮಾಡುವ ಪ್ರತಿಭೆ ಆಕೆಯಲ್ಲಿತ್ತು[…] ಇನ್ನು ರಘುವೀರ್ ಹಳ್ಳಕ್ಕೆ ಬೀಳಲು ಎಷ್ಟು ಹೊತ್ತು[…]

'ಶೃಂಗಾರ ಕಾವ್ಯ' ಕೂಡ 'ಚೈತ್ರದ ಪ್ರೇಮಾಂಜಲಿ'ಯಂ[…] ಹಿಟ್ಟಾಯಿತು. ಅದು ನಿರ್ದೇಶಕ ಮಹೇಂದರ್, ಹಂಸಲೇ[…] ಮ್ಯೂಜಿಕ್ ಮತ್ತು ಕತೆಯಿಂದಾಗಿ ಹಿಟ್ಟಾದರೂ ರಘುವೀ[…] ತನ್ನಿಂದಾಗಿಯೇ ಹಿಟ್ಟಾಯಿತು, ತಾನಿನ್ನು ಸ್ಟಾರ್[…] ರಾತ್ರೋರಾತ್ರಿ ತನಗೆ ಡಿಮ್ಯಾಂಡು ಹೆಚ್ಚಿತೆಂಬ ಭ್ರಮೆ[…] ಬಿದ್ದ. ಹೀರೋ ತಾನೆಂದ ಮೇಲೆ ಹೀರೋಯಿನ್ ಸಿಂ[…] ತಾನೇ ತನ್ನ ಬದುಕಿನ ಜೋಡಿ ಎಂಬ ಮಳ್ಳಾಟಕ[…] ಬಿದ್ದ. ಮುಂದೆ 'ತುಂಗಭದ್ರ' ಎಂಬ ಮತ್ತೊಂದು ಚಿತ್ರಕ[…] ಆಕೆಯನ್ನೇ ಹೀರೋಯಿನ್ನಾಗಿಸಿದ. ಇತ್ತ ಶೂಟಿಂ[…] ನಡೆಯುತ್ತಿದ್ದರೆ ಅತ್ತ ರಘುವೀರ್-ಸಿಂಧು ಪ್ರೇಮ ಪ[…] ಶುರುವಾಗಿತ್ತು. ಹೊರನಾಡು ಶೂಟಿಂಗ್ ನಡುವೆಯೆ[…] ಸಿಂಧು ಕೊರಳಿಗೆ ತಾಳಿಯನ್ನೂ ಕಟ್ಟಿಬಿಟ್ಟ.

ಇದೆಲ್ಲವೂ ಸಿನಿಮಾ ಭ್ರಮೆಯಲ್ಲೇ ಸಿನಿಮೀಯವಾ[…] ರಘುವೀರ್‌ನ ಬದುಕಿನ ಘಟನಾವಳಿಗಳಾಗಿದ್ದರೆ ಇ[…] ಪರಿಣಾಮ ಮಾತ್ರ ಭೀಕರವಾಗಿತ್ತು. ಶ್ರೀಮಂತ ನೆಂಟ[…]







ಬಯಸಿದ್ದ ತಂದೆ ತನ್ನ ಕನಸಿಗೆ ಕೊಳ್ಳಿಯಿಟ್ಟಿದ್ದ ಮಗನಿಗೇ ಬುಗೇಟು ಕೊಟ್ಟರು. "ಹೇಗೂ ಚಪಲಕ್ಕೆ ಬಿದ್ದು ಮದುವೆಯನ್ನು ಮಾಡಿಕೊಂಡಾಗಿದೆ. ಆಗಿದ್ದು ಆಗಿಹೋಯ್ತು. ನಿಷ್ಟ ನಮ್ಮ ಖುಷಿಗಾದರೂ ನಾವು ಹೇಳಿದ ಹುಡುಗಿಗೆ ಳಿ ಕಟ್ಟು" ಎಂದು ತಂದೆ ಹೇಳಿದ್ದಕ್ಕೂ ರಘುವೀರ್ ಪ್ಪದೇ ಹೋದ. "ಸಿಂಧು ನನ್ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸ್ತಿದ್ದಾಳೆ. ಪ್ರಾಣ ಹೋದ್ರೂ ಪ್ರೀತಿಗೆ ದ್ರೋಹ ಮಾಡಲ್ಲ" ಎಂದು ಹೆದ್ದುಪೆದ್ದಾಗಿ ಹಠಕ್ಕೆ ಬಿದ್ದ ರಘುವೀರ್‌ನನ್ನು ಅಪ್ಪ ಮುಲಾಜಿಲ್ಲದೆ ಹೊರಗಟ್ಟಿದ್ದರು.

ತಂದೆಯ ನೆರಳಿರುವ ತನಕ ಎಲ್ಲವೂ ನೆಟ್ಟಗಿದ್ದದ್ದು ಮನೆಯ ಆಶ್ರಯ ತಪ್ಪಿದ್ದೇ ಉಲ್ಟಾ ಹೊಡೆಯಲಾರಂಭಿಸಿತು. ತಂದೆಯ ಬೆಂಬಲವಿಲ್ಲ ಎಂಬುದು ಗೊತ್ತಾಗಿದ್ದೇ 'ತುಂಗಭದ್ರ' ಚಿತ್ರ ಅಕಾಲಿಕ ಮರಣಕ್ಕೀಡಾಯಿತು. ಇದನಂತರ 'ಧ್ರುವ', 'ಹೊಂಗಿರಣ' ಮತ್ತು 'ಕಾವೇರಿ ತೀರದಲ್ಲಿ' ಇತ್ಯಾದಿ ಚಿತ್ರಗಳಲ್ಲಿ ರಘುವೀರ್ ನಟಿಸಿದನಾದರೂ ಅದ್ಯಾವುದೂ ಗೆಲ್ಲಲಿಲ್ಲ. ಅನಂತರ 'ಮುಗಿಲ ಚುಂಬನ' ಎಂಬ ಚಿತ್ರಕ್ಕೆ ಸಿಂಧುಳನ್ನೇ ಹಾಕಿಕೊಂಡು ತಾನೇ ಹೀರೋ ಆಗಿ ರಘುವೀರ್ ಶೂಟಿಂಗ್ ಆರಂಭಿಸಿದನಾದರೂ ಚಿತ್ರ ಇನ್ನೇನು ಮುಗಿಯುತ್ತದೆ ಎನ್ನುವಷ್ಟರಲ್ಲಿ ಅದ್ಯಾರೋ ವೆಂಕಟೇಶ್ ಎಂಬ ಫೈನಾನ್ಸಿಯರ್ ಕ್ಯಾತೆ ತೆಗೆದು 'ಮುಗಿಲ ಚುಂಬನ'ವನ್ನು ಮುಗಿಲಲ್ಲೇ ನಿಲ್ಲಿಸಿಬಿಟ್ಟ.

ಚೂರುಪಾರು ಕೂಡಿಟ್ಟಿದ್ದ ದುಡ್ಡು ಖಾಲಿಯಾಗಿತ್ತು. ಹೀರೋಯಿನ್ ಸಿಂಧು ಜೊತೆ ಮದ್ರಾಸಿಗೆ ವಲಸೆ-ಹೋದ. ಆಕೆಗೆ ನಟನೆಯಿಲ್ಲ; ಈತನಿಗೆ ಕೆಲಸ ದುಡ್ಡೂ ಎರಡೂ ಇಲ್ಲ. ಸಾಲದ್ದಕ್ಕೆ ಸಿಂಧು ಮತ್ತು ರಘುವೀರ್‌ಗೊಂದು ಹೆಣ್ಣು ಮಗುವಾಯಿತು. ಮದ್ರಾಸಿನಲ್ಲೂ ಬರಕತ್ತಾಗದೆ ವಾಪಸ್ಸು ಬೆಂಗಳೂರಿಗೆ ಬಂದ ರಘುವೀರ್ ಕೆಲಕಾಲ ಆರ್.ಪುರದಲ್ಲಿ ಮನೆ ಮಾಡಿಕೊಂಡಿದ್ದ. ಕೈಲಿ ಕಾಸಿಲ್ಲ, ತಂದೆಯ ನೆರಳಿಲ್ಲ, ಯಾವುದೇ ವ್ಯಾಪಾರ, ಸಿನಿಮಾ, ಉದ್ಯೋಗವಿಲ್ಲದೆ ಹೈರಾಣಾದ ರಘುವೀರ್ ಬೆಳ್ಳಂಬೆಳಿಗ್ಗೆ ಮೇ ಕುಡಿಯಲಾರಂಭಿಸಿದ್ದ. ಅದಕ್ಕೆಂದೇ ಕೆಲ ಹಗಲು ಕುಡುಕ ಗೆಳೆಯರು ಹುಟ್ಟಿಕೊಂಡರು.

ರಘುವೀರ್ ಬದುಕೇ ಅತಂತ್ರ, ಅಲ್ಲೋಲವಾಗಿ ಹೋಯಿತು. ಕುಬೇರನ ಮಗನೆಂದು ಮನಸ್ಸು ಕೊಟ್ಟಿದ್ದ ಸಿಂಧುಗೆ ಅತ್ತ ತಂದೆಯ ಆಸ್ತಿಯೂ ಬಾರದೆ ಇತ್ತ ರಘುವೀರ್ ಪರಿಸ್ಥಿತಿಯೂ ಸುಧಾರಿಸದೆ ಸಿನಿಮಾ ಭ್ರಮೆ ಎಂಬುದು ಕಟುವಾಸ್ತವವಾಗಿ ಕಾಡುತ್ತಿತ್ತು. ನೋಡುವಷ್ಟು ನೋಡಿದ್ದೇ ಮಗು ಸಮೇತ ಮದ್ರಾಸಿಗೆ ವಾಪಸ್ಸಾದಳು. ಆಕೆಯನ್ನು ಹಿಂಬಾಲಿಸಿ ಹೋದ ರಘುವೀರ್‌ಗೆ ದೊಡ್ಡ ಆಘಾತ ಕಾದಿತ್ತು. ಸಿಂಧು ಆತನನ್ನು ಕೀಳಾಗಿ ಕಂಡಳು, ಹೀಯಾಳಿಸಿದಳು. ಯಾವ ಹೆಂಗಸಾದರೂ ದುಡಿಯಲಾರದ ಗಂಡಸನ್ನು ಕೀಳಾಗಿ ಕಾಣುವುದು ಸಹಜವೆ.

ಕೈಹಿಡಿದ ಮಡದಿಯಿಂದಲೇ ತಿರಸ್ಕರಿಸಲ್ಪಟ್ಟ ರಘುವೀರ್ ಮತ್ತೆ ಬೆಂಗಳೂರಿಗೆ ವಾಪಸ್ಸಾದ. ಹಗಲಿರುಳೆನ್ನದೆ ಕುಡಿಯಲಾರಂಭಿಸಿದ. ಮಾತೆತ್ತಿದರೆ ಸಿಗರೇಟು, ಡ್ರಿಂಕ್ಸ್. ಕ್ರಮೇಣ ಸಕ್ಕರೆ ಕಾಯಿಲೆ ಮೈಗಂಟಿತು. ಬೆನ್ನಲ್ಲೇ ಬಿಪಿಯೂ ಶುರುವಾಯಿತು. ಸಿಕ್ಕಾಪಟ್ಟೆ ಕೆಮ್ಮು. ಮುಖ ಊದಿಕೊಂಡಂತಾಗಿತ್ತು. ಈ ಮಧ್ಯೆ ಪತ್ನಿ ಸಿಂಧು ತೆಲುಗು, ತಮಿಳು ಟಿವಿ ಸೀರಿಯಲ್ಲುಗಳಲ್ಲಿ ನಟಿಸುತ್ತಾ ಅಷ್ಟಿಷ್ಟು ದುಡ್ಡು ಕಂಡಳಾದರೂ ಆಕೆಗೂ ಅಸ್ತಮಾ ಕಾಡತೊಡಗಿತ್ತು. ಸುನಾಮಿ ಸಂತ್ರಸ್ತರಿಗೆಂದು ನಿಧಿ ಸಂಗ್ರಹಿಸಲು ಹೋದಾಗಲೇ ಮಹಡಿಯಿಂದ ಜಾರಿಬಿದ್ದು ಸಿಂಧು ದುರ್ಮರಣಕ್ಕೀಡಾದಳು.


ಅಲ್ಲಿಗೆ ರಘುವೀರ್ ಬದುಕಿನ ದುರಂತ ಅಧ್ಯಾಯವೊಂದು ಅಂತ್ಯ ಕಂಡಿತ್ತಾದರೂ ಬೇರೆಯದೇ ದುರ್ದೆಸೆಯೊಂದು ಆರಂಭವಾಗಿತ್ತು. ಆ ಹೊತ್ತಿಗಾಗಲೇ ತಂದೆ ಮುನಿಯಲ್ಲಪ್ಪ ಮೆತ್ತಗಾಗಿದ್ದರು. ತಾಯಿ ಕೊರಗಿಗೆ ಬಿದ್ದು ಕೊನೆಯುಸಿರೆಳೆದಾಗಿತ್ತು. ತಮ್ಮದೇ ಸಂಬಂಧದ ಗೌರಿ ಎಂಬ ಹೆಂಗಸೊಬ್ಬಳ ಜೊತೆ ರಘುವೀರ್‌ಗೆ ಎರಡನೇ ಮದುವೆಯಾಗಿತ್ತು. ಈಕೆಗೂ ಒಂದು ಹೆಣ್ಣು ಮಗು ಆಯಿತು. ತಂದೆಯಿಂದ ಬಂದಿದ್ದ ಬಿಟಿಎಂ ಲೇಔಟಿನ ಮನೆಯಲ್ಲೇ ರಘುವೀರ್ ವಾಸವಿದ್ದ. ದೊಡ್ಡಾಲದಮರದ ಬಳಿಯ ಫಾರ್ಮ್‌ಹೌಸಿನಲ್ಲೂ ಅಡ್ಡೆ ಹಾಕುತ್ತಿದ್ದ. ಅಲ್ಲೇ ಗೆಳೆಯರ ಗ್ಯಾಂಗು ಸೇರುತ್ತಿತ್ತು, ಮತ್ತೆ ಕುಡಿತ, ಕಡಿತ, ಸಿಗರೇಟು ಶುರುವಾಯಿತು. ತಂದೆ ಮುನಿಯಲ್ಲಪ್ಪ ಇಲ್ಲಿಗೆ ನೂರು ವರ್ಷದ ಹಿಂದೆಯೇ ಹಾಸಿಗೆ ಹಿಡಿದವರು ಕೊನೆಯುಸಿರೆಳೆದರು.

ಸಕ್ಕರೆ ಕಾಯಿಲೆ, ಬಿಪಿ, ಜೊತೆಗೆ ಭಗ್ನ ಕನಸುಗಳ ಮನೋಯಾತನೆ. ಬೆಳ್ಳಂಬೆಳಿಗ್ಗೆಯೇ ಕಂಠಮಟ್ಟ ಕುಡಿತ. ಒಂದರ ಹಿಂದೊಂದು ಸಿಗರೇಟು ಚಟ. ಮನೆಗೆ ತಕ್ಕ ಮಗನಲ್ಲ, ಹೆಂಡತಿಗೆ ಮೆಚ್ಚಿನ ಗಂಡನಲ್ಲ, ಸಿನಿಮಾ ಹೀರೋ ಆಗಲಿಲ್ಲ, ಇಟ್ಟ ಸಿನಿಮಾಗಳೂ ಮುಗಿಯಲಿಲ್ಲ, ನೂರಾರು ಕೋಟಿ ಆಸ್ತಿಯಿದ್ದೂ ಪ್ರಯೋಜನವಿಲ್ಲ, ಇಂಥ ಯಾತನೆ, ವ್ಯಥೆ, ಕೋಪಗಳ ನಡುವೆಯೇ ರಘುವೀರ್ ತನ್ನ 46ನೇ ವಯಸ್ಸಿಗೇ ಹೃದಯಾಘಾತಕ್ಕೀಡಾಗಿ ಮರೆಯಾಗಿದ್ದಾನೆ.

ವ್ಯರ್ಥ ಸಾವು, ಅಸರ್ಥದ ಬದುಕು! ಸಿನಿಮಾ ಕೊಡುವುದು ಏನೆಲ್ಲಾ ಕಿಡುಕು?

ಡಾ. ಸೋಮನಾಥ್

ಹಿರಣ್ಣಯ್ಯನ ಬಾಯಿಗೆ ಬೀಗ ಬಿತ್ತು!



ಮಾಸ್ಟರ್ ಹಿರಣ್ಣಯ್ಯನವರು ತಮ್ಮ ಬದುಕಿನ ಕಡೇ ಅಂಕದಲ್ಲಿ ತಮ್ಮ ಬಾಯಿಗೆ ತಾವೇ ಬೀಗ ಜಡಿದುಕೊಂಡಿದ್ದಾರೆ. 'ಬಾಯಿದ್ದವನು ಬರಗಾಲದಲ್ಲೂ ಬದುಕಿದ' ಎಂಬ ಗಾದೆಯಂತೆ ಇದುವರೆಗೂ ಬದುಕು ನಡೆಸಿದ್ದ ಹಿರಣ್ಣಯ್ಯನ ಬಾಯನ್ನು ಯಾರೂ ಮುಚ್ಚಿಸಲಾಗಿರಲಿಲ್ಲ. ಆದರೀಗ ಅವರೇ ಬಾಯಿ ಮುಚ್ಚಿಕೊಂಡು "ಇನ್ನು ಮುಂದೆ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡುವುದಿಲ್ಲ" ಎಂದುಬಿಟ್ಟಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತನಗೆ ತಾನೇ ಹರಣ ಮಾಡಿಕೊಂಡಿರುವ ಹಿರಣ್ಣಯ್ಯನ ಸುದ್ದಿಯನ್ನು ಕೇಳಿ ಆಘಾತಗೊಂಡ ಅವರ ಕುಲಬಾಂಧವರು "ಹಿರಣ್ಣಯ್ಯನವರು ಸಲ್ಲಿಸಿದ ಕ್ಷಮೆಯನ್ನು ಕೇಳಿಸಿಕೊಂಡ ಸಿದ್ದರಾಮಯ್ಯ ಅವರನ್ನು ಸಮಾಧಾನಪಡಿಸಬೇಕಿತ್ತು" ಎಂದೂ, "ಅಭಿವ್ಯಕ್ತಿ ಸ್ವಾತಂತ್ರ್ಯ ನಿಮಗೆ ಇದೆ. ತಾವು ಎಂದಿನಂತೆ ಬಿಜೆಪಿ ಬಾಗಿಲಲ್ಲಿ ನಿಂತು ಕಾಂಗ್ರೆ ಕಡೆ ಬೊಗಳಬಹುದು" ಎಂದೂ ಹೇಳಬೇಕಿತ್ತು ಎನ್ನುತ್ತಿದ್ದಾರೆ. ಇವೆಲ್ಲಾ ದೇವನೂರು ಹೇಳಿದಂತೆ 'ಮೈಕ್‌ಸೆಟ್ಟಿನ ಅಭಿಪ್ರಾಯಗಳು' ಇರಲಿ.

ಈ ಹಿರಣ್ಣಯ್ಯನಿಗೆ 'ಮುಂದೆ ಮಾತನಾಡಬೇಡ' ಅಂದವರಾರು? ಇದು ತನ್ನ ಹೊಲಸು ಬಾಯಿಂದ ಬಂದ ಮಾತಿನ ಪರಿಣಾಮಕ್ಕೆ ಹೆದರಿ ಇದು ತಾನೇ ವಿಧಿಸಿಕೊಂಡ ಶಿಕ್ಷೆಯಲ್ಲವೆ?

ವಾಸ್ತವವಾಗಿ ಕಳೆದ ಅರವತ್ತು ವರ್ಷಗಳಿಂದ ಹಿರಣ್ಣಯ್ಯ ಖಂಡನೆಗೆ ಯೋಗ್ಯವಾದ ಮಾತುಗಳನ್ನೇ ಆಡುತ್ತ ಬಂದಿದ್ದಾರೆ. ಅದೂ ಶ್ರೇಷ್ಠವಾದ ರಂಗಭೂಮಿಯಲ್ಲಿ ನಿಂತು. ಕಾಸು ಕೊಟ್ಟು ಅವರ ನಾಟಕಗಳನ್ನು ನೋಡಿದ ಜನ ಅವರಾಡಿದ ಮಾತುಗಳನ್ನು ನಾಟಕದ ಮಾತುಗಳೆಂದೇ ಭ್ರಮಿಸಿದ್ದರು. ಆದರೆ ಅವರಾಡುತ್ತಿದ್ದ ಯಾವ ಮಾತುಗಳೂ ನಾಟಕದ ಮಾತುಗಳಾಗಿರಲಿಲ್ಲ. ನಾನೇ ನೋಡಿದ ಹಲವು ನಾಟಕಗಳಲ್ಲಿ ಭ್ರಷ್ಟ ರಾಜಕಾರಣಿಗಳನ್ನ ಬೈಯ್ಯುವ ನೆಪದಲ್ಲಿ "ನಿಜವಾಗಲೂ ಧೀಮಂತ ರಾಜಕಾರಣಿ ಅಂದ್ರೆ ವಾಜಪೇಯಿ ಕಂಡ್ರಿ" ಎನ್ನುತ್ತಿದ್ದರು. ಆಗ ವಾಜಪೇಯಿ ಏನೂ ಆಗಿರಲಿಲ್ಲ, ನಮ್ಮವರೇ ಆದ ನಿಜಲಿಂಗಪ್ಪ, ಕಡಿದಾಳು ಮಂಜಪ್ಪ, ಗೋಪಾಲಗೌಡರಂತಹ ಧೀಮಂತ ರಾಜಕಾರಣಿಗಳಿದ್ದರೂ ಅವರನ್ನೆಲ್ಲ ಕಡೆಗಣಿಸಿ ಬ್ರಾಹ್ಮಣ ವಾಜಪೇಯಿ ಬಗ್ಗೆ ಮೆಚ್ಚುಗೆಯ ಮಾತನಾಡುತ್ತಿದ್ದರು.

ಇನ್ನೊಂದು 'ಸ್ವಯಂಘೋಷಿತ' ನಾಟಕವೊಂದರಲ್ಲಿ ಗುಂಡೂರಾಯರನ್ನು ಕುರಿತು "ಪಾಪ ಬ್ರಾಹ್ಮಣ ಮುಖ್ಯಮಂತ್ರಿಯಾಗಿದ್ದಾನೆ. ನಾಲ್ಕು ದಿನ ಇಲ್ಲಿ ಬಿಡ್ರಿ" ಎಂದಿದ್ದರು. ಆಗ ಬಂಗಾರಪ್ಪನ ಬಂಡಾಯ ಜೋರಾಗಿತ್ತು. ಆದ್ದರಿಂದ ತಮ್ಮ ಜಾತಿಗೆ ಸೇರಿದ್ದ ಗುಂಡೂರಾಯರನ್ನು ರಕ್ಷಿಸಲು ಹಿರಣ್ಣಯ್ಯ ಹೀಗಂದಿದ್ದರು ಎಂಬುದು ಗಮನಾರ್ಹ. ತಮ್ಮ ಮಾತಿನ ನಾಟಕಗಳಲ್ಲಿ ದೇವರಾಜ್ ಅರಸರನ್ನು ಭ್ರಷ್ಟ ಮುಖ್ಯಮಂತ್ರಿಯೆಂದು ಲೆಕ್ಕವಿಲ್ಲದಷ್ಟು ಬಾರಿ ಹಿರಣ್ಣಯ್ಯ ಹೀಯಾಳಿಸಿದ್ದಿದೆ. ಆದರೆ ಈ ಬ್ರೇಮಿನ್‌ನ ಬಗ್ಗೆ ಅರಸು ತಲೆ ಕೆಡಿಸಿಕೊಳ್ಳಲಿಲ್ಲ.


ಇದೇ ಹಿರಣ್ಣಯ್ಯ ಬಿಜೆಪಿಯ ಚಡ್ಡಿಗಳನ್ನು ಟೀಕಿಸಿದ್ದು ಕಡಿಮೆ. ಟೀಕಿಸಿದರೂ ತನ್ನ ಮನೆಯವರಿಗೆ ಬುದ್ಧಿ ಹೇಳಿದ ವಿವೇಕದ ದನಿ ಹೊರಡುತ್ತಿತ್ತು. ಅವಕಾಶ ಸಿಕ್ಕಾಗಲೆಲ್ಲಾ ಸೋನಿಯಾ ಗಾಂಧಿಯನ್ನು ಟೀಕಿಸುತ್ತ ಬಂದ ಹಿರಣ್ಣಯ್ಯ ಅದೇ ಬಿಜೆಪಿಯ ಸುಷ್ಮಾ ಸ್ವರಾಜ್ ಬಗ್ಗೆ ಎಂದೂ ಚಕಾರವೆತ್ತಿಲ್ಲ.

ಬರಬರುತ್ತ ಹಿರಣ್ಣಯ್ಯನ ನಾಟಕ ಮತ್ತು ಸಾರ್ವಜನಿಕ ಭಾಷಣ ಒಂದೇ ತರಹ ಆಗಿದ್ದವು. ಆ ಕಾರಣಕ್ಕೆ ಆತನ ಕುಲಬಾಂಧವರು ಟಿ.ವಿ. ಚಾನೆಲ್‌ಗಳಿಗೆ ಕರೆದು ಕೂರಿಸಿಕೊಂಡು "ಬೇಕಾದ್ದು ಮಾತನಾಡಿ" ಎಂದು ಅವಕಾಶ ಕೊಡುತ್ತಿದ್ದರು. ಆಗಲೂ ಕೂಡ ಸೋನಿಯಾ ಮತ್ತವರ ಮಕ್ಕಳನ್ನು ಮಾತ್ರ ಟೀಕಿಸಿ ಬಣ್ಣಗೇಡಿಯಾಗತೊಡಗಿದ್ದರು.

ಒಂದು ನಿಟ್ಟಿನಲ್ಲಿ ಈ ಹಿರಣ್ಣಯ್ಯ ಶ್ರೇಷ್ಠ ರಂಗಭೂಮಿಯನ್ನು ತನ್ನ ತೆವಲಿಗೆ ಬಳಸಿಕೊಂಡಿದ್ದೇ ಹೆಚ್ಚು

ನಾಟಕ ಮಾಡುತ್ತಲೇ ತನ್ನ ತಂದೆಯನ್ನು ನೆನೆಸಿಕೊಂಡು ಕಣ್ಣೀರು ಹಾಕುತ್ತಿದ್ದರು. 'ದೇವದಾಸಿ' ನಾಟಕದಲ್ಲಂತೂ ಸೂಳೆಯರ ಬದುಕಿನ ಜನ್ಮ ಜಾಲಾಡುತ್ತ "ಬಳ್ಳಾರಿ ಲಲಿತ ನನ್ನ ತಂದೆಯನ್ನು ಸರ್ವನಾಶ ಮಾಡಿಬಿಟ್ಟಳು" ಎಂದ ಹೇಳಿದ ಮಾತು ಇವತ್ತಿಗೂ ನನ್ನ ತಲೆಯಲ್ಲಿ ಉಳಿದಿದೆ.

ಸಾಮಾನ್ಯವಾಗಿ ಹಿರಣ್ಣಯ್ಯನ ನಾಟಕ ನೋಡಲು ಬರುತ್ತಿದ್ದ ಪ್ರೇಕ್ಷಕರು ವಿಚಿತ್ರ ಮನೋಭಾವ ಹೊಂದಿದವರಾಗಿರುತ್ತಿದ್ದರು. ಅವರಿಗೆಲ್ಲಾ ಹೆಂಗಸರನ್ನು ಮತ್ತು ಸೂಳೆಯರನ್ನು ಬೈದರೆ ಎಂಥದ್ದೋ ಖುಷಿ ಆಗುತ್ತಿತ್ತು. ಒಮ್ಮೆ ಈತ ಕಡೂರಿನಲ್ಲಿ ನಾಟಕ ಮಾಡುತ್ತಾ "ಹರಿಜನರನ್ನು ಮುಂದೆ ತರುವ ಬರಗಾಲ ಬಂತಲ್ಲೋ" ಎಂದಾಗ ಜನ ಚಪ್ಪಾಳೆ ಹೊಡೆದದ್ದನ್ನು ಕಂಡು ನಾನು ದಂಗು ಬಡಿದಿದ್ದೆ. ಆದರೆ ಹಿರಣ್ಣಯ್ಯ ಕೂಡಲೇ ತನ್ನ ವರಸೆ ಬದಲಿಸಿ "ಹರಿಜನ ಅಂದ್ರೆ ಯಾರು? ಹರಕೊಂಡು ತಿನ್ನೋರು, ಅಂದ್ರೆ ರಾಜಕಾರಣಿಗಳು" ಎಂದು ತೇಪೆಹಚ್ಚಿದ್ದರು. ಆದರೆ ಈ ತಿದ್ದುಪಡಿಯತ್ತ ಜನ ಗಮನ ಕೊಡಲಿಲ್ಲ. ಅದು ಅರಸು ಕಾಲವಾದ್ದರಿಂದ ಕೆಳ ಜಾತಿಗಳು ಅಸಹನೆಗೆ ತುತ್ತಾಗಿದ್ದರು. ಆದ್ದರಿಂದ ಜನ ಚಪ್ಪಾಳೆ ಹೊಡೆದಾಗಿತ್ತು.



ಜನರ ಕ್ಷುದ್ರ ಮನಸ್ಸಿಗೆ ಹಿತವಾಗುವಂತೆ ಮಾತನಾಡುತ್ತ ಹೋಗುತ್ತಿದ್ದ ಹಿರಣ್ಣಯ್ಯನ ಮಾತಿಗೆ ಜನ ತಲೆದೂಗುತ್ತಲೇ ಬಂದರೇ ಹೊರತು, ಈತ ರಂಜಿಸಿ ವಂಚಿಸುತ್ತಿರುವ ಒಬ್ಬ ಪುರೋಹಿತಶಾಹಿ ಕಲಾವಿದ ಎಂಬುದನ್ನು ಗುರುತಿಸಲೇ ಇಲ್ಲ.

ನಿಜಕ್ಕೂ ಓರ್ವ ಕಲಾವಿದ ಈ ಸಮಾಜದ ಸೊತ್ತು. ಆತ ಮನುಕುಲದ ಬದುಕು ಹಸನಾಗುವಂತೆ ಚಿಂತಿಸಿ ಅದನ್ನೇ ರಂಗಭೂಮಿಗೂ ತರಲು ಯತ್ನಿಸುತ್ತಾನೆ. ಆದರೆ ಈ ಹಿರಣ್ಣಯ್ಯ ನಾಟಕದ ನಡುವೆಯೇ ಬ್ರಾಹ್ಮಣರಿಗೆ ಬುದ್ಧಿ ಹೇಳಿ, ಸಂಘ ಮಾಡಿಕೊಳ್ಳಲು ಸಲಹೆ ಕೊಡುತ್ತಿದ್ದ ಮನುಷ್ಯ. ಅಷ್ಟೇ ಅಲ್ಲ, ಸ್ವತಃ ಆತ ಬ್ರಾಹ್ಮಣ ಮಹಾಸಭಾಕ್ಕಾಗಿ ಶ್ರಮಿಸಿದಾತ. ದುರಂತವೆಂದರೆ ಈತನ ಇಂತಹ ಕೈಂಕರ್ಯಕ್ಕೆ ಕಾಸು ಕೊಟ್ಟವರು ಮಾತ್ರ ಶೂದ್ರರು.

ಈ ಹಿರಣ್ಣಯ್ಯ ನಿಜಕ್ಕೂ ನಾಟಕಗಳನ್ನೇ ಆಡಿದ್ದರೆ ಅಲ್ಲಿಂದ ಹಲವಾರು ಜನ ಕಲಾವಿದರು ಬರಬೇಕಿತ್ತು. ಆದರೆ ಹಾಗಾಗಲಿಲ್ಲ. ಏಕೆಂದರೆ, ನೆಪಕ್ಕೆ ಅವರನ್ನು ನಿಲ್ಲಿಸಿಕೊಂಡು, ಸ್ಫೂರ್ತಿಗಾಗಿ ಗುಂಡೇರಿಸುತ್ತ, ಬಾಯಿಗೆ ಬಂದಂತೆ ಮಾತನಾಡುವುದನ್ನೇ ನಾಟಕವೆಂದು ಭ್ರಮಿಸಿದ್ದ ಆ ಕಾಲದಲ್ಲಿ ಒಮ್ಮೆ ಉತ್ತರ ಕರ್ನಾಟಕದ ಜನ "ಮಾತು ಸಾಕು, ನಾಟಕ ಶುರುಹಚ್ಚಲೇ ಮಗನ" ಎಂದದ್ದೂ ಇದೆ!

ಈತನ ಸಮಕ್ಕೇ ಅಭಿನಯಿಸುತ್ತಿದ್ದ ನಾಗಮಂಗಲ ಕಿಟ್ಟಿ ಎಂಬ ಕಲಾವಿದ ಹಿರಣ್ಣಯ್ಯನ ವಂಚನೆಗೆ ತುತ್ತಾಗಿ ಕುಡಿದು ಕುಡಿದು ತೀರಿಕೊಂಡ. ಕಿಟ್ಟಿಯ ಜಾಗಕ್ಕೆ ತನ್ನ ಮಗನನ್ನೇ ತಂದು ನಿಲ್ಲಿಸಿಕೊಂಡ ಹಿರಣ್ಣಯ್ಯನ ನಾಲಿಗೆ ಮಾತ್ರ ವಂಶಾಡಳಿತದ ವಿರುದ್ಧ ಗಳಪುತ್ತಲೇ ಇದೆ.

ಹೀಗೆ ಬದನೆಕಾಯಿ ತಿನ್ನುತ್ತ ಪುರಾಣ ಹೇಳುತ್ತ ಬಂದ ಹಿರಣ್ಣಯ್ಯನನ್ನು ಮೈಸೂರಿನ ನಾಗನವ ಕಲಾ ಸಾಹಿತ್ಯ ವೇದಿಕೆಯವರು ಕಳೆದ ಭಾನುವಾರ 'ನಾಗಾಸ್ ನವಸಿರಿ' ಪ್ರಶಸ್ತಿ ವಿತರಣಾ ಸಮಾರಂಭಕ್ಕೆ ಕರೆಸಿದ್ದರು. ಆಗ ಅತಿಥಿ ಭಾಷಣ ಮಾಡಲು ಎದ್ದ ಹಿರಣ್ಣಯ್ಯ ಸಭೆಗೆ ಅಪ್ರಸ್ತುತವಾಗಿದ್ದ ರಾಜಕಾರಣದ ವಿಷಯ ತೆಗೆದು "ಆ ಸೋನಿಯಾ ಗಾಂಧಿ ಬೀದೀಲಿ ಕುಣಿತಿದ್ಲು, ಅಂಥವಳ ಮಕ್ಕಳು ಬಂದು ಈಗ ದೇಶ ಆಳತಿವಿ ಅಂತ ಕುಂತವ್ರುರೆ. ಎಲ್ಲಿಗೆ ಬಂತು ನೋಡಿ ನಮ್ಮ ದೇಶದ ಕತೆ?" ಎಂದರು. ಅಲ್ಲಿದ್ದ ಪ್ರೇಕ್ಷಕರು ಕೂಡ ಅವರ ಮನೋಧರ್ಮದವರೇ ಆಗಿದ್ದರಿಂದ ಅವರೆಲ್ಲ ಜೋರಾಗಿ ಚಪ್ಪಾಳೆ ತಟ್ಟಿದರು.

ಇದರಿಂದ ಸ್ಫೂರ್ತಿಗೊಂಡ ಹಿರಣ್ಣಯ್ಯ "ಆ ಸಿದ್ದರಾಮಯ್ಯ ಚುನಾವಣೆಗಿಂತ ಮೊದ್ಲು ಜನಗಳ ಕಾಲಿಡೀತಿದ್ದ, ಈಗ ಸೋನಿಯಾ ಗಾಂಧಿ ತಲೆ ಹಿಡೀತಾ ಅವ್ರನೆ" ಎಂದಾಗಲೂ ಜನರಿಂದ ಜೋರಾದ ಚಪ್ಪಾಳೆಯ ಸುರಿಮಳೆಯಾಯ್ತು. ಆದರೆ ಆತ ಹೇಳಿದ ಈ ಮಾತಿನ ಸುದ್ದಿ ಕೂಡಲೇ ಮೈಸೂರಿನಲ್ಲಿ ಹರಿದಾಡಿತು. ಇದರಿಂದ ಆಘಾತಗೊಂಡ ಸಿದ್ದರಾಮಯ್ಯನವರ ಬೆಂಬಲಿಗರು ಮತ್ತು ಕಾಂಗ್ರೆಸ್ ಕಾರ್ಯಕರ್ತರೆಲ್ಲಾ ಸಭೆ ನಡೆಯುತ್ತಿದ್ದ ಸ್ಥಳಕ್ಕೆ ಬರುವಷ್ಟರಲ್ಲಿ ಹಿರಣ್ಣಯ್ಯ ಪರಾರಿಯಾಗಿ ಬಂಧುಗಳ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು.

ಹಿರಣ್ಣಯ್ಯನ ಭಾಷಣದ ಬಗ್ಗೆ ಕಾರ್ಯಕರ್ತರು ಪ್ರಶ್ನಿಸಿದಾಗ, ಕಾರ್ಯಕ್ರಮ ಆಯೋಜಿಸಿದ್ದವರು "ಅದು ಹಿರಣ್ಣಯ್ಯನವರ ಅಭಿಪ್ರಾಯ. ಅಷ್ಟಕ್ಕೂ ಹಿರಣ್ಣಯ್ಯ ಸರಿಯಾಗಿಯೇ ಮಾತನಾಡಿದ್ದಾರೆ. ಅದರಲ್ಲಿ ತಪ್ಪೇನು?" ಎಂಬ ಉದ್ಧಟತನದ ಉತ್ತರ ಕೊಟ್ಟರು. ಇದನ್ನು ಕೇಳಿ ಆಕ್ರೋಶಗೊಂಡ ಕಾರ್ಯಕರ್ತರು ವೇದಿಕೆಗೆ ನುಗ್ಗಿ ಕುರ್ಚಿ, ಫಲಕಗಳನ್ನು ಧ್ವಂಸ ಮಾಡಿದರು.

ಜನರ ಆಕ್ರೋಶವನ್ನರಿತ ವಿಪ್ರೋತ್ತಮರು ಕೂಡಲೇ ಹಿರಣ್ಣಯ್ಯನಿಗೆ ಸುದ್ದಿ ಮುಟ್ಟಿಸಿದರು. ಮುಂದಿನ ಪರಿಣಾಮಗಳನ್ನು ಕರಾರುವಾಕ್ಕಾಗಿ ಗ್ರಹಿಸಿದ ಹಿರಣ್ಣಯ್ಯನ ಬ್ರೇಮಿನ್ ಪಿಂಡಗಳು "ಈಗ ಸಿದ್ದರಾಮಯ್ಯ ಮೈಸೂರಿನಲ್ಲೇ ಇದ್ದಾರೆ. ಅವರ ಮೊರೆ ಹೊಕ್ಕರೆ ಮಾತ್ರ ಆಗಲಿರುವ ಅನಾಹುತದಿಂದ ನೀವು ಬಚಾವಾಗಬಹುದು" ಎಂದು ಸಲಹೆ ನೀಡಿದರು.

ಆಗ ಹಿರಣ್ಣಯ್ಯ ಸಿದ್ದರಾಮಯ್ಯನವರ ಮನೆ ಕಡೆ ಓಡಿದರು. ಅಲ್ಲಿಗೂ ನುಗ್ಗಿ ಬಂದ ಕಾರ್ಯಕರ್ತರ ಆಕ್ರೋಶ ನೋಡಿದ ಹಿರಣ್ಣಯ್ಯನ ದೇಹ ಕಂಪಿಸತೊಡಗಿತು. ನಡುಗುತ್ತಲೇ ದೈನೇಸಿಯಾಗಿ ಸಿದ್ದರಾಮಯ್ಯನವರ ಕ್ಷಮೆ ಕೇಳಿದ ಹಿರಣ್ಣಯ್ಯ "ನನಗೆ ವಯಸ್ಸಾಗಿದೆ, ನಾಲಿಗೆ ಸಮಸ್ಯೆ ಇದೆ" ಎಂದೆಲ್ಲ ಹಲವಾರು ಕಾಯಿಲೆಗಳ ಬಗ್ಗೆ ಹೇಳಿಕೊಂಡು ಕ್ಷಮೆ ಬೇಡಿದರು.

ಸಿದ್ದು ತನ್ನದೇ ಆದ ಗತ್ತಿನಲ್ಲಿ ಹುಸಿನಗೆ ಬೀರುತ್ತಾ 'ಬ್ರಾಹ್ಮಣನನ್ನು ಕ್ಷಮಿಸುವುದು ಶೂದ್ರನ ಕರ್ತವ್ಯ' ಎಂಬಂತೆ "ಕ್ಷಮೆಗಿಂತ ದೊಡ್ಡ ಶಿಕ್ಷೆ ಬೇರೊಂದಿಲ್ಲ. ಆದ್ದರಿಂದ ಈ ವಿಷಯ ಮುಂದುವರಿಸದೆ ಇಲ್ಲಿಗೆ ಬಿಡಿ" ಎಂದು ತಮ್ಮ ಬೆಂಬಲಿಗರಿಗೆ ಮತ್ತು ಕಾಂಗ್ರೆಸ್ ಕಾರ್ಯಕರ್ತರಿಗೆ ತೀರ್ಪಿತ್ತರು.

ಸಿದ್ದರಾಮಯ್ಯ ಅಷ್ಟು ಹೇಳುತ್ತಿದ್ದಂತೆಯೇ ಹಿರಣ್ಣಯ್ಯ "ನಾನಿನ್ನು ಸಭೆ ಸಮಾರಂಭಗಳಲ್ಲಿ ಮಾತನಾಡಲ್ಲ" ಎಂದು ಮಾತು ಕೊಟ್ಟರು. ಅದಕ್ಕೆ ಸಿದ್ದರಾಮಯ್ಯ "ಹಾಗೆ ಮಾಡಬೇಡಿ" ಎಂದರಲ್ಲದೆ ಹಿರಣ್ಣಯ್ಯನ ಕೈಹಿಡಿದು ಕಾರಿನವರೆಗೂ ಕರೆದುಕೊಂಡು ಹೋದರಲ್ಲದೆ ಬೆಂಗಳೂರಿನ ಹಿರಣ್ಣಯ್ಯನ ಮನೆಯವರೆಗೂ ಪೊಲೀಸ್ ಎಸ್ಕಾರ್ಟ್ ಇರುವಂತೆ ನೋಡಿಕೊಂಡರು.


ಈಗ ಹಿರಣ್ಣಯ್ಯ ತಾವೇ ತಮ್ಮ ಬಾಯಿಗೆ ಬೀಗ ಜಡಿದುಕೊಂಡು ಬೆಂಗಳೂರು ಸೇರಿದ್ದಾರೆ. ಆದರೆ ಇವತ್ತು ಅವರ ಆಶಯದಂತೆ ಎಲ್ಲವೂ ನಡೆದಿದೆ. ಬ್ರೇಮಿನ್‌ಗಳು ಇಂದು ಎಲ್ಲಾ ಮಾಧ್ಯಮದಲ್ಲಿ ಬಂದು ಕುಳಿತು ಹಿರಣ್ಣಯ್ಯನ ಕನಸುಗಳನ್ನ ನನಸಾಗಿಸುತ್ತಿದ್ದಾರೆ. ಆದ್ದರಿಂದ ಯಾವ ಮಾಧ್ಯಮವೂ ಹಿರಣ್ಣಯ್ಯ ಅವತ್ತು ಆಡಿದ ಮಾತು ಎಂತಹವು ಎಂಬುದನ್ನು ಬಿತ್ತರಿಸಿಲ್ಲ.

ವಯಸ್ಸಾದ ಮೇಲೆ ಜೀರ್ಣಶಕ್ತಿ ಕಡಿಮೆ ಆಗುತ್ತಂತೆ. ಆದ್ದರಿಂದ ಹಿರಣ್ಣಯ್ಯ ತಾನಾಡಿದ ಮಾತುಗಳನ್ನು ಜೀರ್ಣಿಸಿಕೊಳ್ಳಲಾಗದೇ ಇನ್ನು ಮುಂದೆ 'ಮಾತಿನ ಉಪವಾಸ' ಮಾಡುತ್ತೇನೆ ಎಂದಿದ್ದಾರೆ.

ಹಿರಣ್ಣಯ್ಯ ಎಂಬ ಬ್ರೇಮಿನ್ ಮನುಷ್ಯ ಇನ್ನಾದರೂ ಗೌರವದಿಂದ ಜೀವಿಸಲಿ, ಇತರರನ್ನು ಗೌರವಿಸುವುದನ್ನೂ ಕಲಿಯಲಿ.

- ಓರ್ವ ಜಾತ್ಯತೀತ ಮನುಷ್ಯ

ಮಗು, ಮಾತೃಭಾಷೆ ಮತ್ತು ಮೊದಲ ಶಿಕ್ಷಣ




ಗಾಂಧೀಜಿಯವರು 'ಮಾತೃಭಾಷೆಯು ಇತರರ ಸಮೃದ್ಧ ಆಲೋಚನೆ, ಭಾವನೆ ಮತ್ತು ಆಕಾಂಕ್ಷೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಮಗುವಿಗೆ ನೆರವಾಗುವುದಲ್ಲದೆ, ಮಗು ತನ್ನನ್ನು ತಾನು ಸ್ಪಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿಕೊಳ್ಳಲೂ ಕಲಿಸುತ್ತದೆ' ಎಂಬ ಅಭಿಪ್ರಾಯ ಹೊಂದಿದ್ದರು.

ಒಂದು ವೈಜ್ಞಾನಿಕ ಒಳನೋಟ

ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯನ್ನು ಕಡ್ಡಾಯಗೊಳಿಸದಂತೆ ಕರ್ನಾಟಕ ರಾಜ್ಯವನ್ನು ನಿರ್ಬಂಧಿಸುವಂತಹ ತೀರ್ಪೊಂದು ಸುಪ್ರೀಂಕೋರ್ಟ್‌ನಿಂದ ಇತ್ತೀಚೆಗೆ ಹೊರಬಂದದ್ದು ಎಲ್ಲರಿಗೂ- ಮುಖ್ಯವಾಗಿ ಮಕ್ಕಳ ಅಗತ್ಯತೆ, ಆಸಕ್ತಿ ಮತ್ತು ಸಮಸ್ಯೆಗಳತ್ತ ಕಾಳಜಿ ವಹಿಸುವವರಿಗಂತೂ- ದೊಡ್ಡ ಆಘಾತವೇ ಸರಿ. ಈ ತೀರ್ಪು ಸಾವಿರಾರು ಖಾಸಗಿ ಮತ್ತು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಹಾಗೂ ಪೋಷಕರಿಗೆ ಖುಷಿ ತಂದಿರಬಹುದಾದರು ಕರ್ನಾಟಕ ಸರ್ಕಾರ ಮತ್ತು ಕನ್ನಡ ಸಾಹಿತ್ಯ ವಲಯ ಅದನ್ನೊಂದು ಅಸಮಾಧಾನದಂತೆ ಸ್ವೀಕರಿಸಿವೆ. ಮೇಲ್ನೋಟಕ್ಕೆ ಸಾಂವಿಧಾನಿಕ ಚೌಕಟ್ಟಿನ ಮತ್ತು ನಿರ್ಣಯಾತ್ಮಕ ತೀರ್ಪಿನಂತೆ ಇದು ಕಂಡುಬಂದರೂ ಸಂವೇದನಾಶೀಲ, ಜವಾಬ್ದಾರಿಯುತ ನಾಗರಿಕ ಸಮಾಜ ಪೂರ್ವಗ್ರಹಪೀಡಿತವಾಗದೆ ವಿಮರ್ಶಾತ್ಮಕ ಪುನರ್‌ಮಂಥನ ಮಾಡಿಕೊಳ್ಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳುತ್ತಿದೆ. ಸಾಂವಿಧಾನಿಕ ಮತ್ತು ಸಾಂಸ್ಕೃತಿಕ ಆಯಾಮಕ್ಕಿಂತ ಹೆಚ್ಚಾಗಿ ಇದು ಮಕ್ಕಳ (ಗ್ರಾಮೀಣ ಇಲ್ಲವೆ ನಗರವಾಸಿ ಮಕ್ಕಳಿರಬಹುದು ಅಥವಾ ಗಣ್ಯರ ಇಲ್ಲವೆ ಕೆಳವರ್ಗದ ಮಕ್ಕಳಿರಬಹುದು) ಪರಿಣಾಮಕಾರಿ ಹಾಗೂ ಅರ್ಥಪೂರ್ಣ ಕಲಿಕೆಯನ್ನು ಪ್ರಭಾವಿಸಿ ಅವರ ವೈಯಕ್ತಿಕ, ಸಾಮಾಜಿಕ ಆರೋಗ್ಯಕರ ಬೆಳವಣಿಗೆಗಳನ್ನು ಬಾಧಿಸುವಂತಹ ಶೈಕ್ಷಣಿಕ ಸಮಸ್ಯೆ ಎನ್ನುವುದನ್ನು ನಾವೆಲ್ಲ ಮೊದಲು ಅರ್ಥಮಾಡಿಕೊಳ್ಳಬೇಕು. ಈ ಸಂಕೀರ್ಣ ಮತ್ತು ಸಂವೇದನಾತ್ಮಕ ಸಮಸ್ಯೆಯನ್ನು ಮಗುವಿನ ಶೈಕ್ಷಣಿಕ ಆಯಾಮದಿಂದ ನೋಡಬೇಕೆ ವಿನಾಃ ಕಾನೂನಾತ್ಮಕವಾಗಿ ಅಥವಾ ಸಾಹಿತ್ಯಿಕವಾಗಿ ಅಥವಾ ಸಾಂಸ್ಕೃತಿಕ ದೃಷ್ಟಿಕೋನದಿಂದ ಅಲ್ಲ.

ಆ ನಿಟ್ಟಿನಲ್ಲಿ ಇಲ್ಲಿರುವ ಮೂಲ ಸಮಸ್ಯೆ ಮತ್ತು ಅದಕ್ಕಿರುವ ಸಂಭವನೀಯ ಪರಿಹಾರದ ಬಗ್ಗೆ ಕೊಂಚ ಗಮನ ಹರಿಸೋಣ..

ಭಾರತದ ಬಹಳಷ್ಟು ಜನರು, ಮುಖ್ಯವಾಗಿ ಪೋಷಕರು, ತಮ್ಮ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಓದುವುದರಿಂದ ಬಹುಬೇಗನೆ ಕಲಿತುಬಿಡುತ್ತಾರೆ ಎಂತಲೇ ಭಾವಿಸಿಕೊಂಡಿದ್ದಾರೆ. ಇದು ತಪ್ಪು ನಂಬಿಕೆ. ಅಂತಹ ನಂಬಿಕೆಯನ್ನು ಪುಷ್ಟೀಕರಿಸುವಂತೆ ಆ ಮಕ್ಕಳು ತಮ್ಮ ಓದಿನ ತರುವಾಯ ಸ್ಪರ್ಧಾತ್ಮಕ ಕಾರ್ಪೊರೇಟ್ ಮಾರುಕಟ್ಟೆಯೊಳಗೆ ಬಹುಬೇಗನೆ ಹೀರಿಕೆಯಾಗಿಬಿಡಬಹುದು. ಅದರರ್ಥ ಅವರು ಚೆನ್ನಾಗಿ ಕಲಿತಿದ್ದಾರೆ ಎಂಬುದಲ್ಲ, ಅಂತಹ ಪೋಷಕರದು ಪ್ರಾಯೋಗಿಕ ಮತ್ತು ಪ್ರಯೋಜನಾತ್ಮಕ ನಂಬಿಕೆಯೇ ಹೊರತು ಸ್ವಾಭಾವಿಕ ಮತ್ತು ಮಾನವೀಯ ಕಲಿಕೆಯ ದೃಷ್ಟಿಕೋನವಲ್ಲ, ಮಗುವಿನ ಭಾಷಾವ್ಯವಸ್ಥೆ ಸಂಪೂರ್ಣವಾಗಿ ಪ್ರಬುದ್ಧಗೊಳ್ಳುವ ಮುನ್ನವೇ ಆತನ/ಆಕೆಯ ಮಾತೃಭಾಷೆ (ಅಥವಾ ಮಗುವಿಗೆ ತುಂಬಾ ಪರಿಚಿತ ಭಾಷೆ ಎಂದುಕೊಳ್ಳೋಣ)ಯನ್ನು ಹೊರತುಪಡಿಸಿ ಬೇರೆ ಭಾಷೆಯ ಮೂಲಕ ಕಲಿಸಲು ಯತ್ನಿಸುವುದು ಬಹಳಷ್ಟು ಸಂದರ್ಭಗಳಲ್ಲಿ ಅವರ ಕಲಿಕೆಯನ್ನು ಸಂಕುಚಿತಗೊಳಿಸುವ, ಆಲೋಚನಾ ಸಾಮರ್ಥ್ಯದ ಉಸಿರುಗಟ್ಟಿಸಿಬಿಡುವ, ಕ್ರಿಯಾಶೀಲತೆಯನ್ನು ಮೊಟಕುಗೊಳಿಸುವ ಮತ್ತು ಸಮಾಜಮುಖಿ ಸಂವಹನ ಕೌಶಲ್ಯತೆಗಳನ್ನು ದಮನಿಸಿ ಬಿಡುವ ಅಪಾಯತೆಯೇ ಹೆಚ್ಚಿರುತ್ತದೆ. ಅಂತಹುದು ಛಾಯಾ ಕಲಿಕೆಯಾಗಿ (Shadow Learning) ಬಿಡುತ್ತದೆ; ಅಲ್ಲಿ ಉರುಹಚ್ಚುವ ಬಾಯಿಪಾಠ ಮಾತ್ರವಷ್ಟೆ ಮುಖ್ಯವಾಗಿರುತ್ತದೆ. ಅಲ್ಪಸ್ವಲ್ಪ ನೈಜ ಕಲಿಕೆ ಅಥವಾ ಅರ್ಥಪೂರ್ಣ ಕಲಿಕೆ ಸಾಧ್ಯವಾಗಬಹುದಾದರು ಅದು ಸಹಜ ಕಲಿಕಾ ಮಾರ್ಗದಿಂದಲ್ಲದೆ ಪ್ರಭಾವಿತ (ನಿರ್ದೇಶಿತ) ಮಾರ್ಗದಿಂದ ಮಕ್ಕಳು ಕಲಿತಿರುತ್ತಾರೆ. ಅಂದರೆ, ಮಗುವಿನ ಮೂಲ ಭಾಷೆಯ ಸಂಕೇತ ಮಾಧ್ಯಮದಿಂದ ಮಗು ಕಲಿತದ್ದಾಗಿರುತ್ತದೆ. ನಿಜ ಹೇಳಬೇಕೆಂದರೆ, ಅಂತಹ 'ಇಂಗ್ಲಿಷ್ ಮೀಡಿಯಮ್' ಶಾಲೆಗಳಲ್ಲಿ ಇಂಗ್ಲಿಷ್‌ನ ನೈಜ ಕಲಿಕೆಯಾಗಲಿ ಅಥವಾ ಭಾಷೆಯ ಅರ್ಥಪೂರ್ಣ ಕಲಿಕೆಯಾಗಲಿ ಇರುವುದು ಕಷ್ಟಸಾಧ್ಯ. ಅಲ್ಲಿ ಪರೀಕ್ಷೆಯ ದೃಷ್ಟಿಯಿಂದ ಪ್ರಶ್ನೆಗಳಿಗೆ ಉತ್ತರಗಳನ್ನು ಶಿಕ್ಷಕರು 'ಡಿಕ್ಟೇಟ್' ಮಾಡುತ್ತಾರೆ, ಬಾಯಿಪಾಠ ಮಾಡುವ ಮಕ್ಕಳು ಅದನ್ನು ನೆನಪಿಟ್ಟುಕೊಂಡು ಪರೀಕ್ಷೆಗಳಲ್ಲಿ ಬರೆಯಲು ಯತ್ನಿಸುತ್ತಾರೆ, ಅಷ್ಟೆ!



ಪ್ರತಿಯೊಂದು ಭಾಷೆಯು ತನ್ನ ಸಂರಚನೆಯಲ್ಲಿ ಮತ್ತು ಶಬ್ದ, ವ್ಯಾಕರಣ, ಪದಸಂಪತ್ತು, ಅರ್ಥ, ವಾಕ್ಯರಚನೆಗಳಂತಹ ಉಪವಿಭಾಗಗಳಲ್ಲಿ ತನ್ನದೇ ಆದ ಅನನ್ಯತೆಯ ಸಂಕೇತ (ಸಂಜ್ಞೆ) ವ್ಯವಸ್ಥೆಯನ್ನು ಹೊಂದಿರುತ್ತದೆ. ಭಾಷೆ ಎಂದರೆ ಕೇವಲ ಒಂದು ತುದಿಯಿಂದ ಮತ್ತೊಂದು ತುದಿಗೆ ಮಾಹಿತಿಗಳನ್ನು ರವಾನಿಸುವಂತಹ ಪೈಪ್‌ಲೈನ್ ಅಲ್ಲ ಎನ್ನುವುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಲೇಬೇಕು. ಭಾಷೆ ಒಂದು ಸಂಕೀರ್ಣ ವ್ಯವಸ್ಥೆ; ಅದರ ಮೂಲಕ ಮನುಷ್ಯರು, ಮುಖ್ಯವಾಗಿ ಮಕ್ಕಳು, ತಮ್ಮ ಅನುಭವಗಳನ್ನು ವರ್ಗೀಕರಿಸಿ ಸಂಹಿತೆಗೊಳಿಸಿಕೊಳ್ಳುವುದನ್ನು ಕಲಿಯುತ್ತಾರೆ. ಬಾಹ್ಯ ವಾಸ್ತವಿಕತೆಗಳನ್ನು ಅಂತರ್ಯದಲ್ಲಿ ಪ್ರತಿನಿಧಿಸಿಕೊಳ್ಳಲು ಮತ್ತು ಅಗತ್ಯ ಇರುವೆಡೆ ಅರ್ಥಪೂರ್ಣವಾಗಿ ಅವುಗಳನ್ನು ಅಭಿವ್ಯಕ್ತಿಸಲು ಭಾಷೆ ನಮಗೆ ಸಹಾಯ ಮಾಡುತ್ತದೆ. ಇದು ಭಾಷಾಮನೋವೈಜ್ಞಾನಿಕತೆಯ ವಾಸ್ತವ. ಇದನ್ನು ಅಲ್ಲಗಳೆಯಲಾಗುವುದಿಲ್ಲ. ಆಲೋಚಿಸುವುದನ್ನು ಕಲಿಸುವುದು ಮತ್ತು ಅಂತಹ ಆಲೋಚನೆಗಳು ನಮ್ಮಲ್ಲಿ ಹುಟ್ಟುವಂತೆ ಮಾಡುವುದೇ ಭಾಷೆ. ಕೇವಲ ಸಂವಾದಕ್ಕೆ ಮಾತ್ರ ಸೀಮಿತವಾಗಿಸದೆ ಭಾಷೆಯ ಕ್ರಿಯಾತ್ಮಕ, ವಾದಾತ್ಮಕ ಮತ್ತು ವಿಶ್ಲೇಷಣಾತ್ಮಕ ಒಟ್ಟರ್ಥಗಳನ್ನೂ ಶಾಲೆಗಳಲ್ಲಿ ಕಲಿಸಿ, ಬೆಳೆಸಬೇಕಿದೆ.

ಒಂದು ಮಗು ಮುದ್ರಿತ ಮತ್ತು ಮೌಖಿಕ ವಾಕ್ಯಗಳನ್ನು ಗ್ರಹಿಸುವಲ್ಲಿ ತನ್ನ ಬೌದ್ಧಿಕ ಸಾಮರ್ಥ್ಯ, ಸಂಕೇತ ವ್ಯವಸ್ಥೆ ಮತ್ತು ಭಾಷಾ ಸಿದ್ಧಾಕೃತಿ ಸಂಚಯ ನಿರ್ವಹಣೆಗಳನ್ನು ತನ್ನ ಮಾತೃಭಾಷೆಯಲ್ಲೆ ನಿರ್ವಹಿಸಲು ಸಮರ್ಪಕವಾಗಿ ಕಲಿಯದೆ ಹೋದರೆ ಅಂತಹ ಮಗುವನ್ನು ಮತ್ತೊಂದು ಭಾಷೆಯಲ್ಲಿ ಅದೇ ಕೆಲಸಗಳನ್ನು ಮಾಡುವಂತೆ ಒತ್ತಾಯಿಸುವುದು ಅಪಾಯಕಾರಿಯೇ ಸರಿ. ಆ 'ಮತ್ತೊಂದು' ಭಾಷೆಯ ಪದ ಸಂಪತ್ತು, ವಾಕ್ಯರಚನೆ ಹಾಗೂ ವ್ಯಾಕರಣಗಳು ಮಗುವಿಗೆ ಅಪರಿಚಿತವಾಗಿರುತ್ತವೆ ಮಾತ್ರವಲ್ಲ ಅಸಹಜವೂ ಆಗಿರುತ್ತವೆ. ಪರಿಣಾಮವಾಗಿ ಮಗುವಿನ ಕಲಿಕೆಯೇ ಉಸಿರುಗಟ್ಟಿ ಬಿಡುತ್ತದೆ. ಅಂತಹ ಸಂದರ್ಭಗಳಲ್ಲಿ ಮಗು ವಸ್ತು, ವ್ಯಕ್ತಿ ಹಾಗೂ ಘಟನೆಗಳನ್ನು ಅರ್ಥಪೂರ್ಣವಾಗಿ ಸಂಬೋಧಿಸಲು ಪರದಾಡಬೇಕಾಗುತ್ತದೆ. ಸಾಮಾನ್ಯ ಮಕ್ಕಳ ಪರಿಸ್ಥಿತಿಯೇ ಹೀಗಾದರೆ ಇನ್ನು ಅಫೇಸಿಯಾ, ಡಿಸ್ಲೆಕ್ಸಿಯಾ, ಡಿಸ್‌ಗ್ರೇಫಿಯಾಗಳಂತಹ ಕಲಿಕಾ ದೋಷಗಳಲ್ಲದೆ ಕೀಳರಿಮೆ, ಸಂದಿಗ್ಧ ಮನಸ್ಥಿತಿ, ಸಂಕೋಚದಂತಹ ವ್ಯಕ್ತಿತ್ವ ದೋಷಗಳನ್ನು ಹೊಂದಿರುವ ಮಕ್ಕಳಲ್ಲಂತೂ ಇಂತಹ ಕಲಿಕೆ ತೀರಾ ಹಿಂದುಳಿದುಬಿಡುತ್ತದೆ. ಮಗುವಿನ ಈ ಸಮಸ್ಯೆಯ ಜೊತೆಗೆ ಶಿಕ್ಷಕರ ಕಳಪೆ ಬೋಧನೆ, ಅಸಮರ್ಥ ಬೋಧನಾ ಯೋಜನೆ, ಪ್ರಮಾದಪೂರಿತ ಮೌಲ್ಯೀಕರಣ ಮತ್ತು ಶಾಲಾ ಸೌಲಭ್ಯಗಳಂತಹ ಕಲಿಕಾ ಅಡ್ಡಿಗಳೂ ಸೇರಿಬಿಟ್ಟರೆ ಕಲಿಕೆ ಮತ್ತು ಬೋಧನೆ ಎರಡನ್ನೂ ಕಷ್ಟವಾಗಿಸಿಬಿಡುತ್ತವೆ. ಶಿಕ್ಷಕರಿಗೂ ಬೋಧನಾ ಭಾಷೆ ಅಪರಿಚಿತವಾಗಿದ್ದರಂತೂ ಸಮಸ್ಯೆ ಮತ್ತಷ್ಟೂ ತೀವ್ರವಾಗುತ್ತದೆ.

ಗೋಖಲೆ, ಗಾಂಧೀಜಿ ಮತ್ತು ಠ್ಯಾಗೋರ್‌ರಂತಹ ಶಿಕ್ಷಣ ಚಿಂತಕರು ಮಾತೃಭಾಷೆಯಲ್ಲೆ ಮಗುವಿಗೆ ಶಿಕ್ಷಣ ನೀಡುವುದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದರು. ಗಾಂಧೀಜಿಯವರು 'ಮಾತೃಭಾಷೆಯು ಇತರರ ಸಮೃದ್ಧ ಆಲೋಚನೆ, ಭಾವನೆ ಮತ್ತು ಆಕಾಂಕ್ಷೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಮಗುವಿಗೆ ನೆರವಾಗುವುದಲ್ಲದೆ ಮಗು ತನ್ನನ್ನು ತಾನು ಸ್ಪಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿಕೊಳ್ಳಲೂ ಕಲಿಸುತ್ತದೆ' ಎಂಬ ಅಭಿಪ್ರಾಯ ಹೊಂದಿದ್ದರು. ಗಾಂಧೀಜಿಯವರ ಈ ದೃಷ್ಟಿಕೋನವನ್ನು ಸಮರ್ಥಿಸುವಂತೆ 1953ರಲ್ಲಿ ಯುನೆಸ್ಕೋ ಹೀಗೆ ಘೋಷಿಸಿತ್ತು "ಮಾತೃಭಾಷೆಯೇ ಮಗುವಿಗೆ ಬೋಧಿಸುವ ಅತ್ಯುತ್ತಮ ಕಲಿಕಾ ಮಾಧ್ಯಮವೆನ್ನುವುದು ಸರ್ವಸಮ್ಮತ. ಮನೋವಿಜ್ಞಾನದ ಪ್ರಕಾರ ಮಾತೃಭಾಷೆ ಎನ್ನುವುದು ಅಭಿವ್ಯಕ್ತಿ ಮತ್ತು ಅರ್ಥೈಕೆಯ ಸಲುವಾಗಿ ಮಗುವಿನ ಮನಸ್ಸಿನಲ್ಲಿ ತಾವೇ ತಾವಾಗಿ ಕಾರ್ಯಾಚರಣೆಗೊಳ್ಳುವ ಸಂಕೇತ ವ್ಯವಸ್ಥೆಗಳಾಗಿದ್ದರೆ ಸಾಮಾಜಿಕವಾಗಿ, ಆತ/ಆಕೆ ಸೇರುವ ಸಮುದಾಯದ ಸದಸ್ಯರ ನಡುವೆ ಆತನ/ಆಕೆಯ ಅನನ್ಯತೆಯಾಗಿರುತ್ತದೆ. ಇನ್ನು ಶೈಕ್ಷಣಿಕವಾಗಿ, ಮಗು ಬೇರೆ ಭಾಷೆಗಳಿಗಿಂತ ಚೆನ್ನಾಗಿ ಕಲಿಕೆಯನ್ನು ರೂಢಿಸಿಕೊಳ್ಳುವ ಭಾಷೆಯೇ ಮಾತೃಭಾಷೆಯಾಗಿರುತ್ತದೆ". ಅಲ್ಲದೆ ತಾಯ್ನುಡಿ/ಮಾತೃಭಾಷೆಯ

UNESCO

1953ರಲ್ಲಿ ಯುನೆಸ್ಕೋ ಹೀಗೆ ಘೋಷಿಸಿತ್ತು "ಮಾತೃಭಾಷೆಯೇ ಮಗುವಿಗೆ ಬೋಧಿಸುವ ಅತ್ಯುತ್ತಮ ಕಲಿಕಾ ಮಾಧ್ಯಮವೆನ್ನುವುದು ಸರ್ವಸಮ್ಮತ. ಮನೋವಿಜ್ಞಾನದ ಪ್ರಕಾರ ಮಾತೃಭಾಷೆ ಎನ್ನುವುದು ಅಭಿವ್ಯಕ್ತಿ ಮತ್ತು ಅರ್ಥೈಕೆಯ ಸಲುವಾಗಿ ಮಗುವಿನ ಮನಸ್ಸಿನಲ್ಲಿ ತಾವೇ ತಾವಾಗಿ ಕಾರ್ಯಾಚರಣೆಗೊಳ್ಳುವ ಸಂಕೇತ ವ್ಯವಸ್ಥೆಗಳಾಗಿದ್ದರೆ ಸಾಮಾಜಿಕವಾಗಿ, ಆತ/ಆಕೆ ಸೇರುವ ಸಮುದಾಯದ ಸದಸ್ಯರ ನಡುವೆ ಆತನ/ಆಕೆಯ ಅನನ್ಯತೆಯಾಗಿರುತ್ತದೆ. ಇನ್ನು ಶೈಕ್ಷಣಿಕವಾಗಿ, ಮಗು ಬೇರೆ ಭಾಷೆಗಳಿಗಿಂತ ಚೆನ್ನಾಗಿ ಕಲಿಕೆಯನ್ನು ರೂಢಿಸಿಕೊಳ್ಳುವ ಭಾಷೆಯೇ ಮಾತೃಭಾಷೆಯಾಗಿರುತ್ತದೆ."

ಶಾಲೆಗಳಲ್ಲಿ ಮಗುವಿನ ಕಲಿಕಾ ಮಾಧ್ಯಮವಾಗಿರಬೇಕು ಎನ್ನುವುದನ್ನು 2005ರಲ್ಲಿ ನ್ಯಾಷನಲ್ ಕರಿಕ್ಯುಲಮ್ ಫ್ರೇಮ್‌ವರ್ಕ್ ಸ್ಪಷ್ಟವಾಗಿ ತಿಳಿಸಿದೆ.

ಎರಡು ಬೇರೆಬೇರೆ ಭಾಷಾ ವ್ಯವಸ್ಥೆಗಳನ್ನು ಒಟ್ಟೊಟ್ಟಿಗೇ ಪರಿಚಯಿಸಿದಾಗ ಮಗುವಿನ ನರಭಾಷಾ ಸಂರಚನೆ ಎರಡನ್ನೂ ಸಮರ್ಪಕವಾಗಿ ಗ್ರಹಿಸಲಾಗುವುದಿಲ್ಲ ಎಂಬುದು ಬೌದ್ಧಿಕ-ಮನಶಾಸ್ತ್ರದ ಹಲವಾರು ಸಂಶೋಧನೆಗಳಿಂದ ಈಗಾಗಲೇ ದೃಢಪಟ್ಟಿರುವಂತಹ ಸಂಗತಿ. ಮುಂದುವರೆದು, 'ದ್ವಿತೀಯ ಭಾಷೆ'ಯು (ಶಾಲಾ ವ್ಯವಸ್ಥೆಯ ದೃಷ್ಟಿಕೋನದಿಂದ) ಉತ್ತಮ ಕಲಿಕೆಗೆ ಬೋಧನಾ ಮಾಧ್ಯಮವಾಗಬಹುದು ಎಂದು ಎಲ್ಲೂ ರುಜುವಾತಾಗಿಲ್ಲ. ಸ್ವೀಡನ್‌ನಂತಹ ದೇಶ ತನ್ನ ದ್ವಿತೀಯ ಭಾಷೆಯಲ್ಲಿ ಅರ್ಥಾತ್ಮಕವಾಗಿ ಮುಂಚೂಣಿಯಲ್ಲಿರುವುದು ಕಲಿಕಾ ವ್ಯವಸ್ಥೆಯಲ್ಲಿ ಅದನ್ನು ಒಂದು 'ವಿಷಯ'ವನ್ನಾಗಿ ಹೆಚ್ಚು ಒತ್ತು ನೀಡಿರುವುದರಿಂದಲೇ ಹೊರತು ಅದನ್ನೇ ಬೋಧನಾ ಮಾಧ್ಯಮವಾಗಿ ಮಾಡಿಕೊಂಡು ಅಲ್ಲ ಎಂಬುದನ್ನು ನಾವೆಲ್ಲ ಗಮನಿಸಲೇಬೇಕು. ಅಲ್ಲಿ ದ್ವಿತೀಯ ಭಾಷೆ ಹೆಚ್ಚು ಪ್ರಚಲಿತದಲ್ಲಿದ್ದರು ಅದನ್ನು ಕಲಿಸುವ ಭಾಷಾ ಮಾಧ್ಯಮ ಮಾತೃಭಾಷೆಯೆ! ಇಲ್ಲಿವರೆಗಿನ ಬಹುಪಾಲು ಸಂಶೋಧನೆಗಳು 'ಪ್ರಥಮ ಭಾಷಾ ಕೌಶಲ್ಯಗಳು ಮಗುವಿನಲ್ಲಿ ವೃದ್ಧಿಸಿದಷ್ಟೂ ದ್ವಿತೀಯ ಭಾಷೆಯ ಕಲಿಕೆ ಉತ್ತಮಗೊಳ್ಳುತ್ತದೆ' ಎಂತಲೇ ಹೇಳುತ್ತವೆ. ಯಾಕೆಂದರೆ ದ್ವಿತೀಯ ಭಾಷೆಯ ಅರಿವು ಮತ್ತು ಭಾಷಾಜ್ಞಾನ ವಿಕಸನಗೊಳ್ಳುವುದೇ ಪ್ರಥಮ ಭಾಷೆಯಿಂದ. ಇದು ಕೆನಡಾದ ನರರೋಗತಜ್ಞ ವಿಲ್ಡರ್ ಫೆನ್‌ಫೀಲ್ಡ್ಸ್ ಪ್ರತಿಪಾದಿಸುವ '11 ಅಥವಾ 12 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳು ಕಲಿಯುವುದು ಸಾದೃಶ್ಯ (ಹೋಲಿಕೆ) ಮತ್ತು ಸಾಮಾನ್ಯೀಕರಣದ ಮೂಲಕವೇ' ಎಂಬ ವಾದಕ್ಕೆ ಪೂರಕವಾಗಿದೆ. ಇವೆರಡೂ ಜಿಮ್ ಕ್ಯುಮಿನ್ಸ್‌ನ 'ಮಿತಿ' (Threshold) ಸಿದ್ಧಾಂತಕ್ಕೆ ಅನುಗುಣವಾಗಿರುವುದನ್ನೂ ಇವಿಲ್ಲಿ ಪರಿಗಣಿಸಬಹುದು. ಈ ಸಿದ್ಧಾಂತದ ಪ್ರಕಾರ 'ದ್ವಿತೀಯ ಭಾಷೆಯ (ಈ ಸಂದರ್ಭದಲ್ಲಿ ಇಂಗ್ಲಿಷ್ ಎಂದುಕೊಳ್ಳೋಣ)ಯಲ್ಲಿ ಮಗು ನಿಗದಿತ ಕನಿಷ್ಠ ಪ್ರಾವೀಣ್ಯತೆ 'ಮಿತಿ'ಯನ್ನು ತಲುಪಿದ ನಂತರವಷ್ಟೆ ಆ ಭಾಷೆಯನ್ನು ಬೋಧನಾ ಮಾಧ್ಯಮವಾಗಿಸಿದಾಗ ಮಗು ಅದರ ಲಾಭ ಪಡೆದುಕೊಳ್ಳಬಹುದು'.

ಪರಿಹಾರ


ಇದೆಲ್ಲವನ್ನೂ ಕ್ರೋಢೀಕರಿಸಿ ನೋಡಿದಾಗ, ಪ್ರಾಥಮಿಕ ತರಗತಿಗಳಲ್ಲೆ ಇಂಗ್ಲಿಷ್ ಅನ್ನು ಬೋಧನಾ ಮಾಧ್ಯಮವಾಗಿ ಹೇರುವುದು ಸೂಕ್ತವಲ್ಲ, ಇಲ್ಲಿರುವ ಸಮಸ್ಯೆ ಮಾತೃಭಾಷೆ 'ವರ್ಸಸ್' ಇಂಗ್ಲಿಷ್ ಎಂಬುದಲ್ಲ; ಬದಲಾಗಿ, ತಾಯ್ನುಡಿಯಲ್ಲಿ ಭದ್ರ ಶೈಕ್ಷಣಿಕ ಅಡಿಪಾಯ ದೊರಕಿದರೆ ಮುಂದೆ ಇಂಗ್ಲಿಷ್ ಅನ್ನು ಉತ್ತಮವಾಗಿ ಮತ್ತು ವೇಗವಾಗಿ ಕಲಿತುಬಿಡಬಹುದೆನ್ನುವ ತರ್ಕ. ಈ ಸಮಸ್ಯೆಗೆ 'ತಾಯ್ನುಡಿ ಆಧಾರಿತ ದ್ವಿಭಾಷಿ' (Mother Tongue Based Bilingualism) ಮಾರ್ಗವೇ ಸೂಕ್ತ ಪರಿಹಾರವಾಗಬಲ್ಲದು. ತಾಯ್ನುಡಿ ಆಧಾರಿತ ದ್ವಿಭಾಷಿ ಮಾರ್ಗವು ಓದುವುದು ಮತ್ತು ಬರೆಯುವ ಕೌಶಲ್ಯಗಳನ್ನು ಕಲಿಸಲು ಮಕ್ಕಳ ಪ್ರಥಮ ಭಾಷೆಯನ್ನು (ಇಲ್ಲಿ ಕನ್ನಡ ಎಂದುಕೊಳ್ಳೋಣ) ಬಳಸಿಕೊಳ್ಳುತ್ತದೆ. ಪರಿಚಿತ ಭಾಷೆಯಿಂದ ಅಪರಿಚಿತ ಭಾಷೆಗೆ ಕೌಶಲ್ಯಗಳನ್ನು ಮಕ್ಕಳೇ ವರ್ಗಾಯಿಸಿಕೊಳ್ಳುವಂತೆ ದ್ವಿತೀಯ ಭಾಷೆಯನ್ನು (ಇಂಗ್ಲಿಷ್) ವ್ಯವಸ್ಥಿತವಾಗಿ ಕಲಿಸುತ್ತದೆ. ಈ ವಿಧಾನವು ಸಾಕ್ಷರ ಕೌಶಲ್ಯವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹಾಗೂ ತರಗತಿಗಳಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಿಕೆಯನ್ನೂ ಮಗುವಿಗೆ ಕಲಿಸುತ್ತದೆ. ಆದರೂ, ಈ ಬೋಧನಾ ಸುಧಾರಣೆಯನ್ನು ಅಳವಡಿಸಿಕೊಳ್ಳುವುದಕ್ಕೂ ಮುನ್ನ ಇದರ ಕುರಿತು ಅಧ್ಯಯನ ನಡೆಸಬೇಕಿದೆ.

ಆರಂಭಿಕ ಕಲಿಕೆಯಲ್ಲೆ ಇಂಗ್ಲಿಷನ್ನು ಬೋಧನಾ ಮಾಧ್ಯಮವನ್ನಾಗಿಸುವುದು ಮತ್ತು ಅದರ ಪರಿಣಾಮದ ಕುರಿತ ಸಮಸ್ಯೆಗಳನ್ನು ಬೃಹತ್ ಪ್ರಮಾಣದ ಅಧ್ಯಯನಕ್ಕೆ ಒಳಪಡಿಸಬೇಕಾದ ಜರೂರತ್ತಿದೆ. ನಮ್ಮ ಬಹಳಷ್ಟು ತರಗತಿ ಚಟುವಟಿಕೆಗಳು ಸಾಂಪ್ರದಾಯಿಕ ನಂಬಿಕೆ ಪ್ರೇರಿತ ಸಾಯಿಪಾಠಗಳೇ ಆಗಿವೆ. ಶೈಕ್ಷಣಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಜಾಗರೂಕತೆಯಿಂದ ಯೋಜಿಸಿದ ವ್ಯವಸ್ಥಿತ ಸಂಶೋಧನೆಗಳು ನಡೆಯಬೇಕು. ಅಂತಹ ಸಂಶೋಧನೆಗಳ ಕಾರ್ಯವಿಧಾನಗಳು ಅವಿಷ್ಕಾರಾತ್ಮಕ ಮತ್ತು ನಿರ್ಣಯಾತ್ಮಕವಾಗಿರಬೇಕು. ಹಾಗಾಗಿ ಕರ್ನಾಟಕ ಸರ್ಕಾರ ಈಗಿನಿಂದ ಶೈಕ್ಷಣಿಕ ಕ್ಷೇತ್ರದ ಸಂಶೋಧನೆಗಳನ್ನು ಬಲಪಡಿಸುವತ್ತ ಗಮನ ಹೆಚ್ಚಿಸಿ, ಶಿಕ್ಷಣ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಬೇಕಿದೆ.

■ ಮೂಲ: ಎಸ್. ಸುಕುಮಾರ್ ಗೌಡ
ಎಸ್‌ಎಸ್‌ಎಚ್‌ಆರ್‌ಸಿ, ಕೆನಡಾ
ಕನ್ನಡಕ್ಕೆ: ಗಿರೀಶ್ ತಾಳಿಕಟ್ಟೆ

ತೀರ್ಪಿನಿಂದ ಎಲ್ಲಾ ಭಾಷಾ ಸಮುದಾಯಗಳಿಗೂ ಅಪಾಯ ಎದುರಾಗಿದೆ: ಯುಆರ್‌ಎ

ಇತ್ತೀಚೆಗೆ ಸುಪ್ರೀಂಕೋರ್ಟಿನ ಸಂವಿಧಾನ ಪೀಠವು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮವನ್ನು ಸರ್ಕಾರ ಕಡ್ಡಾಯ ಮಾಡುವಂತಿಲ್ಲ ಎಂಬ ತೀರ್ಪು ನೀಡಿದ್ದು ಎಲ್ಲರಿಗೂ ಗೊತ್ತು. ಈ ಹಿನ್ನೆಲೆಯಲ್ಲಿ ಹಿರಿಯ ಸಾಹಿತಿ ಮತ್ತು ಚಿಂತಕ ಡಾ.ಯು.ಆರ್.ಅನಂತಮೂರ್ತಿಯವರನ್ನು ಪತ್ರಿಕೆಗಾಗಿ ಡಾ.ಬಸವರಾಜ್ ಕಲ್ಗುಡಿ ಮತ್ತು ಡಾ.ಎಂ.ಎಸ್.ಆಶಾದೇವಿ ಸಂದರ್ಶಿಸಿದರು. ಆ ಸಂದರ್ಶನ ಇಲ್ಲಿದೆ.



ಪ್ರಶ್ನೆ: ಸರ್ ಈಗ ಬಂದಿರುವ ಸುಪ್ರೀಂಕೋರ್ಟ್‌ನ ತೀರ್ಪಿನ ಪರಿಣಾಮಗಳು, ಅದನ್ನು ಎದುರಿಸುವ ದಾರಿಗಳು ಯಾವುವು?

ಯುಆರ್‌ಎ: ಈಗ ಬಂದಿರುವ ಭಾಷೆ ಮತ್ತು ಮಾಧ್ಯಮವನ್ನು ಕುರಿತ ಸುಪ್ರೀಂಕೋರ್ಟ್‌ನ ತೀರ್ಪು ಕೇವಲ ಕನ್ನಡ ಭಾಷೆಗೆ ಮಾತ್ರ ಸಂಬಂಧಿಸಿದ್ದಲ್ಲ. ಅದರ ಅಪಾಯಗಳು ಎಲ್ಲಾ ಪ್ರಾಂತೀಯ ಭಾಷೆ ಮತ್ತು ಸಂಸ್ಕೃತಿಗಳಿಗೂ ಹೊಡೆತ ಕೊಡುವಂಥದ್ದಾಗಿದೆ. ಪ್ರಾಂತೀಯ ಭಾಷೆಯನ್ನಾಡುವ ಬಹುಸಂಖ್ಯಾತ ಹಿಂದುಳಿದ ಮತ್ತು ಬಡ ಸಮುದಾಯಗಳೇನಿವೆ ಅವುಗಳ ಜ್ಞಾನದ ಭಾಗವೇ ಆಗಿರುವ ಮಾಧ್ಯಮವೊಂದಕ್ಕೆ ಎದುರಾಗಿರುವ ಅಪಾಯ ಇದು. ಇಂಥ ಬೆಳವಣಿಗೆಯಿಂದ ಅಲ್ಪಸಂಖ್ಯಾತವೆಂಬ ಹೆಸರಿನಲ್ಲಿ ಕಾರ್ಪೊರೇಟ್ ಶಕ್ತಿಗಳು, ಖಾಸಗೀ ಬಂಡವಾಳಶಾಹಿಗಳು ತಮ್ಮ ಲಾಭಕ್ಕಾಗಿ ಮಾಡುತ್ತಿರುವ ಈ ಹುನ್ನಾರವನ್ನು ನಾವು ಪರಿಣಾಮಕಾರಿಯಾಗಿ ತಡೆಯಬೇಕಾದ ಅಗತ್ಯವಿದೆ. ನನಗನ್ನಿಸೋದು, ಫೆಡರಲಿಸಂಅನ್ನು ನಾವು ನಿರ್ಲಕ್ಷಿಸಿದ್ದರ ಪರಿಣಾಮವಾಗಿ ಇಂಥ ಸಂದರ್ಭಗಳು ಸೃಷ್ಟಿಯಾಗಿವೆ ಅಂತ. ಜ್ಞಾನಸಂಬಂಧಿ ವಿಚಾರಗಳನ್ನು ನಾವು ಇವತ್ತು ಹೇಗೆ ನಿಭಾಯಿಸಬೇಕು ಅನ್ನುವುದೇ ನಮ್ಮೆದುರಿಗಿನ ದೊಡ್ಡ ಸವಾಲು.

ಇಂಥ ಸಂದರ್ಭದಲ್ಲಿ 'ಮಾತೃಭಾಷೆ'ಯ ಪರಿಕಲ್ಪನೆಯನ್ನೂ ನಾವು ಸ್ವಲ್ಪ ಬದಲಾಯಿಸಿಕೊಳ್ಳಬೇಕು ಅನಿಸುತ್ತೆ. ಫೆಡರಲಿಸಂನ ನಿಜವಾದ ಸಾಧ್ಯತೆ ಮತ್ತು ಶಕ್ತಿ ಇರೋದು ಒಬ್ಬ ವ್ಯಕ್ತಿಗೆ ಹಲವು ಮಾತೃಭಾಷೆಗಳು ಇರಲಿಕ್ಕೆ ಸಾಧ್ಯ ಅನ್ನುವುದರಲ್ಲಿ. ರಾಷ್ಟ್ರೀಯತೆ ಮತ್ತು ಫೆಡರಲಿಸಂಗಳು ಅರ್ಥಪೂರ್ಣವಾಗುವುದು ಮತ್ತು ಮುಖ್ಯವಾಗುವುದು ಈ ಕಾರಣಕ್ಕಾಗಿಯೇ. ಹಲವು ಭಾಷೆಗಳ 'ಒಕ್ಕೂಟ ರಾಜ್ಯ'ವೆಂಬ ಬುನಾದಿಯಿಂದ ರೂಪುಗೊಂಡ ಭಾರತ ಈ ಫೆಡರಲ್ ರಚನೆಯನ್ನು ಬಲಿಷ್ಠಗೊಳಿಸುವ ವಾತಾವರಣವನ್ನು ನಿರ್ಮಾಣ ಮಾಡುವಂತೆ ಒತ್ತಾಯ ಮಾಡಬೇಕಾದ ತುರ್ತು ಈಗ ನಮ್ಮ ಮುಂದೆ ಇದೆ. ಕರ್ನಾಟಕದಲ್ಲಿ ಕನ್ನಡವು ಶಿಕ್ಷಣ ಮಾಧ್ಯಮದ ಭಾಷೆ ಆಗಿಯೇ ಉಳಿದು, ಭಾಷಿಕ ರಾಜ್ಯಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳು ಅಂಥ ಸಂದರ್ಭದಲ್ಲಿ ಅಲ್ಲಿರುವ ವಿಭಿನ್ನ ಮಾತೃಭಾಷಿಕರಿಗೆ ಅವರ ಭಾಷೆಯನ್ನು ಮೊದಲ ಭಾಷೆಯಾಗಿ ಕಲಿಯುವ ಅವಕಾಶ ಮಾಡಿಕೊಡಬೇಕು.

ಇಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯಿದೆ. ವಸಾಹತುಶಾಹಿಯ ಪರಿಣಾಮವಾಗಿ, ಶಿಕ್ಷಣದಲ್ಲಿ ಪಶ್ಚಿಮಪ್ರಣೀತ ಜ್ಞಾನ ಮಾದರಿಯೇ ಪ್ರಮಾಣಬದ್ಧ ಮಾನದಂಡವೆಂದು ನಾವು ತಿಳಿದುಬಿಟ್ಟಿದ್ದೇವೆ. ಇದರ ಪರಿಣಾಮವೆಂದರೆ ನಮ್ಮ ಭಾಷೆಗಳು ಕ್ರಮೇಣ ಜ್ಞಾನದ ಸೃಷ್ಟಿಯ ಭಾಷೆಗಳಾಗುವುದರಿಂದ ದೂರ ಸರಿಯುತ್ತಾ ಕೇವಲ ಜ್ಞಾನದ ಸಂವಹನೆಯ ಮಾಧ್ಯಮಗಳಾಗಿಬಿಟ್ಟಿವೆ. ಇದೊಂದು ಮೂಲಭೂತವಾದ ಸಂಗತಿ. ಏಕೆಂದರೆ, ಇದು ಹೀಗೇ ಮುಂದುವರಿದುಬಿಟ್ಟರೆ ಕ್ರಮೇಣ ಪ್ರಾಂತೀಯ ಭಾಷೆಗಳು ಅಪ್ರಸ್ತುತವೇ ಆಗಿಬಿಡುತ್ತವೆ. ಭಾಷೆಯೊಂದು ತನ್ನ ಅಸ್ತಿತ್ವ, ಜೀವಂತಿಕೆಯನ್ನು ಉಳಿಸಿಕೊಳ್ಳುವುದೇ ಅದು ಜ್ಞಾನಸೃಷ್ಟಿಯ ಭಾಷೆಯಾಗುವ ಮೂಲಕ. ನನ್ನ ಯೋಚನೆಯಲ್ಲಿ ಕನ್ನಡವು ಜ್ಞಾನಸೃಷ್ಟಿಯ ಮತ್ತು ಸಂವಹನದ, ಎರಡೂ ನೆಲೆಗಳ ಭಾಷೆಯಾಗಬೇಕು. ಅಂಥ ವಾತಾವರಣ ಶಿಕ್ಷಣದಲ್ಲಿ ಸಾಧಿತವಾಗಬೇಕು.

ಪ್ರಶ್ನೆ: ಅಂದರೆ, ಇಂಥ ತೀರ್ಮಾನಗಳು ರಾಜಕೀಯ ಇಚ್ಛಾಶಕ್ತಿಯಿಂದ ಮತ್ತು ಕ್ರಿಯಾ ಯೋಜನೆಗಳಿಂದ ಮಾತ್ರ ರೂಪುಗೊಳ್ಳುವುದಕ್ಕೆ ಸಾಧ್ಯ ಅಲ್ಲವೆ?

ಯುಆರ್‌ಎ: ಫೆಡರಲಿಸಂ ಅಂದರೆ ಬೇರೆಯಾಗುವ ಮಾತುಗಳು ಅನ್ನುವ ಅರ್ಥದ ಮಾತುಗಳು ಮೊನ್ನೆಯ ಮುಖ್ಯಮಂತ್ರಿಗಳ ಸಭೆಯಲ್ಲಿ ಹಾದುಹೋದವು. ನೇರವಾಗಿ ಮಾತನಾಡುವ ಹಾಗಿಲ್ಲದಿದ್ದರೂ ಅಂಥ ಒಂದು ಅಭಿಪ್ರಾಯ, ಭಾಷೆಗೆ ಸಂಬಂಧಿಸಿದ ತೀರ್ಪಿನ ವಿರುದ್ಧ ತಳೆಯುವ ಒಂದು ನಿಲುವಿನ ಒಂದು ಸಣ್ಣ ಭಾಗವೂ ಆಗಿತ್ತು.

ಈ ರೀತಿಯ ಮಾತುಗಳನ್ನು ನೆಹರೂ ಯುಗದಲ್ಲಿ ಧೈರ್ಯವಾಗಿ ಆಡಬಹುದಾದ ವಾತಾವರಣ ಇತ್ತು. ಆ ಕಾಲದಲ್ಲಿ ತಮಿಳುನಾಡಿನ ಅಣ್ಣಾ ದೊರೈ ರಾಜ್ಯಸಭೆಯ ಸದಸ್ಯರಾಗಿದ್ದವರು, ತಮಿಳುನಾಡು ಸ್ವತಂತ್ರವಾಗಬೇಕು ಅನ್ನುವ ಮಾತನ್ನು ಪದೇಪದೇ ಆಡುತ್ತಿದ್ದರು. ಆದರೆ ಚೀನಿ ಆಕ್ರಮಣದ ನಂತರ ಈ ಮಾತುಗಳನ್ನು ನಿಲ್ಲಿಸಿಬಿಟ್ಟರು.

ಸಹಮತದಿಂದಲೇ ನಾವು ಭಾರತದ ಭಾಗವಾಗಿರುವುದರಿಂದ ನಾವು ಈಗ ಹೀಗೆ ಮಾತನಾಡುವುದು ಅಪರಾಧ. ಆದರೆ ತಮಿಳುನಾಡು ರಾಷ್ಟ್ರೀಯತೆಯ ಜೊತೆಗೆ ಪ್ರಾಂತೀಯತೆಯ ಸಂಬಂಧವನ್ನು ಪರಿಣಾಮಕಾರಿಯಾಗಿ ತಮಿಳು ಭಾಷೆ ಮತ್ತು ಸಮುದಾಯದ ಲಾಭಕ್ಕಾಗಿ ಪರಿವರ್ತಿಸಿಕೊಂಡಿರುವುದು ನಾವು ನಿಜಕ್ಕೂ ಗಮನಿಸಬೇಕಾದ ಅಂಶ.

ರಾಜಾಜಿಯವರು ತಮಿಳಿನ ವಿಶಿಷ್ಟತೆಯನ್ನು ಭಾರತದ ಸಂದರ್ಭದಲ್ಲಿ ನೋಡಿದ್ದು ಒಂದರ್ಥದಲ್ಲಿ ಭಾವನಾತ್ಮಕ ನೆಲೆಯಿಂದ ಕೂಡಿತ್ತು, ಮೇಲುಜಾತಿಯ ತಮಿಳರಿಗೆ ಈ ಸಂಬಂಧ ಸಂಸ್ಕೃತಿಯ ನೆಲೆಯಿಂದ ಹುಟ್ಟಿದ ಸಂದರ್ಭವಾಗಿರಬೇಕು. ಆದರೆ ಮಧ್ಯ ಜಾತಿಗಳಿಗೆ ಈ ಸಂಬಂಧವು ರಾಜಕೀಯ, ಆರ್ಥಿಕ ದೃಷ್ಟಿಯಿಂದ ಒಂದು ಬಹು ಉಪಯುಕ್ತ ಸಂಬಂಧವಾಗಿ ಪರಿಣಮಿಸಿತು. ಇತ್ತೀಚಿನ ಕೇಂದ್ರ ರಾಜಕಾರಣದ ಸಂದರ್ಭದವರೆಗೂ ತಮಿಳು ಭಾಷಿಕರು ಸಾಧಿಸಿದ್ದ ಹಿಡಿತ ಮತ್ತು ತಮಿಳು ಭಾಷೆಗೆ ಅದರಿಂದ ದಕ್ಕಿದ ಲಾಭಗಳ ಬಗ್ಗೆ ಪ್ರಜ್ಞಾಪೂರ್ವಕವಾಗಿ ಅವರು ಕೆಲಸ ಮಾಡುತ್ತಿದ್ದ ರೀತಿಯನ್ನು ನಾವು ನೋಡಬಹುದು. ತಮಿಳುನಾಡು ತನಗೆ ಬೇಕಾದುದೆಲ್ಲವನ್ನೂ ಪಡೆದದ್ದು ಹೀಗೆ.

ಕರ್ನಾಟಕದ ಚಿತ್ರವೇ ಬೇರೆ.-ಪ್ರಾದೇಶಿಕ ಆಯಾಮ ಬಹುಮುಖ್ಯವೆಂದು ನಮ್ಮಲ್ಲಿ ಬಹುಪಾಲು ರಾಜಕಾರಣಿಗಳು ತಿಳಿಯಲೇ ಇಲ್ಲ. ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಹಿಂದಿಗೆ ಪ್ರಾಶಸ್ತ್ಯ ಕೊಡುವುದರ ಬಗ್ಗೆ ಯೋಚಿಸುತ್ತಿದ್ದರು. ಬಹುಶಃ ಹಿಂದಿ-ಕನ್ನಡ ಬಾಂಧವ್ಯದಲ್ಲಿ ಹೊಸ ಬದುಕು ಕಟ್ಟಲು ಸಾಧ್ಯವೆಂದು ಅವರು ತಿಳಿದಿದ್ದರೋ ಏನೋ.. ಹಾಗೆ ನೋಡಿದರೆ ಹಿಂದಿಯೂ ಸಾಮಾನ್ಯರ ಭಾಷೆಯೆ. ಹಿಂದಿಯನ್ನು ನಾನು ಕಲಿತಿದ್ದರೆ ಸಾಮಾನ್ಯರ ಜೊತೆ ಇನ್ನೆಷ್ಟೋ ಮಾತುಗಳನ್ನು ನಾನು ಆಡಬಹುದಾಗಿತ್ತಲ್ಲ ಎಂದು ಈಗಲೂ ನನಗೆ ಅನಿಸುವುದಿದೆ.

ಆದರೆ ಗಮನಿಸಬೇಕಾದ ಅಂಶವೆಂದರೆ ನಮ್ಮಲ್ಲಿ ಭಾರತ ಬಹು ಜನರಿಗೆ ನಿಜ. ಆದರೆ ಅದರಲ್ಲಿ ಕನ್ನಡಕ್ಕೆ ಜಾಗವಿಲ್ಲದಿದ್ದರೆ ಅದು ನಾನು ಒಪ್ಪುವ ಭಾರತ ಅಲ್ಲ. ಈಗ ಆಳುವ ಪಕ್ಷಗಳು - ಅದು ಬಿಜೆಪಿಯೆ ಇರಲಿ, ಕಾಂಗ್ರೆಸ್ಸೇ ಆಗಿರಲಿ - ಹೀಗೆ ಯೋಚನೆ ಮಾಡುತ್ತಲೇ ಇಲ್ಲ, ಇದೊಂದು ದುರಂತವೆಂದೇ ನಾನು ಹೇಳುತ್ತೇನೆ. ನಮ್ಮ ರಾಜಕಾರಣಿಗಳು ಬಹುಮುಖ್ಯ ಸ್ಥಾನದಲ್ಲಿ ಇದ್ದಾಗಲೂ ಕನ್ನಡದಲ್ಲಿ ಮಾತನಾಡುವ ಜವಾಬ್ದಾರಿಯನ್ನು ಕಳೆದುಕೊಂಡರು. ನಮ್ಮ ರಾಜಕಾರಣಿಗಳಲ್ಲೆಲ್ಲ ಅಪವಾದವಾಗಿದ್ದವರು ಪಟೇಲ್ ಒಬ್ಬರೆ. ಅವರು ಪಾರ್ಲಿಮೆಂಟಿನಲ್ಲಿ ಕನ್ನಡದಲ್ಲಿ ಮಾತನಾಡಲು ಲೋಹಿಯಾ ಅವರ ದಟ್ಟ ಪ್ರಭಾವ, ಪ್ರೇರಣೆ ಇತ್ತು.


ಎಲ್ಲ ಪ್ರಾಂತ ಭಾಷೆಗಳೂ ಸಾರ್ವಭೌಮವಾಗಿ, ಭಾಷಾಂತರದ ಕೆಲಸವು ಬಲು ವಿಸ್ತಾರವಾಗಿ ಆಗಬೇಕು ಎಂದು ನನಗೆ ಅನಿಸುತ್ತದೆ. ಭಾಷಾಂತರದ ಒಂದು ವಲಯವೇ ನಿರ್ಮಾಣವಾಗಬೇಕು. ಹಲವು ಪ್ರಾಂತ್ಯಗಳ ರಾಷ್ಟ್ರ ಎನ್ನುವುದು ನಿಜವಾಗಬೇಕಾದರೆ ಭಾಷಾಂತರ ಸೌಲಭ್ಯ ಇರಬೇಕಾಗುವುದು ಅನಿವಾರ್ಯ. ಕನ್ನಡದಲ್ಲಿ ಜ್ಞಾನಸಂಬಂಧಿ ವಿಷಯವನ್ನು ಮಾತನಾಡುವವರನ್ನು ಭಾಷಾಂತರಿಸುವ ಅವಕಾಶಗಳಿರಬೇಕು. ಕನ್ನಡದವರು ಇತರೆಡೆಗೆ ಹೋದಾಗಲೂ ಅವರು ತಮ್ಮ ಭಾಷೆಯಲ್ಲೇ ಮಾತನಾಡುವ ಸೌಲಭ್ಯಗಳು ಒದಗಬೇಕು.


ನಮ್ಮಲ್ಲಿ ಸ್ವಾತಂತ್ರ್ಯಾನಂತರ ಪ್ರಾಂತೀಯ ಭಾಷೆಗಳ ನಡುವಣ ಸಂಬಂಧ ಹೆಚ್ಚು ಕುಂಠಿತಗೊಂಡಿದೆ. ಒಂದು ಭಾಷೆಯನ್ನು ಇನ್ನೊಂದು ಭಾಷೆಯೊಂದಿಗೆ ವೈರತ್ವ ಹೊಂದಿರುವ ಭಾವನೆಯಿಂದ ನೋಡುವುದೇ ಹೆಚ್ಚು. ಇಂಥ ವಾತಾವರಣ ಹೋಗಿ ಒಂದು ಕೊಡುಕೊಳ್ಳುವಿಕೆಯ ಸಂಬಂಧದ ವಾತಾವರಣ ನಿರ್ಮಾಣವಾಗಬೇಕು. ಪಶ್ಚಿಮದ ವಿಜ್ಞಾನವು ತರ್ಕದಾಚೆಗಿನದನ್ನು ಕಾಣುವುದರಲ್ಲಿನ ತನ್ನ ಸೋಲನ್ನು ಒಪ್ಪಿಕೊಂಡಿದೆ. ಆ ಸಂಸ್ಕೃತಿಯ ಜ್ಞಾನವಲಯಕ್ಕಿದ್ದ ಗುಣ, ಮಿತಿ ಅದು. ಆದರೆ ನಮ್ಮ ಜ್ಞಾನ ಸೃಷ್ಟಿ ಮೂಲತಃ ತರ್ಕದ ಆಚೆಗಿನದನ್ನು ಬೋಧಿಸುವ ಪ್ರಯತ್ನ ಮಾಡುವಂಥದ್ದಾಗಿತ್ತು. ಅಂಥ ಕೊಂಡಿಗಳನ್ನು ಹುಡುಕಿ ಜೋಡಿಸುವ ಕೆಲಸವು ಈಗ ಅತಿ ಮುಖ್ಯ. ■

‘ಕರ’ನಾಟಕದಲ್ಲಿ ಕುಸಿದ ಕೈ

ಜಾತಿ, ಜೆಡಿಎಸ್, ಜಗಳ: ಬಿಜೆಪಿಯದ್ದು ‘ಸಮ್ಮಿಶ್ರ’ ಗೆಲುವು

ಅಂತೂಇಂತೂ ಮಹಾಸಮರದ ಜನಾದೇಶ ಹೊರಬಿದ್ದಿದೆ. ಕಾರ್ಪೋರೇಟ್ ಕೃಪಾಪೋಷಿತ ಮಾಧ್ಯಮ ಘೋಷಿತ ‘ಮೋದಿ ಅಲೆ’ ಬಿಜೆಪಿಗೆ ವರ್ಕ್‌ಔಟ್ ಆಗಿದೆ. 1984ರ ನಂತರ ಸಿಂಗಲ್ ಲಾರ್ಜೆಸ್ಟ್ ಪಾರ್ಟಿಯಾಗಿ ಸರಳ ಬಹುಮತ ಗಿಟ್ಟಿಸಿಕೊಂಡಿರುವ ಬಿಜೆಪಿ ‘ಏಕಪಕ್ಷ ಅಧಿಕಾರ’ ಇನ್ನು ಅಪ್ರಸ್ತುತ ಎನ್ನುವ ವಾದವನ್ನೇ ಸುಳ್ಳಾಗಿಸಿದೆ. ಇದೆಲ್ಲಾ ಹಠಾತ್ತನೆ ಆದದ್ದಲ್ಲ, ಆರೆಸ್ಸೆಸ್‌ನ ಕಾರ್ಯತಂತ್ರದಿಂದ ಹಿಡಿದು ಅಂಬಾನಿಗಳ ಹಣದವರೆಗೆ ಇಲ್ಲಿ ಎಲ್ಲವೂ ಕೆಲಸ ಮಾಡಿರುವುದು ಸತ್ಯ. ಜೊತೆಗೆ ಪ್ರಮುಖ ಪ್ರತಿಸ್ಪರ್ಧಿಯಾಗಬಹುದಿದ್ದ ಕಾಂಗ್ರೆಸ್‌ನ ಸ್ವಯಂಕೃತ ಹೊಣೆಗೇಡಿತನಗಳೂ ಬಿಜೆಪಿ ಗೆಲುವಿಗೆ ಸಾಥ್ ನೀಡಿರುವುದು ಅಷ್ಟೇ






ಸತ್ಯ. ಗೆಲುವು ಮತ್ತು ಅಧಿಕಾರಕ್ಕಾಗಿ ತಹತಹಿಸುತ್ತಿದ್ದ ಬಿಜೆಪಿ ಈ ಸಲ ತನ್ನ ‘ಹಾರ್ಡ್ ಅಜೆಂಡಾ’ಗಳನ್ನು ಪಕ್ಕಕ್ಕಿಟ್ಟಂತೆ ನಟಿಸಿ ‘ಗುಜರಾತ್ ಮಾದರಿ’ಯಂತಹ ಮಿಥ್ಯಾತಿಮಿಥ್ಯ ಅಭಿವೃದ್ಧಿಯನ್ನು ಬತ್ತಳಿಕೆಯಲ್ಲಿ ಸೇರಿಸಿಕೊಂಡದ್ದೂ ಅಂತಹ ಕಾರ್ಯತಂತ್ರಗಳಲ್ಲಿ ಒಂದು. ಉತ್ತರ ಪ್ರದೇಶದಂತಹ ನಿರ್ಣಾಯಕ ಹಾಗೂ ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ಮಣೆ ಹಾಕದ ರಾಜ್ಯದಲ್ಲೂ 70 ಕ್ಕೂ ಹೆಚ್ಚು ಸೀಟುಗಳನ್ನು ಬಿಜೆಪಿ ಗೆಲ್ಲುವಂತಾಗಿದೆಯೆಂದರೆ ಅಲ್ಲಿ ಒನ್ಸ್ ಎಗೇನ್ ಮೋದಿ ಅಲೆಯೇ ಕಾರಣ. ಇದು ಉತ್ತರ ಪ್ರದೇಶಕ್ಕೆ ಮಾತ್ರ ಸೀಮಿತವಾದದ್ದಲ್ಲ, ಅದೇರೀತಿ ಕರ್ನಾಟಕವೂ ಇದರಿಂದ ಹೊರಗುಳಿಯುವಂತೇನೂ ಇಲ್ಲ. ಆದರೆ ಉತ್ತರ ಭಾರತದ ಕೆಲ ರಾಜ್ಯಗಳಲ್ಲಿ ಆದಂತೆ ಅದರ ಪ್ರಭಾವ ಕರ್ನಾಟಕದಲ್ಲಿ ತನ್ನ ಸಂಪೂರ್ಣ ಪ್ರಭಾವ ತೋರಿಸುವಲ್ಲಿ ವಿಫಲವಾಗಿರುವುದಂತೂ ಸತ್ಯ.


ಕರ್ನಾಟಕದ ಮಟ್ಟಿಗೆ ಅಂಕಿಅಂಶಗಳನ್ನಷ್ಟೇ ಗಮನಿಸುವುದಾದರೆ ಬಿಜೆಪಿ ಭರ್ಜರಿ ಗೆಲುವು ದಾಖಲಿಸಿರುವಂತೆ ಕಂಡುಬರಬಹುದು. ಆದರೆ ಆ ಗೆಲುವು ಕೇವಲ ಬಿಜೆಪಿಯದ್ದೂ ಅಲ್ಲ ಅಥವಾ ಮಾಧ್ಯಮಗಳು ಬಿಂಬಿಸುತ್ತಿರುವಂತೆ ‘ಭರ್ಜರಿ’ಯಾದದ್ದೂ ಅಲ್ಲ. ಅಷ್ಟೇ ಅಲ್ಲ ‘ಮೋದಿ ಅಲೆ’ಯೂ ಅಲ್ಲ, ಕೈ ಪಕ್ಷದವರ ಕಾಲೆಳೆಯುವ ಆಟ, ತೆನೆಹೊತ್ತವರ ಒಳ‘ಮೈತ್ರಿ’, ಬಿಎಸ್‌ವೈ-ರಾಮುಲು ವಾಪಾಸಾತಿ, ಜಾತಿ ರಾಜಕಾರಣ ಇಂತಹ ಮೋದಿ ಅಲೆಯೇತರ ಅಂಶಗಳೂ ಸಹ ಬಿಜೆಪಿಯನ್ನು ಗೆಲ್ಲಿಸಿರೋದು ವಾಸ್ತವ. ಹಾಗೊಮ್ಮೆ ಕೇವಲ ಮೋದಿ ಅಲೆ ಎನ್ನುವಂತದ್ದೇನಾದರು ಮಾತ್ರ ಕರ್ನಾಟಕದಲ್ಲಿ ಇದ್ದಿದ್ದರೆ ‘ಕ್ಲೀನ್ ಸ್ವೀಪ್’ ಕಮಲದ ಮುಡಿಗೇರಬೇಕಿತ್ತು. ಉದಾಹರಣೆಗೆ ಉತ್ತರ ಪ್ರದೇಶವನ್ನೇ ತೆಗೆದುಕೊಳ್ಳುವುದಾದರು ಅಲ್ಲಿ ಕರ್ನಾಟಕಕ್ಕಿಂತ ಭಿನ್ನ ವಾತಾವರಣವೇನೂ ಇಲ್ಲ, ಯಾಕೆಂದರೆ ಕರ್ನಾಟಕಕ್ಕೂ ಒಂದು ವರ್ಷ ಮುಂಚೆಯಷ್ಟೆ ಅಲ್ಲಿ ವಿಧಾನಸಭಾ ಚುನಾವಣೆ ನಡೆದಿತ್ತು, ಆಗ ಒಟ್ಟು 403 ಸ್ಥಾನಗಳಲ್ಲಿ ಮುಲಾಯಂ ಸಿಂಗ್ ಯಾದವ್‌ರ ಸಮಾಜವಾದಿ ಪಾರ್ಟಿ 224 ಸ್ಥಾನಗಳಲ್ಲಿ ಜಯಭೇರಿ ಬಾರಿಸಿ ಅಧಿಕಾರಕ್ಕೇರಿತ್ತು, ಅಲ್ಲಿ ಬಿಜೆಪಿಗೆ ದಕ್ಕಿದ್ದು ಕೇವಲ 47 ಸ್ಥಾನಗಳು ಮಾತ್ರ. ಸಿಎಂ ಅಖಿಲೇಶ್ ಯಾದವ್ ಮುಂದಿರುವ ಮಹಾಸಮರ ಕಾರಣಕ್ಕಾಗಿ ಕಳಂಕರಹಿತ ಆಡಳಿತವನ್ನೇ ನೀಡುತ್ತಾ ಬಂದಿದ್ದರು. ಹೇಳಿಕೊಳ್ಳುವಂತಹ ಆಡಳಿತ ವಿರೋಧಿ ಅಲೆಯೂ ಇರಲಿಲ್ಲ, ಆದರೆ ಲೋಕಸಭೆ ಚುನಾವಣೆಯಲ್ಲಿ ಅವೆಲ್ಲಾ ಸೀಟ್‌ಗಳಾಗಿ ಪರಿವರ್ತನೆಯಾಗಲಿಲ್ಲ, 80 ಎಂಪಿ ಸ್ಥಾನಗಳಲ್ಲಿ ಎಸ್‌ಪಿ ಎರಡಂಕಿಯನ್ನು ಮುಟ್ಟಲೂ ವಿಫಲವಾಗಿದೆ. ಅಷ್ಟಕ್ಕೂ, 2009ರ ಎಲೆಕ್ಷನ್‌ನಲ್ಲಿ ಇದೇ ಎಸ್‌ಪಿ 22 ಸ್ಥಾನಗಳಲ್ಲಿ ಜಯಗಳಿಸಿತ್ತು, ಇದೂ ಸಹಾ ಮಾಧ್ಯಮಗಳು ಬಿಂಬಿಸುತ್ತಿರುವಂತೆ ಕೇವಲ ಮೋದಿ ಅಲೆಯ ಪರಿಣಾಮವೇನಲ್ಲ, ಮುಜಾಫರ್‌ನಗರದ ಗಲಭೆಯಂತಹ ‘ಕೋಮು’ಪ್ರೇರಿತ ಪ್ರಚಾರ ಹಾಗೂ ಒಳಪಂಗಡದ ಆಧಾರದಲ್ಲಿ ದಲಿತ ಮತಗಳನ್ನು ‘ಕೋಮು’ಮತಗಳನ್ನಾಗಿ ಧ್ರುವೀಕರಿಸಿದ ಆರೆಸ್ಸೆಸ್‌ನ ತಂತ್ರಗಳೇ ಇದರ ಮೂಲ ಬಂಡವಾಳ. ಮೋದಿ ಅಲೆಯೆಂದರೆ ಇದೇ. ಅದೇನೆ ಇರಲಿ, ಕರ್ನಾಟಕದಲ್ಲೂ ಆ ಮೋದಿ ಅಲೆ ಕೆಲಸ ಮಾಡಿದ್ದೇ ಆದರೆ ಅಖಿಲೇಶ್ ಯಾದವ್ ಸರ್ಕಾರಕ್ಕೆ ಆದ ಗತಿಯೇ ಸಿದ್ದರಾಮಯ್ಯನ ಸರ್ಕಾರಕ್ಕೂ ಆಗಬೇಕಿತ್ತು, ಅದಕ್ಕೆ ಈಗಾಗಲೇ ತಿಳಿಸಿರುವಂತೆ ಹಲವಾರು ಕಾರಣಗಳಿವೆ. ಅವುಗಳನ್ನೊಮ್ಮೆ ಕೂಲಂಕಷವಾಗಿ ಚರ್ಚಿಸೋಣ.

ಬಿಎಸ್‌ವೈ-ಬಿಎಸ್‌ಆರ್ ವಾಪಸಾತಿ


ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮಕಾಡೆ ಮಲಗಿದ್ದು ಭ್ರಷ್ಟಾಚಾರ ಹಗರಣಗಳಿಂದ ಎಂಬುದು ಎಷ್ಟು ಸತ್ಯವೋ ಆ ಪಕ್ಷ ಆಂತರಿಕ ಕಚ್ಚಾಟದಿಂದ ಛಿದ್ರವಾದ ಕಾರಣದಿಂದ ಎನ್ನುವುದೂ ಅಷ್ಟೇ ಸತ್ಯ. ಲಿಂಗಾಯತ ಮತಗಳ ಬ್ರ್ಯಾಂಡ್ ಅಂಬಾಸಿಡರ್‌ನಂತಿದ್ದ ಯಡಿಯೂರಪ್ಪ ಬಿಜೆಪಿಯಿಂದ ಹೊರಬಂದು ಕೆಜೆಪಿ ಕಟ್ಟಿದ್ದು ಮಾತೃಪಕ್ಷಕ್ಕೆ ಭಾರೀ ಹೊಡೆತವನ್ನೇ ನೀಡಿತ್ತು, ಉತ್ತರ ಕರ್ನಾಟಕದ ಲಿಂಗಾಯತ ಮತಗಳು ಈಗಲೂ ಯಡ್ಡಿ ಹದ್ದುಬಸ್ತಿನಲ್ಲಿರೋದು ರಹಸ್ಯವಾಗೇನೂ ಉಳಿದಿಲ್ಲ, ಅಂತಹ ಯಡ್ಡಿ ಕಳೆದ ಎಂಎಲ್‌ಎ ಎಲೆಕ್ಷನ್‌ನಲ್ಲಿ ಕೇವಲ ಆರು ಸೀಟು ಮಾತ್ರ ಗಳಿಸಿದ್ದರೂ ಕೆಜೆಪಿಯ ಮತಗಳಿಕೆ 9.8% ನಷ್ಟಿತ್ತು, ಅದೇರೀತಿ ಬಳ್ಳಾರಿ ರಾಮುಲುನ ಬಿಎಸ್‌ಆರ್ ಕಾಂಗ್ರೆಸ್ ಆ ಚುನಾವಣೆಯಲ್ಲಿ 2.7% ಮತಗಳನ್ನು ತನ್ನತ್ತ ಸೆಳೆದುಕೊಂಡಿತ್ತು, ಇವೆಲ್ಲಾ ಬಿಜೆಪಿ ಮತಗಳು ಎಂಬುದನ್ನು ಒತ್ತಿ ಹೇಳುವ ಅಗತ್ಯವಿಲ್ಲ. ಆಗ ಬಿಜೆಪಿ ಮತ ಗಳಿಕೆ 19.9% ನಷ್ಟಿತ್ತು, ಬೃಹತ್ತಾಗಿ ಎದ್ದಿದ್ದ ಆಡಳಿತ ವಿರೋಧಿ ಅಲೆಯ ಹೊರತಾಗಿಯೂ ಬಿಜೆಪಿ ಮತ್ತದರ ಅಂಗಪಕ್ಷಗಳೆಲ್ಲ ಸೇರಿ ಪಡೆದುಕೊಂಡದ್ದು 32.4% ಮತಗಳನ್ನು, ಈಗ ಅಧಿಕಾರದಲ್ಲಿರುವ ಕಾಂಗ್ರೆಸ್‌ನ ಮತಗಳಿಕೆಯಾದರು ಹೆಚ್ಚೇನು ಇರಲಿಲ್ಲ, ಬಿಜೆಪಿ+ಕೆಜೆಪಿ+ಬಿಎಸ್‌ಆರ್‌ಗಿಂತ 2% ಜಾಸ್ತಿ ಇತ್ತು.

ಹೊರಬಂದ ಬಿಎಸ್‌ವೈ ಮತ್ತು ರಾಮುಲು ಮರಳಿ ಬಿಜೆಪಿಗೆ ವಾಪಾಸಾಗಿದ್ದು ಈ ಲೋಕಸಭಾ ಚುನಾವಣೆಯಲ್ಲಿ ಆ ಮತಗಳನ್ನೆಲ್ಲಾ ಒಟ್ಟುಗೂಡಿಸಿವೆ. ಜಾತಿ ಲೆಕ್ಕಾಚಾರದಲ್ಲಿ ಲಿಂಗಾಯತ ಮತ್ತು ವಾಲ್ಮೀಕಿ ಜನಾಂಗದ ಮತಗಳು ಬಿಜೆಪಿಯ ಮಡಿಲು ಸೇರುವಲ್ಲಿ ಇದು ಮಹತ್ವದ ಕಾರಣ. ಇದರಿಂದ ಸಹಜವಾಗೇ ಬಿಜೆಪಿ ಮತಗಳಿಕೆ ಹೆಚ್ಚಾಗಿದೆ. ಇದರಲ್ಲಿ ಅಚ್ಚರಿ ಎನ್ನುವಂತದ್ದೇನೂ ಇಲ್ಲ, ಹಾಗೆ ನೋಡಿದರೆ ದೇಶಾದ್ಯಂತ ಬಿಂಬಿತವಾಗುತ್ತಿರುವಂತೆ ‘ಮೋದಿ ಹವಾ’ದಲ್ಲಿ ಬಿಜೆಪಿಯವರು ಈ ಅಂಶಗಳನ್ನು ಪರಿಗಣಿಸಿದರೆ ಇನ್ನೂ ಹೆಚ್ಚಿನ ಸ್ಥಾನ ಗಳಿಸಬೇಕಿತ್ತು, ಆದರೆ ಕಳೆದ ಬಾರಿಗಿಂತ 2 ಕಡಿಮೆ ಸ್ಥಾನದಲ್ಲಿ ಗೆದ್ದಿದ್ದಾರೆ (2009ರಲ್ಲಿ ಬಿಜೆಪಿ 19










ಸ್ಥಾನಗಳಲ್ಲಿ ಜಯಿಸಿತು).

ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಲೇಬೇಕು. ಏನೆಂದರೆ ಈ ಬಾರಿ ರಾಜ್ಯದಲ್ಲಿ ಬಿಜೆಪಿಯ ಮತಗಳಿಕೆ 42.7% ಇದೆ. 2009ರಲ್ಲಿ ಆ ಪಕ್ಷದ ಮತಗಳಿಕೆ 41.63% ಇತ್ತು, ಕೇಂದ್ರ ಸರ್ಕಾರ ಆಡಳಿತ ವಿರೋಧಿ ಅಲೆ, ಬಿಂಬಿತ ಮೋದಿ ಅಲೆಯ ಹೊರತಾಗಿಯೂ ಬಿಜೆಪಿ ತನ್ನ ಮತಗಳಿಕೆಯನ್ನು ಕಳೆದ ಬಾರಿಗಿಂತ 1.07% ಮಾತ್ರ ಹೆಚ್ಚಿಸಿಕೊಂಡಿದೆ. ಇನ್ನು ಕಾಂಗ್ರೆಸ್ 2009ರಲ್ಲಿ 37.65% ಮತ ಗಳಿಸಿಕೊಂಡಿದ್ದರೆ ಈ ಬಾರಿ ಅದರ ಪ್ರಮಾಣ 40.09%. ಅಲ್ಲಿಗೆ 2.45%ನಷ್ಟು ಏರಿಕೆ ಕಂಡಿದೆ. ಮತಗಳಿಕೆ ವಿಚಾರದಲ್ಲಿ ಬಿಜೆಪಿಗಿಂತ ಕಾಂಗ್ರೆಸ್ಸೇ ಸುಧಾರಣೆ ಕಂಡಿರುವುದು ಇದರಿಂದ ದೃಢಪಡುತ್ತದೆ. ಈ ಸಲದ ಬಿಜೆಪಿ ಮತ್ತು ಕಾಂಗ್ರೆಸ್ ಮತಗಳಿಕೆಯ ನಡುವೆ ಭಾರೀ ಅಂತರವೇನೂ (2.61% ವ್ಯತ್ಯಾಸ) ಇಲ್ಲ, ಆದರೆ ಈ ಮತಗಳಿಕೆಯನ್ನು ಸ್ಥಾನಗಳಾಗಿ ಪರಿವರ್ತಿಸಿಕೊಳ್ಳುವಲ್ಲಿ ಕಾಂಗ್ರೆಸ್ ಎಡವಿದೆ.

ಕಾಂಗ್ರೆಸ್‌ನ ಒಳ ಕದನ


ಬಿಜೆಪಿಯ ಈ ಸಾಧನೆಯಲ್ಲಿ ಕಾಂಗ್ರೆಸ್‌ನ ಪಾತ್ರವೂ

ತನ್ನ ಗೋರಿ ತಾನೇ ತೋಡಿಕೊಳ್ಳುತ್ತಿರುವ ಜೆಡಿಎಸ್




ಗೌಡರ ಲೆಕ್ಕಾಚಾರಗಳು ಮೊದಲಿನಂತೆ ಕೈ ಹಿಡಿಯುತ್ತಿಲ್ಲ. ಅಂದುಕೊಳ್ಳುವುದೇ ಒಂದು ಆಗುತ್ತಿರುವುದೇ ಮತ್ತೊಂದು. ಇರಲಿ, ನೇರಾನೇರ ರಾಜಕೀಯ ಅಂತಂದ ಮೇಲೆ ಇವೆಲ್ಲಾ ಇದ್ದದ್ದೆ. ಆದರೆ ಜೆಡಿಎಸ್ ನಡೆಸುತ್ತಿರೋದು ಅಂತಹ ನೇರ ರಾಜಕಾರಣವಲ್ಲ, ಇತ್ತೀಚೆಗೆ ತಾವು ಗೆಲ್ಲುವುದಕ್ಕಿಂತ ಮತ್ತೊಬ್ಬರನ್ನು ಸೋಲಿಸುವುದೇ ಜೆಡಿಎಸ್‌ನ ಮುಖ್ಯ ಅಜೆಂಡಾವಾಗುತ್ತಿದೆ. ಹೋಗಲಿ ಅದರ ಲಾಭವಾದರೂ ಜೆಡಿಎಸ್‌ಗೆ ದಕ್ಕುತ್ತಿದೆಯೇ? ಅದೂ ಇಲ್ಲ, ಕಳೆದ ವಿಧಾನಸಭಾ ಚುನಾವಣೆ ಫಲಿತಾಂಶದ ನಂತರವೇ ಜೆಡಿಎಸ್ ಪಾಠ ಕಲಿಯಬೇಕಿತ್ತು, ರಾಜ್ಯದಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿಯೇ ತೀರುತ್ತೆ, ಸರ್ಕಾರ ರಚನೆಗೆ ತಮ್ಮ ಅನಿವಾರ್ಯತೆ ಬಂದೇ ಬರುತ್ತದೆ, ಮಾಮೂಲಿಯಂತೆ ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರ ಗದ್ದುಗೆ ಹಿಡಿಯುತ್ತದೆ ಎನ್ನುವ ವಿಶ್ವಾಸದಲ್ಲಿ ಹಲವಾರು ಕಡೆ ಗೆಲ್ಲುವ ಕಾಂಗ್ರೆಸ್ ಅಭ್ಯರ್ಥಿಗಳಿಗೆ ತೊಡರುಗಾಲು ಹಾಕಿದರೂ ಅದು ಈಡೇರಲಿಲ್ಲ, ಅಷ್ಟೇಏಕೆ, ಆರು ತಿಂಗಳ ಹಿಂದೆ ನಡೆದ ಉಪಚುನಾವಣೆಗಳಲ್ಲೂ ಸಿದ್ಧಾಂತಗಳನ್ನೆಲ್ಲ ಬದಿಗೊತ್ತಿ ಬಿಜೆಪಿಯೊಂದಿಗೆ ಒಳ ಒಪ್ಪಂದ ಮಾಡಿಕೊಂಡದ್ದು ರಹಸ್ಯವಾಗೇನೂ ಉಳಿಯಲಿಲ್ಲ, ಅದರಿಂದ ಜೆಡಿಎಸ್‌ಗೆ ಆದ ಲಾಭ ಎಂತದ್ದೆಂಬುದು ಗೊತ್ತೇ ಇದೆ. ಎರಡೂ ಕ್ಷೇತ್ರಗಳನ್ನು ಕಳೆದುಕೊಂಡು ಭಾರೀ ಮುಖಭಂಗ ಅನುಭವಿಸಿದರೂ ಈಗ ಮತ್ತೆ ಅದೇ ತಂತ್ರವನ್ನೇ ಪುನರಾವರ್ತಿಸಿರುವುದು ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತಾಗಿದೆ.

ಕೇಂದ್ರದಲ್ಲಿ ಯಾವ ಪಕ್ಷಕ್ಕೂ ನಿರಾತಂಕವಾಗಿ ಅಧಿಕಾರ ರಚಿಸುವಷ್ಟು ಬಹುಮತ ಸಿಗೋದಿಲ್ಲ, ತೃತೀಯ ರಂಗಕ್ಕೆ ಛಾನ್ಸ್ ಇದೆ ಎಂಬ ಲೆಕ್ಕಾಚಾರ ಗೌಡರಿಗಿತ್ತು, ಹಾಗಾಗಿ ಆದಷ್ಟು ಕಾಂಗ್ರೆಸ್‌ಗೆ ಅಡ್ಡಗಾಲಾಕಿ ಯುಪಿಎಗೆ ತೃತೀಯ ರಂಗದ ಅನಿವಾರ್ಯತೆ ಬೀಳುವಂತೆ ಮಾಡಲು ಗೌಡರು ಸ್ಥಳೀಯವಾಗಿ ಒಂದಷ್ಟು ಆಟ ಆಡಿದ್ದರು. ಅದರಲ್ಲಿ ಸಿದ್ದು ಮೇಲಿನ ವೈಯಕ್ತಿಕ ಜಿದ್ದೂ ಇತ್ತೆನ್ನುವುದನ್ನು ಒತ್ತಿ ಹೇಳಬೇಕಿಲ್ಲ. ಅವರ ಆಸೆ ಈ ಬಾರಿಯೂ ಕೈಗೂಡಿಲ್ಲ. ಬದಲಾಗಿ ಬಿಜೆಪಿಯ ನಿಚ್ಚಳ ಬಹುಮತಕ್ಕೆ ಕರ್ನಾಟಕದಿಂದ ಕೆಲ ಸೀಟುಗಳನ್ನು ಗೌಡರೆ ಉಡುಗೊರೆ ನೀಡಿದಂತಾಗಿದೆ. ಮೈಸೂರು, ಬೆಂಗಳೂರು ಉತ್ತರ, ಉಡುಪಿ-ಚಿಕ್ಕಮಗಳೂರು ಇವುಗಳಲ್ಲಿ ಪ್ರಮುಖವಾದವು. ಗೌಡರ ಇಂತಹ ಗೇಮ್‌ಗಳಿಂದ ಆಗಿರುವ ಒಂದೇ ಸಾಧನೆ ಎಂದರೆ ಜೆಡಿಎಸ್‌ನ ಲೋಕಸಭಾ ಮತಗಳಿಕೆ 13.57% (2009ರಲ್ಲಿ) ನಿಂದ 11.1% (2014ರಲ್ಲಿ) ಕ್ಕೆ ಕುಸಿದದ್ದು!



ರಾಜ್ಯದ ಕೆಲವು ಕ್ಷೇತ್ರಗಳಲ್ಲಿ ಜೆಡಿಎಸ್ ಆಮ್ ಆದ್ಮಿ ಪಕ್ಷಕ್ಕಿಂತ ಕಳಪೆಯಾಗಿದೆ. ಉದಾಹರಣೆಗೆ ಬೆಳಗಾವಿಯಲ್ಲಿ ನೋಟಾ ಮತ ಚಲಾಯಿಸಿದವರು 3ನೇ ಸ್ಥಾನದಲ್ಲಿದ್ದರೆ ಆಮ್ ಆದ್ಮಿ ಪಕ್ಷ 4ನೇ ಸ್ಥಾನದಲ್ಲಿದೆ. ಜೆಡಿಎಸ್ 5ನೇ ಸ್ಥಾನಕ್ಕೆ ಕುಸಿದಿದೆ. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ 36002 ಮತ ಗಳಿಸಿರುವ ಆಮ್ ಆದ್ಮಿ ಪಕ್ಷ 3ನೇ ಸ್ಥಾನದಲ್ಲಿದ್ದರೆ, 19,671 ಮತ ಗಳಿಸಿರುವ ಜೆಡಿಎಸ್ ನಾಲ್ಕನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಧಾರವಾಡದಲ್ಲಿ 4ನೇ ಸ್ಥಾನದಲ್ಲಿರುವ ಜೆಡಿಎಸ್ ಗಳಿಸಿರುವ ಮತಗಳು ಕೇವಲ 8836. ಆದರೆ ಇಲ್ಲಿ ನೋಟಾ ಮತಗಳ ಸಂಖ್ಯೆ ಇದರ ಒಂದೂವರೆ ಪಟ್ಟು, ಅಂದರೆ 12,937! ಬಾಗಲಕೋಟೆಯಲ್ಲಿ ಇನ್ನಷ್ಟು ಹೀನಾಯ. ಇಲ್ಲಿ 3ನೇ ಸ್ಥಾನದಲ್ಲಿ ಪಕ್ಷೇತರ ಶಂಕರ ಬಿದರಿ (10959), 4ನೇ ಸ್ಥಾನದಲ್ಲಿ ನೋಟಾ(10764), 5ನೇ ಸ್ಥಾನದಲ್ಲಿ ಬಿಎಸ್‌ಪಿ(7370) 6ನೇ ಸ್ಥಾನದಲ್ಲಿರುವ ಜೆಡಿಎಸ್ ಕೇವಲ 7237 ಮತಗಳನ್ನು ಗಳಿಸಿದೆ. ಅಷ್ಟೆಲ್ಲಾ ಯಾಕೆ? ಸ್ವತಃ ಕುಮಾರ ಸ್ವಾಮಿ ಒಕ್ಕಲಿಗರ ಪ್ರಾಬಲ್ಯವಿರುವ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲೇ 3ನೇ ಸ್ಥಾನಕ್ಕೆ ಕುಸಿದಿರುವುದು ಜೆಡಿಎಸ್ ಪಕ್ಷ ದಿನೇ ದಿನೇ ದುರ್ಬಲಗೊಳ್ಳುತ್ತಿರುವುದರ ಸೂಚಕದಂತಿದೆ.

ಈಗಲಾದರು ಜೆಡಿಎಸ್ ಇಂತಹ ನಕಾರಾತ್ಮಕ ತಂತ್ರಗಳನ್ನು ಬಿಟ್ಟು ತಮ್ಮದೇ ಪಕ್ಷದ ಏಳ್ಗೆಗೆ ಅನುಕೂಲವಾಗುವ ರಾಜಕಾರಣ ಮಾಡುವ ಪರಿಪಾಠ ಬೆಳೆಸಿಕೊಳ್ಳದಿದ್ದರೆ ಪಕ್ಷದ ನೆಲೆಯೇ ಪ್ರಶ್ನಾರ್ಥಕ ಚಿಹ್ನೆಯಾಗಬಹುದು.



ಎಚ್ಚರಿಕೆಯ ನೋಟಾ' ಗಂಟೆ

ಭ್ರಷ್ಟ ಮತ್ತು ನೀತಿಗೆಟ್ಟ ರಾಜಕೀಯ ಪಕ್ಷಗಳಿಂದ ...ತ್ತಿರುವ ರಾಜ್ಯದ ಮತದಾರರು ಈ ಬಾರಿ ನೋಟಾ ...ne of the Above) ಆಯ್ಕೆಯನ್ನು ಎಲ್ಲಾ ...ಗಳಲ್ಲೂ ಗಣನೀಯ ಸಂಖ್ಯೆಯಲ್ಲಿ ಆರಿಸಿಕೊಂಡಿರು... ಕಂಡುಬಂದಿದೆ. ಇದು ಮುಂದಿನ ದಿನಗಳಲ್ಲಿ ...ರಾಜಕಾರಣವನ್ನು ತಿರಸ್ಕರಿಸಿ ಉತ್ತಮ ರಾಜಕಾರಣಕ್ಕೆ ...ಳಿಸುವ ಮುನ್ಸೂಚನೆ ಎನ್ನಬಹುದೆ?

...ಗಲಕೋಟೆ	-	10764
...ಜಾಪುರ	-	8287
...ಂ. ಕೇಂದ್ರ	-	8449
...ಂ. ಉತ್ತರ	-	11996
...ಂ. ದಕ್ಷಿಣ	-	7394
...ಂ. ಗ್ರಾಮಾಂತರ	-	9876
...ಳಗಾವಿ	-	11500
...ಳ್ಳಾರಿ	-	11320
...ದರ್	-	2786
...ನಗರ	-	12697
...ಕ್ಕಬಳ್ಳಾಪುರ	-	7682
...ತ್ರದುರ್ಗ	-	8895
...ಕ್ಷಿಣ ಕನ್ನಡ	-	7109
...ವಣಗೆರೆ	-	4536
...ರವಾಡ	-	12937
...ಲ್ಬರ್ಗಾ	-	9888
...ಾಸನ	-	7334
...ೈಸೂರು	-	8924
...ವಮೊಗ್ಗ	-	7077
...ಮಕೂರು	-	12934
...ಡುಪಿ ಚಿಕ್ಕಮಗಳೂರು	-	7828
...ತ್ತರ ಕನ್ನಡ	-	16277
...ಟ್ಟು	-	2,57,820

...ಡ್ಡದಿದೆ. ಮುಂಬರುವ ಲೋಕಸಭಾ ಚುನಾವಣೆ ...ಯಿಂದಲೆ ಸಿದ್ದರಾಮಯ್ಯ ಸಾಧ್ಯವಾದಷ್ಟು ಕಳಂಕರಹಿತ, ...ರ ಆಡಳಿತ ನೀಡಿದರಾದರು ಅವುಗಳನ್ನು ಜನರಿಗೆ ...ಪಿಸಿ ಮತಗಳನ್ನಾಗಿ ಪರಿವರ್ತಿಸುವಲ್ಲಿ ಕಾಂಗ್ರೆಸ್ ಪಕ್ಷ ...ಯಾಗಿ ಸೋತಿದ್ದೇ ಇದಕ್ಕೆ ಕಾರಣ. ಹೈಕಮಾಂಡ್ ...ವ್ಯದಲ್ಲೇ ಈ ಚುನಾವಣೆಯನ್ನು ಭರ್ಜರಿಯಾಗಿ ಕೈ ...ಕುಳಿತದ್ದು ಇಲ್ಲಿ ರಾಜ್ಯದಲ್ಲೂ ಪ್ರತಿಫಲಿಸಿತು. ಕೇಂದ್ರದ ...ರುನ್ನೇ ಕೈ ಬಿಟ್ಟ ಇಲ್ಲಿಯ ನಾಯಕರು ರಾಜ್ಯದ ...ಾರದ ಅಲ್ಪತೃಪ್ತಿಗೆ ಜೋತುಬಿದ್ದು ಒಳಸುಂಚೆಗೆ ನಿಂತದ್ದು ...ವೆಂದರು ನಾಲ್ಕರಿಂದ ಐದು ಸ್ಥಾನಗಳ ಲುಕ್ಸಾನಿಗೆ ...ವಾಗಿದೆ.

...ಹಾಗೆನೋಡಿದರೆ ಮಂಡ್ಯ 'ಕೈ' ತಪ್ಪುವಂತಹ ಕ್ಷೇತ್ರವೇ ... ಯಾಕೆಂದರೆ ಆರು ತಿಂಗಳ ಹಿಂದಷ್ಟೇ ನಡೆದ ...ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಮ್ಯಾ 33,000 ...ಗಳ ಅಂತರದಲ್ಲಿ ಗೆದ್ದಿದ್ದರು. ಆನಂತರವೂ ಕ್ಷೇತ್ರದಲ್ಲಿ ಸಕ್ರಿಯವಾಗಿ ಸುತ್ತಾಡಿ ಒಳ್ಳೆಯ ಇಮೇಜನ್ನೇ ಹುಟ್ಟುಹಾಕಿಕೊಂಡಿದ್ದರು. ಆದರೆ ಆನಂತರದಲ್ಲಿ ಉಂಟಾದ ರಾಜಕೀಯ ಬೆಳವಣಿಗೆಯಲ್ಲಿ ಅಂಬಿ ಬಣದವರು ರಮ್ಯಾ ವಿರುದ್ಧ ತಿರುಗಿ ಬಿದ್ದದ್ದಲ್ಲದೆ ಆಕೆಯನ್ನು ಅಭ್ಯರ್ಥಿಯೇ ಮಾಡದಂತೆ ಒತ್ತಡವನ್ನೂ ತಂದಿದ್ದರು. ಅನಾರೋಗ್ಯದಿಂದ ಚೇತರಿಸಿಕೊಂಡು ವಾಪಾಸಾದ ಅಂಬರೀಷ್ ಸಹಾ ನಂದನ್ ನೀಲೇಕಣಿ ಗೆಲ್ಲಿಸಲು ತೋರಿಸಿದಷ್ಟೂ ಉತ್ಸಾಹವನ್ನೂ ರಮ್ಯಾ ಗೆಲ್ಲಿಸಲು ತೋರಲಿಲ್ಲ, ಇನ್ನವರ ಹಿಂಬಾಲಕರಂತೂ ರಮ್ಯಾ ವಿರುದ್ಧ ಬಹಿರಂಗವಾಗೇ ಕೆಲಸ ಮಾಡಿದ್ದು ರಹಸ್ಯವಾಗೇನೂ ಉಳಿದಿಲ್ಲ.

ಇಂತದೇ ಪರಿಣಾಮ ದಕ್ಷಿಣ ಕನ್ನಡದಲ್ಲೂ ಕಾಂಗ್ರೆಸ್‌ಗೆ ಕೈ ಕೊಟ್ಟಿದೆ. ಅಲ್ಲಿಂದ ರಮಾನಾಥ ರೈ, ಯು.ಟಿ.ಖಾದರ್ ಮತ್ತು ಅಭಯ್‌ಚಂದ್ರ ಜೈನ್ ಮೂರು ಜನ ಮಂತ್ರಿಗಳಿದ್ದರೂ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಕೊಯ್ಲು ತೆಗೆದಿದ್ದರೂ ಲೋಕಸಭೆಯಲ್ಲಿ ಬರೋಬ್ಬರಿ ಒಂದು ಲಕ್ಷ ಮತಗಳ ಅಂತರದಿಂದ ಕ್ಷೇತ್ರವನ್ನು ಕೈ ಚೆಲ್ಲಿ ಕೂತಿದೆ.. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಜನಾರ್ಧನ ಪೂಜಾರಿ ತಪ್ಪಿಸಿ ಕೇಂದ್ರ ಮಂತ್ರಿ ವೀರಪ್ಪ ಮೊಯ್ಲಿ ಪುತ್ರನಿಗೆ ಟಿಕೇಟು ಕೊಡಿಸಲು ಪ್ರಯತ್ನ ನಡೆಸಲಾಗಿತ್ತು, ಅದು ಚುನಾವಣೆಯಲ್ಲೂ ಪ್ರತಿಫಲವಾಗಿದೆ. ಮೊಯ್ಲಿ ಭಂಟ ಸಚಿವ ಅಭಯ್ ಚಂದ್ರ ಜೈನ್ ಒಳಗೊಂಡಂತೆ ಆಯಕಟ್ಟಿನ ಮಂದಿಯೇ ಪೂಜಾರಿಗೆ ಕೈಕೊಟ್ಟಿದ್ದಾರೆ ಎನ್ನಲಾಗಿದೆ. ಅತ್ತ ಉತ್ತರ ಕನ್ನಡದಲ್ಲೂ ಮಾರ್ಗರೇಟ್ ಆಳ್ವ ಹಾಗೂ ದೇಶಪಾಂಡೆ ಜಿದ್ದಾಜಿದ್ದಿನಿಂದ ಕಾಂಗ್ರೆಸ್‌ನ ಪ್ರಶಾಂತ್ ದೇಶಪಾಂಡೆ ಸೋತಿರೋದು ಅಚ್ಚರಿಯೇನಲ್ಲ.


ಜೆಡಿಎಸ್ ರಹಸ್ಯ ಸಾಥ್

ಕರ್ನಾಟಕದ ಮಟ್ಟಿಗೆ ಬಿಜೆಪಿಯ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಮತ್ತೊಂದು ಜೆಡಿಎಸ್ ಫ್ಯಾಕ್ಟರ್. ವೈಯಕ್ತಿಕವಾಗಿ ಸಿದ್ದರಾಮಯ್ಯನವರ ಮೇಲಿದ್ದ ಜಿದ್ದು ಹಾಗೂ ಕೇಂದ್ರದಲ್ಲಿ ತೃತೀಯ ರಂಗದ ಕನಸು ಹೊತ್ತಿದ್ದ ದೇವೇಗೌಡರು ಕೆಲ ಕ್ಷೇತ್ರಗಳಲ್ಲಿ ಕೊನೇಕ್ಷಣದಲ್ಲಿ ಬಿಜೆಪಿ ಪರವಾದ ಫರ್ಮಾನು ಹೊರಡಿಸಿದ್ದೂ ಗಂಭೀರ ಪರಿಣಾಮ ಬೀರಿದೆ. ಮೈಸೂರು ಕಾಂಗ್ರೆಸ್‌ನ ಕೈ ತಪ್ಪಿದ್ದೇ ಈ ಕಾರಣಕ್ಕೆ. ಆರಂಭದಲ್ಲಿ ಸಂಖ್ಯೆ ಮೇಲೆ ಕಣ್ಣಿಟ್ಟಿದ್ದ ದೇವೇಗೌಡರು ಕಾಂಗ್ರೆಸ್ ವಂಚಿತ ಜಾಫರ್ ಷರೀಫ್ ಎಂಬ ಹಿರಿ ಜೀವವನ್ನು ಮೈಸೂರಿನಲ್ಲಿ ನಿಲ್ಲಿಸಲು ಯೋಜನೆ ಹಾಕಿಕೊಂಡಿದ್ದರು. ಆದರೆ ಕಾಂಗ್ರೆಸ್ ತೊರೆಯುವ ಗಟ್ಟಿ ಮನಸ್ಸು ಇರದ ಕಾರಣ ಮೆಕ್ಕಾ ಸೇರಿಕೊಂಡ ಷರೀಫ್ ಸಾಹೇಬರು ಗೌಡರ ಆಸೆಗೆ ತಣ್ಣೀರೆರಚಿದ್ದು ಗೌಡರು ತಮ್ಮ ಎಂದಿನ ಸೋಲಿಸುವ ಕಾರ್ಯತಂತ್ರಕ್ಕೆ ಮೊರೆ ಹೋಗುವಂತೆ ಮಾಡಿತ್ತು. ಸಿದ್ದು ತವರು ಜಿಲ್ಲೆಯಲ್ಲೆ ಕಾಂಗ್ರೆಸನ್ನು ಸೋಲಿಸಿ ಮುಖಭಂಗ ಮಾಡುವುದಕ್ಕೋಸ್ಕರ ಡಮ್ಮಿ ಕ್ಯಾಂಡಿಟೇಡ್ ಚಂದ್ರಶೇಖರಯ್ಯ ಎನ್ನುವ ಮಾಜಿ ಜಡ್ಜಿಗಳನ್ನು ಹಾಕಿದ್ದಲ್ಲದೆ ಕೊನೇ ಕ್ಷಣದಲ್ಲಿ ಒಕ್ಕಲಿಗ ಓಟುಗಳು ಬಿಜೆಪಿ ಅಭ್ಯರ್ಥಿ ಪ್ರತಾಪ್ ಸಿಂಹ 'ಗೌಡ'ನ ಕಡೆಗೆ ಹೋಗುವಂತೆ ವ್ಯವಸ್ಥೆ ಮಾಡಿದ್ದರು. ಜಿಲ್ಲೆಯಲ್ಲಿ ನಿರ್ಣಾಯಕವಾಗುವ ಕುರುಬ ಮತಗಳ ಬಲದಿಂದ ಸೋಲುವ ಸಾಧ್ಯತೆಯೇ ಇರದಿದ್ದ ಕಾಂಗ್ರೆಸ್‌ನ ಎಚ್. ವಿಶ್ವನಾಥ್ ಸೋತದ್ದು ಜೆಡಿಎಸ್ ಎಫೆಕ್ಟ್‌ನಿಂದಾಗಿ.

ಇನ್ನು ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಜೆಪಿಯ ಶೋಭಾ ಕರಂದ್ಲಾಜೆ ಗೆಲುವಿಗೆ ದೇವೇಗೌಡರು ಮೈಸೂರಿನಷ್ಟು ಪ್ರತ್ಯಕ್ಷ ಪಾಲುದಾರರಲ್ಲದಿದ್ದರು ಸಿದ್ದರಾಮಯ್ಯನವರದ್ದು 'ಆ್ಯಂಟಿ ಒಕ್ಕಲಿಗ' (ಇದಕ್ಕೂ ಸಿದ್ದು-ಗೌಡರ ವೈಷಮ್ಯವೇ ಬಳಕೆಯಾದದ್ದು) ಅಜೆಂಡಾದ ಸರ್ಕಾರ ಎಂಬಂತೆ ಬಿಂಬಿಸುವ ಪ್ರಯತ್ನ ನಡೆದದ್ದು ಅಪಾರ ಪ್ರಮಾಣದ ಒಕ್ಕಲಿಗ ಓಟುಗಳು ಕಾಂಗ್ರೆಸ್ ಅನ್ನು ಸೋಲಿಸುವುದಕ್ಕೋಸ್ಕರವೇ ಜೆಡಿಎಸ್‌ನ ಧನಂಜಯ್ ಕುಮಾರ್‌ಗಿಂತ ಶೋಭಾ ಕಡೆಯತ್ತ ಹೊರಳಿದ್ದು ಸುಳ್ಳೇನಲ್ಲ. ಬೆಂಗಳೂರು ಉತ್ತರ ಕ್ಷೇತ್ರಕ್ಕೂ ಅಬ್ದುಲ್ ಅಜೀಮ್‌ರನ್ನು ಜೆಡಿಎಸ್ ಅಭ್ಯರ್ಥಿಯನ್ನಾಗಿಸಿದ್ದು ಬಿಜೆಪಿಯ ಸದಾನಂದ ಗೌಡರಿಗೆ ಅನುಕೂಲ ಮಾಡಿಕೊಡಲಿಕ್ಕೆಂದೆ. ಕಾಂಗ್ರೆಸ್‌ನ ಸಾಂಪ್ರದಾಯಿಕ ಮುಸ್ಲಿಂ ಓಟುಗಳು 'ಕೈ'ಗೆ ಹರಿದು ಹೋಗುವುದನ್ನು ತಪ್ಪಿಸುವುದಲ್ಲದೆ ಒಕ್ಕಲಿಗ ಓಟುಗಳು 'ಗೌಡ' ನಾಮಾಂಕಿತ ಸದಾನಂದರ ಅಕೌಂಟಿಗೆ ಜಮೆಯಾಗುವಂತೆ ನೋಡಿಕೊಳ್ಳುವುದು ಅಜೀಂ ಸ್ಪರ್ಧೆಯ ಉದ್ದೇಶವಾಗಿತ್ತು.


'ಕೈ' ಹಿಡಿದ ಅಹಿಂದ ಮತದಾರರು

ಮೀಸಲು ಕ್ಷೇತ್ರ	ಗೆದ್ದ ಅಭ್ಯರ್ಥಿ	ಗಳಿಸಿದ ಮತ	ಗೆಲುವಿನ ಅಂತರ
ಕೋಲಾರ	ಕೆ.ಎಚ್.ಮುನಿಯಪ್ಪ	418926	47850
ಚಾಮರಾಜನಗರ	ಧ್ರುವನಾರಾಯಣ	567782	141182
ಗುಲ್ಬರ್ಗಾ	ಮಲ್ಲಿಕಾರ್ಜುನ ಖರ್ಗೆ	507193	74733
ಚಿತ್ರದುರ್ಗ	ಚಂದ್ರಪ್ಪ	467511	101291
ರಾಯಚೂರು	ಬಿವಿ ನಾಯಕ್	443659	1499



ಕರ್ನಾಟಕದಲ್ಲಿ ಕಾಂಗ್ರೆಸ್ ಗೆದ್ದ ಒಂಬತ್ತು ಕ್ಷೇತ್ರಗಳಲ್ಲಿ ಐದು ಕ್ಷೇತ್ರಗಳು ಮೀಸಲು ಕ್ಷೇತ್ರಗಳಾಗಿರುವುದು ವಿಶೇಷ. ಕೋಲಾರ, ಚಾಮರಾಜನಗರ, ಗುಲ್ಬರ್ಗಾ, ಚಿತ್ರದುರ್ಗ, ಮತು ಬಿಜಾಪುರ ಈ ಐದು ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರಗಳ ಪೈಕಿ ಕಾಂಗ್ರೆಸ್ 4ರಲ್ಲಿ (ಬಿಜಾಪುರ ಹೊರತುಪಡಿಸಿ) ಗೆಲುವು ಸಾಧಿಸಿದೆ. ರಾಯಚೂರು ಮತ್ತು ಬಳ್ಳಾರಿ ಎಸ್‌ಟಿ ಮೀಸಲು ಕ್ಷೇತ್ರಗಳ ಪೈಕಿ ರಾಯಚೂರನ್ನು ಕಾಂಗ್ರೆಸ್ ಉಳಿಸಿಕೊಂಡಿದೆ. ಹಾಗೆ ನೋಡಿದರೆ ಈ ಮೀಸಲು ಕ್ಷೇತ್ರಗಳ ಗೆಲುವು ಕಾಕತಾಳೀಯವೇನಲ್ಲ, ಪಾರಂಪರಿಕವಾಗಿ ಪರಿಶಿಷ್ಟ ಜಾತಿಯ ಮತದಾರರು ಕಾಂಗ್ರೆಸ್‌ನ ಅನುಯಾಯಿಗಳಾಗಿರುವುದು ಹೇಗೂ ತಿಳಿದ ಸಂಗತಿ. ಆದರೆ 2008ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಪಕ್ಷ ಪರಿಶಿಷ್ಟ ಜಾತಿಯ ಮತಬ್ಯಾಂಕನ್ನು ಒಡೆಯುವಲ್ಲಿ ಯಶಸ್ವಿಯಾಗಿತ್ತು. ಒಳಮೀಸಲಾತಿಯ ಆಸೆ ತೋರಿಸಿ ಪರಿಶಿಷ್ಟರಲ್ಲಿ ಮಾದಿಗ ಸಮುದಾಯವನ್ನು ತನ್ನತ್ತ ಸೆಳೆದುಕೊಂಡಿತ್ತು.

ಆದರೆ ಮಾದಿಗ ಜನಾಂಗಕ್ಕೆ ಬಿಜೆಪಿ ಆಡಳಿತಾವಧಿಯಲ್ಲಿ ಮೂಗಿಗೆ ತುಪ್ಪ ಸವರಿದ್ದು ಬಿಟ್ಟರೆ ಬೇರೇನೂ ಸಿಗಲಿಲ್ಲ. ಹೀಗಾಗಿ 2013ರ ವಿಧಾನಸಭಾ ಚುನಾವಣೆಯ ವೇಳೆಗೆ ಸಿದ್ಧರಾಮಯ್ಯನವರ ಅಹಿಂದ ತಂತ್ರ ಫಲ ನೀಡಿತ್ತು. ಅದೇ ಟ್ರೆಂಡ್ ಈಗಲೂ ಮುಂದುವರೆದಿರುವ ಸೂಚಕವಾಗಿ ಮೀಸಲು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಇದರಲ್ಲಿ ಚಿತ್ರದುರ್ಗ ಎಸ್ಸಿ ಕ್ಷೇತ್ರವನ್ನು ಮತ್ತು ರಾಯಚೂರು ಎಸ್‌ಟಿ ಕ್ಷೇತ್ರವನ್ನು ಬಿಜೆಪಿ ತೆಕ್ಕೆಯಿಂದ ಕಸಿದುಕೊಳ್ಳುವಷ್ಟು ಸಿದ್ದರಾಮಯ್ಯನವರ ಅಹಿಂದ ಎಫೆಕ್ಟ್ ವರ್ಕ್‌ಔಟ್ ಆಗಿರುವುದು ನಿಚ್ಚಳವಾಗಿದೆ.



ಬದಲಾವಣೆಗೆ ಮತ


ಇವಿಷ್ಟೂ ಅಂಶಗಳು ಮಾತ್ರವೇ ಬಿಜೆಪಿಗೆ ಎರಡಂಕಿಯ ಸೀಟು ತಂದಿಕೊಟ್ಟಿವೆ ಎನ್ನಲಿಕ್ಕಾಗದು. ಆದರೆ ಸಾಮೂಹಿಕ ಮತ ಕ್ರೋಢೀಕರಣವಾಗಿ ಬಿಜೆಪಿಯ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ (ಕರ್ನಾಟಕದಲ್ಲಿ) ಗೆಲ್ಲುವುದಕ್ಕೆ ಈ ಅಂಶಗಳ ಪ್ರಭಾವವನ್ನು ತಳ್ಳಿಹಾಕುವಂತಿಲ್ಲ, ಕರ್ನಾಟಕ ಮತದಾರರ ಮಟ್ಟಿಗೆ ವಿಧಾನಸಭೆ ಮತ್ತು ಲೋಕಸಭೆ ಎರಡೂ ಚುನಾವಣೆಗಳ ಫಲಿತಾಂಶಗಳನ್ನು ಪರಿಗಣಿಸಿ ನೋಡುವುದಾದರೆ ಒಂದು ಸಾಮಾನ್ಯ ಅಂಶ ಗಮನಕ್ಕೆ ಬರುತ್ತದೆ. ಅದು ಬದಲಾವಣೆ.

ರಾಜ್ಯ ಸರ್ಕಾರದ ಮೇಲೆ ಹೇಳಿಕೊಳ್ಳುವಂತ ಮುನಿಸು ಜನರಿಗೆ ಇರಲಿಲ್ಲ. ಇದು ಕೇಂದ್ರ ಸರ್ಕಾರಕ್ಕೂ ಅನ್ವಯಿಸುತ್ತದೆ ಎಂದು ಹೇಳುವಂತಿರಲಿಲ್ಲ, ಯಾಕೆಂದರೆ 2ಜಿ, ಕಾಮನ್‌ವೆಲ್ತ್, ಕಲ್ಲಿದ್ದಲು, ಥೋರಿಯಮ್ ಹೀಗೆ ಸಾಲುಸಾಲು ಹಗರಣಗಳಲ್ಲಿ ಯುಪಿಎ ತನ್ನ ಹೆಸರು ಕೆಡಿಸಿಕೊಂಡಿತ್ತು, ಸತತ ಹತ್ತು ವರ್ಷಗಳಿಂದ ಯುಪಿಎ ಆಡಳಿತ ನೋಡಿ ಏಕತಾನತೆ ತಾಳಿದ್ದ ಜನರಿಗೂ ಈ ಹಗರಣಗಳು ಬದಲಾವಣೆ ಬಯಸುವಂತೆ ಮಾಡಿದ್ದವು. ಬದಲಾವಣೆಯ ವಿಚಾರದಲ್ಲಿ ಕರ್ನಾಟಕದ ಮತದಾರ ತೀಕ್ಷ್ಣ (ಇತ್ತೀಚಿನ ದಿನಗಳಲ್ಲಿ) ಪ್ರತಿಕ್ರಿಯಿಸುತ್ತಿದ್ದಾನೆ. ರಾಜ್ಯದಲ್ಲಿ ಬಿಜೆಪಿಯನ್ನು ಹೀನಾಯವಾಗಿ ಕೆಳಗಿಳಿಸಿ ಕಾಂಗ್ರೆಸ್‌ಗೆ ಸರಳ ಬಹುಮತದೊಂದಿಗೆ ಅಧಿಕಾರ ಕರುಣಿಸಿದ್ದೂ ಇದೇ ಬದಲಾವಣೆ ಕಾರಣಕ್ಕೆ. ಅದನ್ನೇ ಕೇಂದ್ರ ಸರ್ಕಾರಕ್ಕೂ ಅನ್ವಯಿಸಿ ಮತ ಹಾಕಿದ್ದಾನೆ. ಹಾಗಂತ ಎಂಪಿ ಎಲೆಕ್ಷನ್‌ನಲ್ಲಿ ಸ್ಥಳೀಯ ಸರ್ಕಾರದ ಪಾತ್ರವೇ ಇರುವುದಿಲ್ಲ ಎನ್ನುವಂತಿಲ್ಲ. ರಾಜ್ಯ ಸರ್ಕಾರವೂ ಗಣನೀಯ ಪ್ರಮಾಣದಲ್ಲಿ ಪ್ರಭಾವ ಬೀರಬಹುದಿತ್ತಾದರು ಮೊದಲೇ ತಿಳಿಸಿದಂತೆ ಸ್ಥಳೀಯ ಕ್ಷುಲ್ಲಕ ರಾಜಕಾರಣ ಅದಕ್ಕೆ ಅವಕಾಶ ಕೊಟ್ಟಿಲ್ಲ, ಅದು ಬಿಜೆಪಿಗೆ ಅನುಕೂಲ ಮಾಡಿಕೊಟ್ಟಿದೆ.


ಅಲ್ಲದೆ ಈ ಬಾರಿ ವೋಟಿಂಗ್ ಪ್ರಮಾಣವೂ ದಾಖಲೆ ಮೀರಿತ್ತು, ಕರ್ನಾಟಕದಲ್ಲಿ 67.28% ಮತದಾನ ನಡೆದಿದ್ದು ಈ ಹೆಚ್ಚಳಕ್ಕೆ ಯುವ ಮತದಾರರ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದೇ ಕಾರಣ. ಸಹಜವಾಗಿ ಇವುಗಳಲ್ಲಿ ಬಹುಪಾಲು ಇಂಟರ್ನೆಟ್ ಹಾಗೂ ಮಾಧ್ಯಮ ಪ್ರಭಾವಿತ ಮೋದಿ ಮತಗಳೆನ್ನುವುದರಲ್ಲಿ ಅನುಮಾನವೇ ಇಲ್ಲ.

ಒಟ್ಟಾರೆಯಾಗಿ ಸಮೀಕರಿಸುವುದಾದರೆ (ಕರ್ನಾಟಕದಲ್ಲಿ) ಬಿಜೆಪಿಯ ಗೆಲುವು ಯಾವುದೋ ಒಂದು ಕಾರಣ ಅಥವಾ ಒಂದು ಅಲೆಯಿಂದ ಘಟಿಸಿರುವಂತದ್ದಲ್ಲ, ಹಲವು ಅಂಶಗಳ ಸಮ್ಮಿಶ್ರ ಗೆಲುವು ಅದು.


■ದೊಡ್ಡಿಪಾಳ್ಯ ನರಸಿಂಹಮೂರ್ತಿ & ಗಿರೀಶ್ ತಾಳಿಕಟ್ಟೆ







ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಮೋದಿ ಗೆಲುವಿನ ಅರ್ಥ ಹಾಗೂ ಅನರ್ಥಗಳು

ಮೋದಿ ನೇತೃತ್ವದ ಬಿಜೆಪಿ ಗೆದ್ದಿದೆ. ಹೆಚ್ಚಿನವರು (ಬಹುಶಃ ಬಿಜೆಪಿಯೂ ಸೇರಿ) ನಿರೀಕ್ಷಿಸಿದ್ದು ಎನ್‌ಡಿಎ ಸರಳ ಬಹುಮತಕ್ಕಿಂತ ಕಡಿಮೆ ಸೀಟುಗಳನ್ನು ಗಳಿಸುತ್ತದೆ; ಹಾಗಾಗಿ ಇದೊಂದು ಅಸ್ಥಿರವಾದ ಎನ್‌ಡಿಎ ಸರ್ಕಾರವಾಗಬಹುದು ಎಂದು. ಆದರೆ ಹಲವು ರೀತಿಯ ದಾಖಲೆಗಳನ್ನು ಈ ಚುನಾವಣೆ ನಿರ್ಮಿಸಿದೆ. ಬಿಜೆಪಿಯೇ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವಷ್ಟು ಸೀಟುಗಳನ್ನು ಗೆದ್ದಿದೆ. ಇದರ ಪರಿಣಾಮಗಳೇನಾಗಿರುತ್ತವೆ ಎಂಬುದನ್ನು ನೋಡುವ ಮೊದಲು, ಜಯದ ಸ್ವರೂಪಕ್ಕೆ ಸಂಬಂಧಿಸಿದ ಕೆಲವು ಸಂಗತಿಗಳನ್ನು ನೋಡೋಣ.

• *ಈ ಚುನಾವಣೆ 1984ರ ನಂತರದಲ್ಲಿ ಐತಿಹಾಸಿಕ ಆದರೆ ದುರಂತದಾಯಕ ಚುನಾವಣೆ. 1984ರ ನಂತರ ಒಂದು ಪಕ್ಷಕ್ಕೆ 272ಕ್ಕಿಂತ ಹೆಚ್ಚು ಸೀಟುಗಳು ಬಂದಿದ್ದು ಈಗಲೇ. ಜೊತೆಗೆ ಇದು ಇದುವರೆಗೆ ಬಿಜೆಪಿ (1999ರಲ್ಲಿ) ಪಡೆದಿದ್ದ ಅತಿ ಹೆಚ್ಚು 182 ಸೀಟುಗಳಿಗಿಂತ 100 ಹೆಚ್ಚು. ಅಷ್ಟು ಮಾತ್ರವಲ್ಲ ಇದು ಕಾಂಗ್ರೆಸ್ ಮತ್ತು ಇತರ ಬಹುಪಾಲು "ಸೆಕ್ಯುಲಾರ್" ಹಾಗೂ ಎಡಪಕ್ಷಗಳು ಅತ್ಯಂತ ಕಡಿಮೆ ಓಟುಗಳನ್ನು ಪಡೆದ ಚುನಾವಣೆ.*

1990ರ ನಂತರ ತಂದ ಜನವಿರೋಧಿ ಜಾಗತೀಕರಣ ನೀತಿಗಳನ್ನು ಅಸ್ತಿತ್ವಕ್ಕೆ ಬಂದ ಎಲ್ಲಾ ಸರ್ಕಾರಗಳು ಮುತುವರ್ಜಿಯಿಂದ ಜಾರಿಗೆ ತಂದವು. ಆದರೆ ಅದನ್ನು ಮತ್ತಷ್ಟು ಆಕ್ರಮಣಕಾರಿಯಾಗಿ ಮುಂದಕ್ಕೆ ತೆಗೆದುಕೊಂಡು ಹೋಗಲಾಗದ್ದಕ್ಕೆ ಕಾರಣವಿತ್ತು, ವಿವಿಧ ವಿಭಾಗಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದ ಪ್ರಾದೇಶಿಕ ಪಕ್ಷಗಳು ಮತ್ತು ಎಡಪಕ್ಷಗಳನ್ನೊಳಗೊಂಡ ಕೂಟಗಳಾಗಿ ಸಮ್ಮಿಶ್ರ ಸರ್ಕಾರಗಳು ಕೆಲಸ ಮಾಡಬೇಕಿತ್ತು, ಹಾಗಾಗಿಯೇ ಈ ಮಧ್ಯೆ ಎರಡು ಪಕ್ಷಗಳ ಆಡಳಿತ ಇರಬೇಕು; ಸ್ಥಿರ ಸರ್ಕಾರ ಬೇಕು ಎಂಬ ಕೂಗನ್ನು ಕೆಲವು ಬಲಾಢ್ಯ ಶಕ್ತಿಗಳು ಆಗಾಗ್ಗೆ ಎಬ್ಬಿಸುತ್ತಲೇ ಇದ್ದವು. ತಮ್ಮತನವನ್ನು ಎತ್ತಿಹಿಡಿದ ಹಿಂದುಳಿದ ಮತ್ತು ದಲಿತ ಜಾತಿಗಳೂ ರಾಷ್ಟ್ರೀಯ ಪಕ್ಷಗಳ ವೋಟ್ ಬ್ಯಾಂಕ್ ಆಗಲು ನಿರಾಕರಿಸಿ ತಮ್ಮದೇ ಪಕ್ಷಗಳನ್ನು ಬೆಂಬಲಿಸಲಾರಂಭಿಸಿದ್ದವು. ಪ್ರಾದೇಶಿಕ ಪಕ್ಷಗಳು ಕಾರ್ಪೋರೇಟ್ ವಿರೋಧಿ ಅಜೆಂಡಾವನ್ನೇನೂ ಹೊಂದಿರಲಿಲ್ಲವಾದರೂ, ಕೆಲವು ಜನಪ್ರಿಯ ಜನಪರ ಕಾರ್ಯಕ್ರಮಗಳ ಆಧಾರದ ಮೇಲೆ ಗೆದ್ದು ಬರಲು ಪ್ರಯತ್ನಿಸುತ್ತಿದ್ದವು.

ಆ ಪರಿಸ್ಥಿತಿ ಈಗ ಸಂಪೂರ್ಣವಾಗಿ ಬದಲಾಗಿದೆ. ಬಿಜೆಪಿ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದು, ಮೋದಿ ಪ್ರಧಾನಿಯಾಗುವುದು ಖಚಿತವಾಗಿದೆ.

ಕಾಂಗ್ರೆಸ್ ಪಕ್ಷದ ಮಟ್ಟಿಗೆ ಇದು 1952ರಿಂದ ಇಲ್ಲಿಯವರೆಗಿನ ಅತ್ಯಂತ ಹೀನಾಯ ಸೋಲಾಗಿದೆ. ಇದು ಕೇವಲ ಕಾಂಗ್ರೆಸ್‌ನ ಜನವಿರೋಧಿ ರಾಜಕಾರಣದ ಅಭಿವ್ಯಕ್ತಿಗಳಾದ ಬೆಲೆ ಏರಿಕೆ, ಭ್ರಷ್ಟಾಚಾರದ ಹಗರಣಗಳು ಇತ್ಯಾದಿಗಳಾಚೆಗೆ ಅದರ 'ಜಾತ್ಯಾತೀತ ರಾಜಕಾರಣ'ದಲ್ಲಿದ್ದ ದೋಷವೂ ಕಾರಣವಾಗಿದೆ. ಮುಸ್ಲಿಮರೂ ಸಹಾ ಕಾಂಗ್ರೆಸ್‌ನ ಜಾತ್ಯಾತೀತ ರಾಜಕಾರಣದಲ್ಲಿ ದೋಷವಿರುವುದನ್ನು ಮನಗಂಡು ಅಲ್ಲಲ್ಲಿ ಬೇರೆ ಪಕ್ಷಗಳತ್ತ ವಾಲಿದ್ದಾರೆ (ತೃಣಮೂಲ, ಆಪ್ ಇತ್ಯಾದಿ). ಕಾಂಗ್ರೆಸ್‌ಗೂ(19.8% - 10.24 ಕೋಟಿ ಮತ), ಬಿಜೆಪಿಗೂ(31.8%- 16.48 ಕೋಟಿ ಮತ) ಮತಗಳಿಕೆಯಲ್ಲೂ ಇರುವ ವ್ಯತ್ಯಾಸ 12%. ಎನ್‌ಡಿಎ ಅಧಿಕಾರಕ್ಕೆ ಬಂದಿದ್ದ 1998 ಮತ್ತು 1999ರ ಚುನಾವಣೆಗಳಲ್ಲೂ ಬಿಜೆಪಿಗಿಂತ ಕಾಂಗ್ರೆಸ್‌ನ ಮತಗಳಿಕೆಯೇ ಹೆಚ್ಚಿತ್ತು.

ಅಂದ ಮೇಲೆ ಇದು ಬಿಜೆಪಿಗೆ ಸಿಕ್ಕಿರುವ ನಿರ್ಣಾಯಕವಾದ ಜಯವಾಗಿದೆ.

• *ಗುಜರಾತ್, ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿ ಬಿಜೆಪಿಗಿದ್ದ ಒಳವಿರೋಧಗಳು ಮೂಲೆಗುಂಪಾಗಿದೆ. ಮೊದಲೆರಡು ರಾಜ್ಯಗಳಲ್ಲಿ ಎಲ್ಲಾ ಸೀಟುಗಳನ್ನೂ ಗೆದ್ದಿದ್ದರೆ, ಮಧ್ಯಪ್ರದೇಶದಲ್ಲಿ 29ರಲ್ಲಿ 27 ಸೀಟುಗಳನ್ನು ಗೆದ್ದಿದೆ.*

ಮಿಷನ್ 272 (543ರಲ್ಲಿ ಅರ್ಧದಷ್ಟು ಸೀಟುಗಳು) ಸಾಧಿಸಲು ಹೊರಟಿದ್ದ ಮೋದಿ ಪಡೆಗೆ ಒಳೇಟು ಕೊಡುವ ಉದ್ದೇಶದಿಂದ ಮಿಷನ್ 160 ಮಾತ್ರ ಸಾಧಿಸುವಂತೆ ಮಾಡಲು ಕೆಲವರು ಕೆಲಸ ಮಾಡಿದರು ಎಂಬ ವದಂತಿಯಿತ್ತು. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್‌ರ ಕುರಿತು ಅದನ್ನು ಹೆಚ್ಚಾಗಿ ಹೇಳಲಾಗುತ್ತಿತ್ತು. ಸಣ್ಣ ಪುಟ್ಟ ಸಮಸ್ಯೆಗಳೇನೇ ಇದ್ದರೂ, ಇಡೀ ಬಿಜೆಪಿ ಮತ್ತು ಆರೆಸ್ಸೆಸ್‌ನ ಪರಿವಾರ ಮೋದಿಯನ್ನು ಗೆಲ್ಲಿಸಲು ಕೆಲಸ ಮಾಡಿರುವುದು ಸ್ಪಷ್ಟವಾಗಿದೆ. ಬಿಜೆಪಿಯ ಒಳಗೆ ಭಿನ್ನಮತವಿರದ ಈ ಸ್ಥಿತಿಯೂ ಸಹಾ ಫ್ಯಾಸಿಸಂಗೆ ಬೇಕಾದ ಸರ್ವಾಧಿಕಾರಿಯನ್ನು ಸೃಷ್ಟಿಸಲು ಅನುಕೂಲ ಮಾಡಿಕೊಡಲಿದೆ.

• *Change, Communalism and Caste* ಈ ಮೂರನ್ನೂ ಬಳಸಿಕೊಂಡು ಮೋದಿ ಗೆದ್ದಿದ್ದು. ಬಹಳಷ್ಟು ಹೊಸ ಮತದಾರರು ಕಾಂಗ್ರೆಸ್ಸಿಗಿಂತ ಬೇರೆ ಪಕ್ಷ ಅಧಿಕಾರಕ್ಕೆ ಬರಬೇಕೆಂದು ಓಟು ಹಾಕಿದ್ದಾರೆ.

10 ಸುದೀರ್ಘ ವರ್ಷಗಳು ಆಳಿದ ಕಾಂಗ್ರೆಸ್ ಜನರ ಸಾಕಷ್ಟು ವಿರೋಧವನ್ನು ಕಟ್ಟಿಕೊಂಡಿತ್ತು, ಜನರನ್ನು ಮರುಳು ಮಾಡಲು ಬೇಕಿದ್ದ ಚರಿಷ್ಮಾಭರಿತ ನಾಯಕ ಅದರಲ್ಲಿಲ್ಲ, ಮನಮೋಹನ್‌ಸಿಂಗ್ ಸಪ್ಪೆಯಾಗಿ ಕಾಣುತ್ತಿದ್ದರು. ಸೋನಿಯಾಗಾಂಧಿ ಇನ್ನೊಂದು ಅಧಿಕಾರ ಕೇಂದ್ರವಾಗಿದ್ದರು. ಇವೆಲ್ಲವನ್ನೂ ಪರಿಣಾಮಕಾರಿಯಾಗಿ ಮುಂದಿಟ್ಟು, ಅವೆಲ್ಲಕ್ಕೂ ಪರಿಹಾರ ನರೇಂದ್ರ ಮೋದಿ ಎಂದು ಬಿಂಬಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಆದರೆ ಅದು ಜಾತಿ, ಧರ್ಮಗಳನ್ನು ಮೀರಿದ ಅಭಿವೃದ್ಧಿಗೆ ಸಿಕ್ಕ ಮತ ಎಂದು ಈಗ ಹೇಳಲಾಗುತ್ತಿದೆ. ಅದು ವಾಸ್ತವವಲ್ಲ, ಹುಸಿ ಅಭಿವೃದ್ಧಿಯ ಸುಳ್ಳುಗಳನ್ನು ಒಂದೇ ಸಮನೆ ಬಿತ್ತಿ ಒಂದು ವಿಭಾಗದ ಮತದಾರರನ್ನು ಮರುಳು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಅದನ್ನು ದಾಟಿ ಜಾತಿಯನ್ನು ವ್ಯವಸ್ಥಿತವಾಗಿ ಬಳಸಲಾಗಿದೆ.

ಪ್ರಿಯಾಂಕಾ ಗಾಂಧಿ ನೀಜ ರಾಜಕಾರಣ ಮಾಡುತ್ತಿದ್ದೀರಿ ಎಂದಾಗ, ಅದು ತನ್ನ ಹಿಂದುಳಿದ ಜಾತಿಯನ್ನು ಉದ್ದೇಶಿಸಿ ಹೀಗಳೆದದ್ದು ಎಂದು ಮೋದಿ ಬಿಂಬಿಸಿದ ಸಂದರ್ಭದಲ್ಲಿ, ಹಿಂದುಳಿದ ಜಾತಿಗಳು ನಿರ್ಣಾಯಕ ಪಾತ್ರ ವಹಿಸುವ ಉತ್ತರ ಪ್ರದೇಶ ಮತ್ತು ಬಿಹಾರಗಳು ಚುನಾವಣೆಗೆ ಹೋಗುತ್ತಿದ್ದವು. ಮೋದಿ ಗಾಂಚಿ (ಗಾಣಿಗ) ಹಿಂದುಳಿದ ಜಾತಿಗೆ ಸೇರಿದ ವ್ಯಕ್ತಿ ಎಂದು ಪದೇ ಪದೇ ಈ ರಾಜ್ಯಗಳಲ್ಲಿ ಹೇಳಲಾಯಿತು. ಮಾಯಾವತಿಯ ಬಿಎಸ್‌ಪಿ ದಲಿತರಲ್ಲಿ ಜಾತವ್(ಚಮಾರ್) ಮತ್ತು ಪಸಿ ಎರಡೂ ಜಾತಿಗಳನ್ನು ಸಾಕಷ್ಟು ವರ್ಷಗಳಿಂದ ಒಗ್ಗೂಡಿಸಿಕೊಂಡಿತ್ತು. ಈ ಸಾರಿ ಮಾಯಾವತಿಯದ್ದು ಕೇವಲ ಜಾತವ್ ಜಾತಿ ಕುರಿತ ಪ್ರೇಮ ಎಂದು ಬಿಂಬಿಸಲಾಯಿತು ಮತ್ತು ಪಸಿ ಜಾತಿಗೆ ಸೇರಿದ್ದನೆನ್ನಲಾದ ರಾಜನೊಬ್ಬನನ್ನು ಮೊಗಲ್ ರಾಜ ಸೋಲಿಸಿದ ಐತಿಹಾಸಿಕ ಉದಾಹರಣೆಯನ್ನು ಬಿತ್ತಲಾಯಿತು.

ಆರೆಸ್ಸೆಸ್‌ನವರು ಹಿಂದಿ ರಾಜ್ಯಗಳಲ್ಲಿ ಜಾತಿ ಆಧಾರಿತ ಪ್ರಚಾರವನ್ನು ಯಶಸ್ವಿಯಾಗಿ ನಡೆಸಿದರು. ಒಟ್ಟು ದೇಶದಲ್ಲಿ 4 ಲಕ್ಷ 50 ಸಾವಿರ ಕಾರ್ಯಕರ್ತರನ್ನು ವ್ಯವಸ್ಥಿತವಾಗಿ ತೊಡಗಿಸಿದರು, ಅವರಲ್ಲಿ 50 ಸಾವಿರ ಜನರು ಉತ್ತರ ಪ್ರದೇಶವೊಂದರಲ್ಲೇ ನಿಯುಕ್ತರಾಗಿದ್ದರು (ಕ್ಯಾರವಾನ್ ಪತ್ರಿಕೆಯ ಸುದ್ದಿ ಮೂಲ). ಕರ್ನಾಟಕದಲ್ಲಿ ಅಂತಹುದೇ ಜಾತಿ ಸಮೀಕರಣಕ್ಕಾಗಿ ಭ್ರಷ್ಟರೂ, ದುಷ್ಟರೂ, ಜೈಲುವಾಸಿಗಳೂ ಆಗಿದ್ದ ಯಡಿಯೂರಪ್ಪ ಮತ್ತು ಶ್ರೀರಾಮುಲುರನ್ನು ಬಿಜೆಪಿಗೆ ವಾಪಸ್ ಕರೆತರಲಾಯಿತು.

ಮುಜಫರ್‌ನಗರ ಕೋಮುಗಲಭೆ ಕೇವಲ ಚುನಾವಣಾ ಉದ್ದೇಶಕ್ಕಾಗಿ ಹುಟ್ಟುಹಾಕಲಾದ, ಒಂದು ಅಮಾನವೀಯ ದುಷ್ಟ ಕೃತ್ಯವಾಗಿತ್ತು. ಈ ಗಲಭೆಯ ಪರಿಣಾಮದಿಂದ ಮೇಲ್ಜಾತಿ ಹಿಂದೂಗಳು ಮತ್ತು ದಲಿತರಿಬ್ಬರನ್ನೂ ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಈ ಭಾಗದ ಜನಪ್ರಿಯ ನಾಯಕ ಅಜಿತ್‌ಸಿಂಗ್ ಹೀನಾಯವಾಗಿ ಸೋಲುವ ಮಟ್ಟಿಗೆ ಈ ಧ್ರುವೀಕರಣ ಕೆಲಸ ಮಾಡಿತು. ರಾಮ ಮಂದಿರವನ್ನೂ ಸೇರಿದಂತೆ, ಎಲ್ಲಾ ರೀತಿಯ ಕೋಮು ಪ್ರಚೋದನೆಯನ್ನು ಬಿಜೆಪಿ ಮಾಡಿತು. ಕೋಮು ದ್ವೇಷಕ್ಕೆ ಸ್ವತಃ ನರೇಂದ್ರ ಮೋದಿ ಮತ್ತು ಅಮಿತ್‌ಷಾಗಳು ಪ್ರತೀಕಗಳಾಗಿದ್ದರು. ಅವರೇ ಬಿಜೆಪಿಯ ಪ್ರಚಾರ ಕಾರ್ಯವನ್ನು ಮುನ್ನಡೆಸಿದ್ದು.

• ಮೋದಿ ಅಲೆ ಇದ್ದಿದ್ದು ಹೌದು: ಅದು ಕಾರ್ಪೋರ್ ರೇಟ್ ಕಂಪೆನಿಗಳು ಫೈನಾನ್ಸ್ ಮಾಡಿದ, ಬಾಡಿಗೆ ಮಾಧ್ಯಮಗಳು ಪ್ರಾಯೋಜಿಸಿದ, ಆರೆಸ್ಸೆಸ್ ಮತ್ತು ಕಾರ್ಪೋರ್‌ರೇಟ್ ಜಂಟಿ ಅಜೆಂಡಾಗಳ ಮೋದಿ ನಾಯಕತ್ವದಡಿಯ ಅಲೆ ಆದಾಗಿತ್ತು.

ಮೋದಿ ಅಲೆ ಎದ್ದಿದೆ ಎಂದು ಬಿಜೆಪಿ ಪ್ರೇರಿತ ಮಾಧ್ಯಮಗಳೂ, ಅಂತಹದ್ದೇನಿಲ್ಲ ಎಂದು ಇತರರೂ ಹೇಳುತ್ತಿದ್ದರು. 'ಪತ್ರಿಕೆ' ಸಹಾ ಅಂತಹ ಅಲೆ ಇಲ್ಲ ಎಂದೇ ಬರೆದಿತ್ತು. ಇಂದು ನಿಸ್ಸಂದೇಹವಾಗಿ ಸಾಬೀತಾಗಿರುವುದು ಮೋದಿ ಅಲೆ ಇತ್ತು ಎಂದು. ಆದರೆ ಈ ಅಲೆಯನ್ನೂ ಸೃಷ್ಟಿಸಲಾಗಿತ್ತು ಎಂಬುದೂ ಸುಳ್ಳಲ್ಲ. ಅದಕ್ಕಾಗಿ ಸುಮಾರು 35 ಸಾವಿರ ಕೋಟಿ ರೂ.ಗಳನ್ನು ವ್ಯಯಿಸಿರುವ ಎಲ್ಲಾ ಸಾಧ್ಯತೆಗಳಿವೆ. ಇದು ಬಹಳ ಮೇಲ್ಮಟ್ಟದಲ್ಲಿ ಕಳೆದ 3 ವರ್ಷಗಳಿಂದ ನಡೆಯುತ್ತಾ ಬಂದ ಒಂದು ವ್ಯವಸ್ಥಿತ ಪ್ರಯತ್ನದ ಫಲವಾಗಿದೆ. ಗುಜರಾತ್‌ನ ಕುರಿತ ಸುಳ್ಳುಗಳನ್ನು ನಂಬಿಸುವಲ್ಲೂ ಅವರು ಯಶಸ್ವಿಯಾದರು. ಇದನ್ನು ಪರಿಣಾಮಕಾರಿಯಾಗಿ ಎದುರುಗೊಳ್ಳುವ ಸಂಪನ್ಮೂಲ ಮತ್ತು ವ್ಯಾಪಕತೆ ಸಾಧ್ಯವಿದ್ದದ್ದು ಕಾಂಗ್ರೆಸ್‌ಗೆ ಮಾತ್ರ. ಅದು ಅತ್ಯಂತ ದುರ್ಬಲವಾಗಿ ಎದುರಿಸಿತು. ಇದ್ದುದರಲ್ಲಿ ಒಂದಷ್ಟು ಸಾಧ್ಯತೆಯಿದ್ದ ಎಡಪಕ್ಷಗಳಿಗೆ ಸಂಘಟನೆ, ಕಾರ್ಯಕರ್ತರು ಮತ್ತು ಒಂದು ಮಟ್ಟಿಗಿನ ಸಂಪನ್ಮೂಲವೂ ಇತ್ತು. ಆದರೆ ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಸಮಾನ ಶತ್ರುಗಳೆಂಬ ನಿಲುವಿನಲ್ಲಿ ಅದು ಉದ್ದಕ್ಕೂ ಗೊಂದಲದಲ್ಲೇ ಇತ್ತು. ಪರಿಣಾಮಕಾರಿ ಪ್ರತಿಕ್ರಿಯೆ ಅದರಿಂದ ಬರಲಿಲ್ಲ.



ಹಾಗೆ ನೋಡಿದರೆ, ಆಮ್‌ಆದ್ಮಿ ಪಕ್ಷವು ಅದನ್ನು ಪ್ರಚಾರದಲ್ಲಿ ಎದುರುಗೊಳ್ಳುವ ಪ್ರಯತ್ನ ಮಾಡಿತು. ಅದರ ಮಧ್ಯಮ ವರ್ಗದ ಸಾಮಾಜಿಕ ನೆಲೆ, ಜನರ ಗಮನ ಸೆಳೆಯುವ ಸಾಂಕೇತಿಕ ಆಚರಣೆಗಳು ಟಿಆರ್‌ಪಿ ಲೆಕ್ಕಾಚಾರ ಎಲ್ಲವೂ ಮಾಧ್ಯಮಗಳನ್ನೂ ಸೆಳೆದಿತ್ತು. ಆದರೆ ಅದು ಬಿಜೆಪಿಯ ದೈತ್ಯ ಶಕ್ತಿಗೆ ಸರಿಸಾಟಿಯಾದುದಾಗಿರಲಿಲ್ಲ ಮತ್ತು ಬಹಳ ಕಡಿಮೆ ಸಮಯ ಮಾತ್ರ ಅದಕ್ಕೆ ದಕ್ಕಿತ್ತು. ಇನ್ನುಳಿದಂತೆ ತಮ್ಮ ಮಿತಿಯಲ್ಲಿ ಹಲವು ಪ್ರಗತಿಪರ ಶಕ್ತಿಗಳು ಮೋದಿವಾದವನ್ನು ಬಯಲುಗೊಳಿಸುವಲ್ಲಿ ಕ್ರಿಯಾಶೀಲತೆ ಮತ್ತು ಬದ್ಧತೆ ತೋರಿದವಾದರೂ ಅದರ ವ್ಯಾಪ್ತಿ ಬಹಳ ಸೀಮಿತವಾದುದಾಗಿತ್ತು.

• ಫ್ಯಾಸಿಸಂಗೆ ಚುನಾವಣಾ ಎದುರು ಶಕ್ತಿಯೂ ಅತ್ಯಂತ ದುರ್ಬಲವಾಗಿರುವ ಸಂಸತ್ ರಚಿತವಾಗುತ್ತಿರುವುದು ನಮ್ಮ ಮುಂದಿರುವ ಅತ್ಯಂತ ...ಪಾಯದ ಸಂಗತಿ. ಬಿಜೆಪಿಗೆ ತನ್ನಂತೆ ತಾನೆಯೇ ಬಹುಮತ ಇರುವುದರಿಂದ ಅದು ಇದುವರೆಗೂ ತಡೆ ಹಿಡಿದಿದ್ದ ಹಲವು ಕಾಯಿದೆಗಳು ...ರಿಯಾಗುವ ಸಾಧ್ಯತೆಗಳಿವೆ. ಅವುಗಳಲ್ಲಿ ಕಾರ್ಪೊರೇಟ್ ಪರವಾದ, ಮತ್ತು ಹಿಂದೂತ್ವವಾದಿಯಾದ ಹಲವು ಶಾಸನಗಳು?ದಲಿತ, ಅಲ್ಪಸಂಖ್ಯಾತ, ...ಹಿಳೆಯರನ್ನು ಬಗ್ಗು ಬಡಿಯುವ ಶಾಸನಗಳು ಬರಲಿವೆ. ಈಗ ರಾಜ್ಯಸಭೆಯಲ್ಲಿ ಬಿಜೆಪಿಗೆ ಅಷ್ಟು ಸಂಖ್ಯಾ ಸಾಮರ್ಥ್ಯವಿಲ್ಲ, ಆದರೆ ಎರಡು ವರ್ಷದ ...ತರ ಅದು ಹೆಚ್ಚಲಿದೆ. ಆಗ ಎಲ್ಲಾ ಶಾಸನಗಳು ಯಾವುದೇ ಬಗೆಯ ಸಂಸದೀಯ ವಿರೋಧವಿಲ್ಲದೆ ಪಾಸಾಗಬಲ್ಲ ಸಂದರ್ಭ ಅದೂ ಮೋದಿಗೆ ...ಡ್ಡು ಹಾಕಿರುವವರೇ ಕಾರ್ಪೊರೇಟ್ ಶಕ್ತಿಗಳಾಗಿರುವಾಗ- ಅತ್ಯಂತ ಗಾಬರಿ ಹುಟ್ಟಿಸುತ್ತದೆ.

2009ರಲ್ಲಿ ಯುಪಿಎ ಮರಳಿ ಅಧಿಕಾರಕ್ಕೆ ಬಂದಾಗ, ಕಾಂಗ್ರೆಸ್ 2004ಕ್ಕಿಂತ ...ಮವಾದ ಸ್ಥಿತಿಯಲ್ಲಿತ್ತು, ಸ್ವಂತದ್ದೇ 46 ಸೀಟು ಹೆಚ್ಚು ಪಡೆದುಕೊಂಡು, ...ಮಿತ್ರ ಪಕ್ಷಗಳೊಂದಿಗೆ, ಎಡ ಪಕ್ಷಗಳ ನಿರ್ಬಂಧವಿಲ್ಲದೇ ಅಧಿಕಾರಕ್ಕೇರಿತ್ತು. ...ಡಿಎಯನ್ನು ಬಯಸುತ್ತಿದ್ದ ಈ ದೇಶದ ದೊಡ್ಡ ಬಂಡವಾಳಶಾಹಿಗಳು ...ರಿಂದ ಬೇಸರಗೊಳ್ಳಲಿಲ್ಲ; ಬದಲಿಗೆ 'ಈಗ ನೀವು ಹೆಚ್ಚು ಸ್ಥಿರವಾಗಿದ್ದೀರಿ. ...ಗಿ ಎಲ್ಲಾ ಆರ್ಥಿಕ ನೀತಿಗಳನ್ನೂ ನಮ್ಮ ಪರವಾಗಿ ಜಾರಿಗೆ ತನ್ನಿ' ...ಮ ಗುಟುರು ಹಾಕಿದ್ದರು. ಅದಕ್ಕೆ ತಕ್ಕನಾಗಿ ಕಾಂಗ್ರೆಸ್ ಸಹಾ ...ಮಕೊಂಡರೂ, ಕೆಲವು ತೋರಿಕೆಯ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ...ಲು ಹೊರಟಿತ್ತು. ಅವನ್ನೂ ಸ್ಥಾಪಿತ ಹಿತಾಸಕ್ತಿಗಳು ತಡೆದುಕೊಳ್ಳಲು ...ಬಿರಲಿಲ್ಲ.


...: ಸಂಸತ್‌ನಲ್ಲಿ ಕಾಂಗ್ರೆಸ್ ಅಷ್ಟು ಸುಲಭವಾದ ಸ್ಥಿತಿಯಲ್ಲಿ ಇರಲಿಲ್ಲ. ಎರಡನೆ ...ಧಿ ಸಂಸತ್ ಅಧಿವೇಶನಗಳಲ್ಲಿ ಚರ್ಚೆ ನಡೆದದ್ದಕ್ಕಿಂತ ಗಲಭೆ ನಡೆದದ್ದೇ ...ಚ್ಚು ಹತ್ತು ಹಲವು ಕಾರಣಗಳಿಂದ ಕಾರ್ಪೋರೇಟ್ ಕಂಪೆನಿಗಳ ಪರವಾದ



35ಕ್ಕೂ ಹೆಚ್ಚು ಮಸೂದೆಗಳು ಅನುಮೋದನೆಗೊಂಡಿಲ್ಲ, ಅವೆಲ್ಲವನ್ನೂ ಈಗ ಜಾರಿಗೊಳಿಸಲು ದಾರಿ ಸುಗಮವಾಗಿದೆ.

ಒಂದು ವೇಳೆ ಯಾರಾದರೂ ವಿರೋಧ ತೋರಿದರೆ ಅವರಿಗೆ 'ದೇಶದ್ರೋಹಿ' ಪಟ್ಟವನ್ನು ಕಟ್ಟಲು ಮೋದಿವಾದಿಗಳು ಮಾಧ್ಯಮಗಳೂ ಸೇರಿದಂತೆ ಎಲ್ಲಾ ಆಯಕಟ್ಟಿನ ಜಾಗಗಳಲ್ಲಿ ಸಿದ್ಧರಾಗಿರುತ್ತಾರೆ. ಗುಜರಾತ್‌ನಲ್ಲಿ ಅಂತಹ ಪ್ರಯೋಗ ಈಗಾಗಲೇ ನಡೆದಿದ್ದು ಹುಸಿ ಎನ್‌ಕೌಂಟರ್ ಕೊಲೆಗಳೂ ಸೇರಿದಂತೆ ಎಲ್ಲವನ್ನೂ ಮಾಡಲು ಬಿಜೆಪಿ ಸಿದ್ಧವಾಗಿರುತ್ತದೆ. ಈಚಿನ ವರ್ಷಗಳಲ್ಲಿ ಪಾಕಿಸ್ತಾನದ ಜೊತೆ ಯುದ್ಧವನ್ನು ಬಿಜೆಪಿಯ ಉದಾರವಾದಿ ನಾಯಕ ವಾಜಪೇಯಿ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ನಡೆಸಲಾಗಿತ್ತೆಂಬುದನ್ನು ನಾವು ಮರೆಯಬಾರದು. ಅಂತಹ ಸಂದರ್ಭ ಬಂದರೆ, ಪಾಕಿಸ್ತಾನದ ಜೊತೆ ಯುದ್ಧ ಮಾಡಿ ಇನ್ನೆ?ದು ವರ್ಷ ಅಧಿಕಾರ ಮುಂದುವರೆಸಿಕೊಂಡು ಹೋಗಲು ಮೋದಿ ಹಿಂಜರಿಯುವುದಿಲ್ಲ. ಏಕೆಂದರೆ ಸಂಸದೀಯ ವಿರೋಧ ದುರ್ಬಲವಾಗಿದೆ.

ಎರಡನೇ ದೊಡ್ಡ ಪಕ್ಷ ಕಾಂಗ್ರೆಸ್‌ಗೂ, ಈ ಹಿಂದೆ ಎನ್‌ಡಿಎ ಭಾಗವಾಗಿದ್ದ ಜಯಲಲಿತಾ ಹಾಗೂ ಮಮತಾರ ಪಕ್ಷಗಳ ಸಂಖ್ಯೆಗೂ ದೊಡ್ಡ ವ್ಯತ್ಯಾಸವಿಲ್ಲ ಎಂಬುದು ಈ ಸಾಧ್ಯತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ.



• ಎಲ್ಲಕ್ಕಿಂತ ಮುಖ್ಯವಾದದ್ದು ಉತ್ತರ ಪ್ರದೇಶದ ಬೆಳವಣಿಗೆ ದೇಶಾದ್ಯಂತ ವಿಸ್ತರಿಸಿರುವ ವಿದ್ಯಮಾನ. ಉ.ಪ್ರದೇಶದಲ್ಲಿ ಬಿಜೆಪಿ ಐತಿಹಾಸಿಕವೆನ್ನಬಹುದಾದ ಪ್ರಮಾಣಕ್ಕೆ ಸೀಟುಗಳನ್ನು ಪಡೆದಿದೆ. ಇಲ್ಲಿಯೂ ಆ ಮೂರೂ ಅಂಶಗಳು ಕೆಲಸ ಮಾಡಿದೆ. 1998ರಲ್ಲಿ 57 ಸೀಟುಗಳನ್ನು ಪಡೆದದ್ದೇ ಅತಿ ಹೆಚ್ಚು. ಈಗ 80ರಲ್ಲಿ 71 ಸೀಟುಗಳು ಬಂದಿವೆ. ಹಾಗೆ ಈವರೆಗೆ ಖಾತೆಯನ್ನೇ ತೆರೆಯದ ಕೇರಳದಲ್ಲೂ ಖಾತೆ ತೆಗೆಯುವ ಹತ್ತಿರಕ್ಕೆ ಬಂದು ಕಡಿಮೆ ಅಂತರದಲ್ಲಿ ಸೋತಿದೆ. ಪ.ಬಂಗಾಳದಲ್ಲಿ ಶೇ.18ರಷ್ಟು ಓಟನ್ನು ಪಡೆದಿದೆ.

ಇದುವರೆಗೆ ಅಧಿಕಾರಕ್ಕೆ ಬಂದಿರುವ ಯಾವುದೇ ಪಕ್ಷ ಅಥವಾ ಮೈತ್ರಿಕೂಟ ಉತ್ತರ ಪ್ರದೇಶದಲ್ಲಿ ಹೆಚ್ಚಿನ ಸೀಟುಗಳನ್ನು ಪಡೆಯದೇ ಹೋಗಿರಲಿಲ್ಲ. ಅಂತಹ ಒಳ್ಳೆಯ ಪರಿಸ್ಥಿತಿಯಲ್ಲೇನೂ ಇರದಿದ್ದ ಬಿಜೆಪಿಯು ಇದನ್ನು ಅರಿತಿತ್ತು. ಇದಕ್ಕೆ ಕಾರಣಗಳು ಎರಡು. ಒಂದು ಅಲ್ಲಿ ರಾಜ್ಯ ವಿಭಜನೆಯ ನಂತರವೂ 80 ಸೀಟುಗಳಿವೆ ಹಾಗೂ ಜಾತಿ, ಕೋಮುವಾದ ಮತ್ತು ಇನ್ನಿತರ ಅಂಶಗಳ ಮೇಲೆ ರಾಜಕಾರಣ ಮಾಡಲು ಅದೊಂದು ಹುಲುಸಾದ ಪ್ರಯೋಗಶಾಲೆಯಾಗಿದೆ. ಅದನ್ನೇ ಬಿಜೆಪಿಯು ಮಾಡಿ ಯಶಸ್ವಿಯಾಗಿದೆ. ತನ್ನ ನೆಲೆಯನ್ನು ಕಳೆದುಕೊಂಡು ಬಿಟ್ಟಿದ್ದ ಕಾಂಗ್ರೆಸ್ ಪಕ್ಷವು ಕಳೆದ ಲೋಕಸಭಾ ಚುನಾವಣೆಯಲ್ಲಿ ಅಚ್ಚರಿಯೆನ್ನುವಂತೆ 21 ಸೀಟು ಗೆದ್ದಿತ್ತು. ಆದರೆ ಈ ಸಾರಿ ಅಲ್ಲಿಂದ ಗೆದ್ದಿರುವುದು ಕಾಂಗ್ರೆಸ್‌ನ ಅಧ್ಯಕ್ಷೆ ಸೋನಿಯಾಗಾಂಧಿ (ರಾಯ್‌ಬರೇಲಿ) ಮತ್ತು ಉಪಾಧ್ಯಕ್ಷ ರಾಹುಲ್ ಗಾಂಧಿ (ಅಮೇಥಿ) ಮಾತ್ರ. ರಾಹುಲ್‌ಗಾಂಧಿ ಮೊದಲ ಹಲವು ಸುತ್ತಿನ ಮತ ಎಣಿಕೆಗಳಲ್ಲಿ ಬಿಜೆಪಿಯ ಅಭ್ಯರ್ಥಿಗಿಂತ ಹಿಂದಿದ್ದರು. ಇದರ ಜೊತೆಗೆ ದೇಶದ ಎಲ್ಲಾ ರಾಜ್ಯಗಳಲ್ಲೂ ಬಿಜೆಪಿಯು ಗೆದ್ದಿದೆ. (ತ.ನಾಡಿನಲ್ಲಿ ಅದರ ಮಿತ್ರ ಪಕ್ಷ, ಕೇರಳದಲ್ಲಿ ಗೆಲುವಿನ ಸಮೀಪ).

...ಎಡಪಕ್ಷಗಳ ಹೀನಾಯ ಸೋಲು ಕೂಡ ಒಂದು ...ಖಲೆ. ಆಮ್ ಆದ್ಮಿ ಪಕ್ಷದ 'ಅಲೆ' ನಿರೀಕ್ಷಿಸಿ ...ದ್ದಿರಲಿಲ್ಲ. ಇದರ ಪರಿಣಾಮಗಳೇನು?


... 2004ರ ಲೋಕಸಭಾ ಚುನಾವಣೆಯಲ್ಲಿ 58 ಸ್ಥಾನ ಗೆದ್ದು, ಮುಂದಿನ ...ಗಳಲ್ಲಿ ಮತ್ತಷ್ಟು ಬೆಳೆಯುವ ಸಾಧ್ಯತೆ ತೋರಿದ್ದ ಎಡಪಕ್ಷಗಳು ಅಲ್ಲಿಂದ ...ಂತರವಾಗಿ ಇಳಿಯುತ್ತಾ ಬಂದಿವೆ. ಪ.ಬಂಗಾಳದ ತಮ್ಮ ಭದ್ರಕೋಟೆಯನ್ನೂ ...ನಾಯವಾಗಿ ಕಳೆದುಕೊಂಡಿದ್ದಲ್ಲದೇ, ಈ ಸಾರಿಯ ಲೋಕಸಭಾ ...ನಾವಣೆಯಲ್ಲಿ 2009ಕ್ಕಿಂತ ಕಳಪೆ ಸಾಧನೆ ತೋರಿದ್ದಾರೆ. ಎಷ್ಟೇ ...ಮಿತಿಗಳಿದ್ದರೂ, ತಮ್ಮ ಮೂಲ ಸಿದ್ಧಾಂತವನ್ನು ಒಂದು ಮಟ್ಟಿಗಾದರೂ ...ಂದಿಡುವ ಎಡಪಕ್ಷಗಳು ಆಕ್ರಮಣಕಾರಿ ನವ ಉದಾರವಾದಿ ಆರ್ಥಿಕ ...ತಿಗಳಿಗೆ ಸ್ಪೀಡ್ ಬ್ರೇಕರ್‌ಗಳಾಗಿದ್ದವು. ಈ ಸಾರಿ ಸಿಪಿಐ 1 ಸ್ಥಾನವನ್ನೂ, ...ಎಂ 10 ಸ್ಥಾನಗಳನ್ನು ಮಾತ್ರ ಗೆದ್ದಿವೆ. ಅದೇ ರೀತಿ ಹೊಸ ರೀತಿಯ ...ಜಕಾರಣದ ಭರವಸೆ ಹುಟ್ಟಿಸಿದ್ದ ಆಪ್ ಪಕ್ಷವು ಚುನಾವಣೆಯನ್ನು ಒಂದು ...ಳವಳಿಯಂತೆ ನಡೆಸುವ ಉದ್ದೇಶದಿಂದ (ಹಾಗೂ -ಬಹುಶಃ-ರಾಷ್ಟ್ರೀಯ ...ದ ಮಾನ್ಯತೆ ಪಡೆಯುವ ಉದ್ದೇಶದಿಂದ) ದೇಶಾದ್ಯಂತ ಅಭ್ಯರ್ಥಿಗಳನ್ನು ...ಳಿಸಿತ್ತು, ಆದರೆ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಅಚ್ಚರಿಯ ...ತಾಂಶವನ್ನು ಕಂಡಿದ್ದ ಆಪ್ ಪಕ್ಷವು, ಲೋಕಸಭೆಯಲ್ಲಿ ಒಂದು ಸ್ಥಾನವನ್ನೂ ...ದೆ, ದೆಹಲಿಯ ಎಲ್ಲಾ 7 ಕ್ಷೇತ್ರಗಳಲ್ಲೂ ಎರಡನೆಯ ಸ್ಥಾನದಲ್ಲಿದ್ದರೂ, ... ಕ್ಷೇತ್ರದಲ್ಲೂ ಸೋಲಿನ ಅಂತರ 1 ಲಕ್ಷಕ್ಕಿಂತ ಹೆಚ್ಚಿದೆ.

'ಪತ್ರಿಕೆ' ಅಚ್ಚಿಗೆ ಹೋಗುತ್ತಿರುವ ಸಂದರ್ಭದಲ್ಲಿ ಪಂಜಾಬ್‌ನಿಂದ 4 ...ಗಳನ್ನು ಆಮ್‌ಆದ್ಮಿ ಪಕ್ಷವು ಗೆಲ್ಲುವ ಸಾಧ್ಯತೆ ತೋರುತ್ತಿದೆ. ಅದರ ...ಗೆ ದೇಶಾದ್ಯಂತ 2.75?ಗಿಂತ ಹೆಚ್ಚಿನ ಮತ ಪಡೆದಿರುವುದು ಒಂದು ...ಸುದ್ದಿ ಆಗಿದೆ. ಆದರೆ ಅವಸರದ ಉತ್ಸಾಹದಲ್ಲಿ ದೇಶಾದ್ಯಂತ ಬಂದು ...ಕೊಂಡಿರುವ ಮಧ್ಯಮ ವರ್ಗೀಯ ಜನರಲ್ಲಿ ಶೇ. ಎಷ್ಟು ಜನ ಈಗಲೂ ... ಜೊತೆ ಉಳಿಯುತ್ತಾರೆಂಬುದು ಗ್ಯಾರಂಟಿಯಿಲ್ಲ. ಏಕೆಂದರೆ ಆಪ್‌ನ ...ದ ವಿರೋಧಿ ಶುದ್ಧ ರಾಜಕಾರಣದ ಜೊತೆಗೆ, ದೆಹಲಿಯಲ್ಲಿ ಪಡೆದ ...ಷ್ಟು ಅದರತ್ತ ಆಕರ್ಷಣೆಯಾಗಲು ಪ್ರಧಾನವಾದ ಕಾರಣವಾಗಿತ್ತು. ಈಗಿನ ...ಲು, ಆಪ್ ಅನ್ನು ಬಿಟ್ಟು ಬಿಡಲು ಮತ್ತು ... ಅಥವಾ ಬಿಜೆಪಿಯತ್ತ ... ಕಾರಣವಾದರೆ ಅಚ್ಚರಿಯಿಲ್ಲ.

• ಎಲ್ಲಾ ಜಾತಿಗಳಲ್ಲಿರುವ ಮೇಲ್ಚಲನೆ ಬಯಸುವ ವರ್ಗ ಮೋದಿಗೆ ಮತ ಹಾಕಿದೆ'

ಈ ಹೇಳಿಕೆಯು ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿದೆ. ಬಿಜೆಪಿಯ ಕೆಲವು ವಕ್ತಾರರೂ ಅದನ್ನು ಹೇಳುತ್ತಿದ್ದಾರೆ. ಅದು ವಾಸ್ತವವಿರಲೂಬಹುದು. ಏಕೆಂದರೆ ಜನರು ಎರಡು ಹೊತ್ತು ಊಟ ಮಾಡಿಕೊಂಡು ಇರಲು ಬೇಕಾದಷ್ಟು ಖಾತರಿಯನ್ನು ಮಾತ್ರ ಕಾಂಗ್ರೆಸ್ ನೇತೃತ್ವದ ಯುಪಿಎ ನೀಡಹೊರಟಿತ್ತು. ಕನಸುಗಳನ್ನು ಕಟ್ಟಿಕೊಂಡವರು ಉದ್ಧಾರವಾಗುತ್ತೇವೆ ಎಂಬ ಭರವಸೆ ಇರಲಿಲ್ಲ. ಆದರೆ ಅದನ್ನು ಮೋದಿ ನೇತೃತ್ವದ ಸರ್ಕಾರ ನೀಡಬಲ್ಲದೇ ಎಂಬುದಷ್ಟೇ ಪ್ರಶ್ನೆ. ಉತ್ತರ ಕಷ್ಟವಿಲ್ಲ. ಗುಜರಾತ್ ಮಾದರಿ ಅಭಿವೃದ್ಧಿ ಅದಕ್ಕೆ ಉತ್ತರ ನೀಡಿದೆ. ಅದು ಕೆಲವರ ಕನಸುಗಳನ್ನು ಸಂಪೂರ್ಣ ಕೊಲ್ಲುತ್ತದೆ. ಇನ್ನೊಂದಷ್ಟು ಜನರಿಗೆ ಕನಸುಗಳನ್ನು ಹಂಚುತ್ತದೆ. ಅದು ಈಡೇರುವುದಿಲ್ಲವಾದ್ದರಿಂದ ಅಫೀಮನ್ನು ಮೊದಲೇ ಸಿದ್ಧಮಾಡಿಕೊಂಡಿದ್ದಾರೆ. ಭಯೋತ್ಪಾದನೆ, ಪಾಕಿಸ್ತಾನ, ಸೂಪರ್ ಪವರ್ ಇತ್ಯಾದಿ ಅಮಲುಗಳು ಅವು.





• ಹೀಗಾಗಿ ಈಗ ಜನರೇ ವಿರೋಧ ಪಕ್ಷವಾಗಿ ಸಂವಿಧಾನದ ಮೂಲ ಆಶಯಗಳನ್ನು ಉಳಿಸುವ ಚಳವಳಿಯಲ್ಲಿ ತೊಡಗಬೇಕಿದೆ.

ಎಲ್ಲವೂ ಮುಳುಗಿ ಹೋಗಿಲ್ಲ, ಕಾಂಗ್ರೆಸ್ಸನ್ನು ನೆಚ್ಚಿಕೊಳ್ಳುವ ಅಥವಾ ಕಾಂಗ್ರೆಸ್‌ನ ಬಿ ಟೀಂನಂತಿರುವ ಪಕ್ಷಗಳನ್ನು ನೆಚ್ಚಿಕೊಳ್ಳುವವರೆಲ್ಲರೂ ಅದರಿಂದ ಹೊರಬರಬೇಕಿದೆ. ಹೊಸದೊಂದು ಪರ್ಯಾಯ ಮಾತ್ರ ಮೋದಿಯಿಂದ ದೇಶವನ್ನು ರಕ್ಷಿಸಬಲ್ಲುದು. ವಿರೋಧ ಪಕ್ಷ ಇನ್ನು ಸಂಸತ್‌ನಲ್ಲಿ ಇರುವುದಿಲ್ಲ. ಅದು ಬೀದಿ ಚಳವಳಿಗಳಲ್ಲಿ ರೂಪುಗೊಳ್ಳಬೇಕಿದೆ. ಈ ದೇಶಕ್ಕೆ ಅರ್ಥವಾದ, ಪರಿಣಾಮಕಾರಿಯಾದ ವಿರೋಧಪಕ್ಷವನ್ನು ಜನರು ಕಟ್ಟಬೇಕಿದೆ.






ಕಚ್ಚಾಟದಲ್ಲಿಯೇ ಮಂಡ್ಯ 'ಕೈ' ಚೆಲ್ಲಿದ ಕಾಂಗ್ರೆಸ್

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಮತದಾರರು ಈ ಬಾರಿ ಚಿತ್ರನಟಿ ರಮ್ಯಾ ಮೋಡಿಗೆ ಒಳಗಾಗಿಲ್ಲ. ಕಳೆದ ಉಪಚುನಾವಣೆಯಲ್ಲಿ ಜೆಡಿಎಸ್‌ನ ಸಿ.ಎಸ್. ಪುಟ್ಟರಾಜು ವಿರುದ್ಧ ಭರ್ಜರಿ ಮತಗಳ ಅಂತರದಿಂದ ಗೆದ್ದು ಬೀಗಿದ್ದ ರಮ್ಯಾ ಈ ಬಾರಿಯ ಚುನಾವಣೆಯಲ್ಲಿ ಅದೇ ಪುಟ್ಟರಾಜು ವಿರುದ್ಧ ಸೋತು ಮಕಾಡೆ ಮಲಗಿದ್ದಾರೆ.

ಚುನಾವಣೆ ಮುಗಿದ ನಂತರ ಕ್ಷೇತ್ರದಿಂದಲೇ ಕಾಲ್ಕಿತ್ತ ರಮ್ಯಾ ದೂರದ ಲಂಡನ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಚುನಾವಣೆ ಫಲಿತಾಂಶ ನೋಡಿಕೊಂಡು ಮಂಡ್ಯಕ್ಕೆ ಕಾಲಿಡಬೇಕೆಂದುಕೊಂಡಿದ್ದ ರಮ್ಯಾರಿಗೆ ಮಂಡ್ಯದ ಮತದಾರರು ಐದು ವರ್ಷಗಳ ಕಾಲ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಲು ಕಳುಹಿಸಿದ್ದಾರೆ.

ಕಳೆದ ಲೋಕಸಭೆ ಉಪಚುನಾವಣೆಯಲ್ಲಿ ಸೋತು ಕಂಗೆಟ್ಟಿದ್ದ ಪುಟ್ಟರಾಜು ಕೈಯನ್ನು ಮಂಡ್ಯದ ಮತದಾರರು ಹಿಡಿದಿದ್ದಾರೆ. ಸತತ ಎರಡು ಸೋಲಿನ ಅನುಕಂಪ, ಜೆಡಿಎಸ್ ನಾಯಕರ ಒಗ್ಗಟ್ಟಿನ ಫಲವಾಗಿ ಪುಟ್ಟರಾಜು ಕಾಂಗ್ರೆಸ್‌ನ ರಮ್ಯಾರವರನ್ನು 5518 ಮತಗಳ ಅಂತರದಿಂದ ಸೋಲಿಸಿದ್ದಾರೆ. ಮೋದಿ ಅಲೆ ಎಂಬ ಭ್ರಮೆ ನಂಬಿಕೊಂಡಿದ್ದ ಬಿಜೆಪಿ ಶಿವಲಿಂಗಯ್ಯ ಕೇವಲ 86,993 ಮತ ಪಡೆದು ಮೂರನೇ ಸ್ಥಾನಕ್ಕೆ ಕುಸಿದಿದ್ದಾರೆ. ಎಸ್.ಎಂ. ಕೃಷ್ಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಬಣಗಳ ಬಹಿರಂಗ ಗುದ್ದಾಟದ ಪರಿಣಾಮ ರಮ್ಯಾ ಸೋಲುವುದು ಚುನಾವಣೆಗೂ ಮೊದಲೇ ಖಾತ್ರಿಯಾಗಿತ್ತು. ಈಗ ಫಲಿತಾಂಶದ ನಂತರ ದೃಢವಾಗಿದೆ. ಅಂಬಿ ಬೆಂಬಲಿಗರು ಎಸ್.ಎಂ. ಕೃಷ್ಣ ಬಣದ ರಮ್ಯಾರಿಗೆ ಭರ್ಜರಿಯಾಗಿ 'ಕೈ' ಕೊಡುವ ಮೂಲಕ ಮುಯ್ಯಿ ತೀರಿಸಿಕೊಂಡಿದ್ದಾರೆ.

ಜಾ.ದಳ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಜೊತೆ ಕಡೆಗಳಿಗೆವರೆಗೂ ಹೋರಾಡಿದ ರಮ್ಯಾ ಅಂತಿಮವಾಗಿ 5518 ಮತಗಳ ಅಂತರದಿಂದ ಸೋಲೊಪ್ಪಿಕೊಂಡಿದ್ದಾರೆ. ಒಟ್ಟು 11,91,708 (ಶೇ.71.41) ಮತಗಳು ಚಲಾವಣೆಯಾಗಿತ್ತು, ಇದರಲ್ಲಿ ಜೆಡಿಎಸ್‌ನ ಪುಟ್ಟರಾಜು 5,24,370ಮತ ಪಡೆದರೆ, ರಮ್ಯಾ 5,18,852 ಮತ ಪಡೆದು ಸೋಲು ಅನುಭವಿಸಿದ್ದಾರೆ. ಬಹುಶಃ ಜಿಲ್ಲಾ ಕಾಂಗ್ರೆಸ್ ನಾಯಕರು ಒಗ್ಗಟ್ಟಾಗಿ ರಮ್ಯಾ ಪರ ಕೆಲಸ

ಮಾಡಿದ್ದರೆ ಈ ಬಾರಿಯೂ ರಮ್ಯಾ ಪುನರಾಯ್ಕೆ ಆಗುತ್ತಿದ್ದರು. ಆದರೆ ಜಿಲ್ಲಾ ಕಾಂಗ್ರೆಸ್‌ನಲ್ಲಿನ 2 ಗುಂಪುಗಳ ಬಹಿರಂಗ ಬಡಿದಾಟದ ಕಾರಣವಾಗಿ ರಮ್ಯಾ ಸೋತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಬೆಂಬಲಿಗರು ಕೈಕೊಟ್ಟ ಪರಿಣಾಮ ರಮ್ಯಾ ಸೋತಿದ್ದಾರೆ. ಅಂಬಿ ಬೆಂಬಲಿಗರು ರಮ್ಯಾ ಕೈ ಬಿಡದಿದ್ದರೆ ಫಲಿತಾಂಶವೇ ಬೇರೆಯಾಗುತ್ತಿತ್ತು ಎಂಬುದರಲ್ಲಿ ಸಂಶಯವಿರಲಿಲ್ಲ.

ಕಳೆದ ಬಾರಿ 67,000ಕ್ಕೂ ಅಧಿಕ ಮತಗಳ ಅಂತರದಿಂದ ಸೋತಿದ್ದ ಸಿ.ಎಸ್.ಪುಟ್ಟರಾಜು ಈ ಬಾರಿ ಬಹಳ ಎಚ್ಚರಿಕೆಯಿಂದಲೇ ಚುನಾವಣೆ ಎದುರಿಸಿದರು. ಕಾಂಗ್ರೆಸ್‌ನಲ್ಲಿದ್ದ ಒಡಕಿನ ಲಾಭವನ್ನು ಪಡೆದ ಪುಟ್ಟರಾಜು ಈ ಬಾರಿ ಚುನಾವಣೆ ಎದುರಿಸಿದ್ದೇ ಶಾಸಕ ಚಲುವರಾಯಸ್ವಾಮಿ ನೇತೃತ್ವದಲ್ಲಿ. ಕಳೆದ ಉಪಚುನಾವಣೆಯಲ್ಲಿ ಶಾಸಕರಾದ ಡಿ.ಸಿ.ತಮ್ಮಣ್ಣ, ಚಲುವರಾಯಸ್ವಾಮಿ, ತಮ್ಮಣ್ಣ ರಮೇಶ್‌ಬಾಬು, ನಾರಾಯಣಗೌಡ, ಸಾ.ರಾ.ಮಹೇಶ್ ತಮ್ಮ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ರಮ್ಯಾರಿಗೆ ಲೀಡ್ ಬಿಟ್ಟುಕೊಟ್ಟಿದ್ದರು.

ಆದರೆ ಈ ಬಾರಿ ಚಲುವರಾಯಸ್ವಾಮಿ ನೇತೃತ್ವದಲ್ಲಿ ತಂತ್ರಗಾರಿಕೆ ನಡೆಸಲಾಗಿತ್ತು, ಹಣಕಾಸು, ಪ್ರಚಾರ ಎಲ್ಲವನ್ನು ತನ್ನ ಕೈಗೆ ತೆಗೆದುಕೊಂಡ ಚಲುವರಾಯಸ್ವಾಮಿ, ಪುಟ್ಟರಾಜು ಗೆಲುವಿಗೆ ಈ ಬಾರಿ ಪ್ರಾಮಾಣಿಕವಾಗಿ ಕೆಲಸ ಮಾಡಿದರು. ಕಳೆದ ಉಪಚುನಾವಣೆಯಲ್ಲಿ ಮದ್ದೂರಿನಲ್ಲಿ ರಮ್ಯಾಗೆ 10,520 ಮತಗಳ ಲೀಡ್ ದೊರಕಿತ್ತು, ಆದರೆ ಶಾಸಕ ತಮ್ಮಣ್ಣ ತನ್ನ ಮಗ ಸಂತೋಷ್‌ಗೆ ಟಿಕೆಟ್ ಸಿಗದಿದ್ದರೂ ಪುಟ್ಟರಾಜು ವಿರುದ್ಧ ಬೇಸರ ಮಾಡಿಕೊಳ್ಳದೆ ಹಗಲು-ರಾತ್ರಿ ಕೆಲಸ ಮಾಡಿದ ಪರಿಣಾಮ ಈ ಬಾರಿ 12,750 ಮತಗಳ ಲೀಡ್ ಸಿಕ್ಕಿದೆ.

ಇನ್ನು ಮೇಲುಕೋಟೆ ಕ್ಷೇತ್ರದ ಮತದಾರರು ಪುಟ್ಟರಾಜುಗೆ 17,500ಕ್ಕೂ ಹೆಚ್ಚು ಮತಗಳ ಲೀಡ್ ಕೊಡಿಸುವ ಮೂಲಕ ರಮ್ಯಾಗೆ ಕೈ ಕೊಟ್ಟು ಪುಟ್ಟರಾಜು ಕೈ ಹಿಡಿದಿದ್ದಾರೆ. ಸ್ವಕ್ಷೇತ್ರ ಮೇಲುಕೋಟೆಯ ಚಿನಕುರುಳಿ ಗ್ರಾಮದ ಪುಟ್ಟರಾಜು 2 ಬಾರಿ ಸೋತಿದ್ದನ್ನು ಕಂಡು ಕರಗಿರುವ ಮತದಾರರು 17,500ಕ್ಕೂ ಹೆಚ್ಚು ಮತಗಳ ಲೀಡ್‌ನ್ನು ಕೊಡುವ ಮೂಲಕ ಪುಟ್ಟರಾಜು ಗೆಲುವಿಗೆ ಕಾರಣರಾಗಿದ್ದಾರೆ. ಕಳೆದ ಉಪಚುನಾವಣೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಜೆಡಿಎಸ್ ಶಾಸಕ ರಮೇಶ್‌ಬಾಬು ಇದ್ದರೂ ಕೂಡ ರಮ್ಯಾ 8,774 ಮತಗಳ ಲೀಡ್ ಗಳಿಸಿದ್ದರು. ಈ ಬಾರಿ ಜೆಡಿಎಸ್‌ನ ಪುಟ್ಟರಾಜು 2,800 ಮತಗಳ ಅಲ್ಪ ಲೀಡ್ ಗಳಿಸಿದ್ದಾರೆ.

ಮಂಡ್ಯ ಲೋಕಸಭಾ ವ್ಯಾಪ್ತಿಯ 8 ಕ್ಷೇತ್ರಗಳಾದ ಮಂಡ್ಯ, ಮಳವಳ್ಳಿ, ನಾಗಮಂಗಲ, ಕೆ.ಆರ್.ಪೇಟೆ, ಕೆ.ಆರ್.ನಗರದಲ್ಲಿ ಕಾಂಗ್ರೆಸ್‌ನ ರಮ್ಯಾ ಲೀಡ್ ಪಡೆದಿದ್ದರೂ ಕಳೆದ ಬಾರಿಗೆ ಹೋಲಿಸಿದರೆ ಏನೇನೂ ಅಲ್ಲ. ಕಳೆದ ಬಾರಿ ನಾಗಮಂಗಲದಲ್ಲಿ ರಮ್ಯಾಗೆ 12,258 ಮತಗಳ ಲೀಡ್ ದೊರಕ್ಕಿತ್ತು. ಈ ಬಾರಿ ಕೇವಲ 2,550 ಮತಗಳ ಲೀಡ್ ದೊರಕಿದೆ. ಎಲ್.ಆರ್.ಶಿವರಾಮೇಗೌಡ ಅಂಬಿ ಬಣಕ್ಕೆ ಸೇರಿದ್ದರಿಂದಾಗಿ ಕಳೆದ ಬಾರಿಯಂತೆ ಈ ಬಾರಿ ಕೈ ಜೋಡಿಸದ ಕಾರಣ ರಮ್ಯಾಗೆ ಅಲ್ಪ ಪ್ರಮಾಣದ ಲೀಡ್ ದೊರಕಿದೆ. ಜೆಡಿಎಸ್ ಶಾಸಕ ಸಾ.ರಾ.ಮಹೇಶ್ ಪ್ರತಿನಿಧಿಸುವ ಕೆ.ಆರ್.ನಗರ ಕ್ಷೇತ್ರದಲ್ಲಿ ಕಳೆದ ಬಾರಿ ರಮ್ಯಾಗೆ 337 ಮತಗಳ ಲೀಡ್ ಪಡೆದಿದ್ದು ಈ ಬಾರಿ 2000ಕ್ಕೂ ಹೆಚ್ಚು ಮತಗಳ ಲೀಡ್ ಗಳಿಸಿದ್ದಾರೆ. ಕೆ.ಆರ್.ಪೇಟೆಯಲ್ಲಿ ಕಳೆದ ಬಾರಿ ರಮ್ಯಾಗೆ 5,912ಮತಗಳ ಲೀಡ್ ದೊರಕಿದ್ದು ಈ ಬಾರಿ ಅದರ ಪ್ರಮಾಣ ಕೇವಲ 1337 ಮತಗಳಿಗೆ ಕುಸಿದಿದೆ.

ಮಂಡ್ಯದಲ್ಲಿ ಕಳೆದ ಬಾರಿ 14,081 ಮತಗಳ ಲೀಡ್ ರಮ್ಯಾಗೆ ದೊರಕಿತ್ತು, ಈ ಬಾರಿ ಸಚಿವ ಅಂಬರೀಶ್ ಮತ್ತದರ ಬೆಂಬಲಿಗರು ಕೈ ಕೊಟ್ಟ ಪರಿಣಾಮ ಕೇವಲ 6,929 ಮತಗಳ ಲೀಡ್ ರಮ್ಯಾಗೆ ಸಿಕ್ಕಿದೆ.

ಇನ್ನು ಮಳವಳ್ಳಿ ಕ್ಷೇತ್ರದ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ ಕಳೆದ ಚುನಾವಣೆಯಲ್ಲಿ 23,399 ಮತಗಳ ಭಾರೀ ಅಂತರದ ಲೀಡ್‌ನ್ನು ರಮ್ಯಾಗೆ ಕೊಡಿಸಿದ್ದರು. ಜೆಡಿಎಸ್‌ನ ಹಣದ ಅರ್ಭಟದ ನಡುವೆಯೂ ನರೇಂದ್ರಸ್ವಾಮಿ ಈ ಬಾರಿ 14,800 ಮತಗಳ ಲೀಡ್‌ನ್ನು ರಮ್ಯಾಗೆ ಕೊಡಿಸುವಲ್ಲಿ ಶಕ್ತರಾಗಿದ್ದಾರೆ.

ಜೆಡಿಎಸ್ ನಾಯಕರ ಒಗ್ಗಟ್ಟಿನ ಮಂತ್ರ

ಜಾ.ದಳ ಭದ್ರಕೋಟೆಯಂದೇ ಹೆಸರಾಗಿದ್ದ ಮಂಡ್ಯ ಕ್ಷೇತ್ರವನ್ನು ಹೇಗಾದರೂ ಸರಿಯೇ ಉಳಿಸಿಕೊಳ್ಳಬೇಕು. ಇಲ್ಲದಿದ್ದರೆ ಕ್ಷೇತ್ರದ ಮೇಲಿನ ಹಿಡಿತ ಕೈತಪ್ಪುವುದು ಗ್ಯಾರಂಟಿ ಎಂದುಕೊಂಡ ದೇವೇಗೌಡರು ಜಿಲ್ಲಾ ಜೆಡಿಎಸ್‌ನ ಎಲ್ಲಾ ನಾಯಕರನ್ನು ಕರೆಸಿ ಕಿವಿಹಿಂಡಿ ಬುದ್ಧಿ ಹೇಳಿದ ಪರಿಣಾಮ ಕಳೆದ ಚುನಾವಣೆಯ 67,000 ಮತಗಳ ಲೀಡ್‌ನ್ನು ತೀರಿಸಿ 5,518ಮತಗಳ ಅಂತರದಿಂದ ಪುಟ್ಟರಾಜು ಗೆಲ್ಲುವುದು ಸಾಧ್ಯವಾಯಿತು. ಕಳೆದ ಚುನಾವಣೆಯಲ್ಲಿ ಶಾಸಕ ಚಲುವರಾಯಸ್ವಾಮಿ ಜೊತೆ ಪುಟ್ಟರಾಜು ಸಂಬಂಧ ಅಷ್ಟಕಷ್ಟೆ ಎಂಬಂತಿತ್ತು, ಪುಟ್ಟರಾಜು ಸೋಲಲು ಇದೂ ಒಂದು ಕಾರಣವಾಗಿತ್ತು, ಇದನ್ನು ಗಮನಿಸಿದ ದೊಡ್ಡಗೌಡರು ಚಲುವರಾಯಸ್ವಾಮಿ ಹಾಗೂ ಡಿ.ಸಿ.ತಮ್ಮಣ್ಣ ಹೆಗಲಿಗೆ ಪುಟ್ಟರಾಜು ಗೆಲ್ಲಿಸುವ ಹೊಣೆ ಹೊರಿಸಿದ್ದರು. ಅದರಂತೆ ಪ್ರಚಾರ, ಹಣಕಾಸು, ಕಾರ್ಯಕರ್ತರಲ್ಲಿ ಒಗ್ಗಟ್ಟು ಮೂಡಿಸಿದ ಚಲುವರಾಯಸ್ವಾಮಿ ಮಾಡಿದ ತಂತ್ರಗಾರಿಕೆ ಕೂಡ ಅತ್ಯಲ್ಪ ಮತಗಳಾದರೂ ಪುಟ್ಟರಾಜು ಗೆಲುವಿನ ನಗೆ ಬೀರಲು ಕಾರಣವಾಗಿದೆ. ಅಲ್ಲದೆ ಪುಟ್ಟರಾಜು ಈ ಬಾರಿ ಸೋತಿದ್ದರೆ ಅವರ ರಾಜಕೀಯ ಭವಿಷ್ಯವೇ ಮಸುಕಾಗುತ್ತಿತ್ತು, ಹಾಗಾಗಿ ಈ ಬಾರಿ ಕೈ ಬಿಚ್ಚಿ ಖರ್ಚು ಮಾಡಿದ್ದು ಕೂಡ ಪುಟ್ಟರಾಜು ಗೆಲುವಿಗೆ ಸಹಕಾರಿಯಾಯಿತು.

ರಮ್ಯಾ ಕೈ ಬಿಟ್ಟ ಅಂಬಿ

ಕಳೆದ 6 ತಿಂಗಳ ಹಿಂದೆ ನಡೆದ ಮಂಡ್ಯ ಲೋಕಸಭಾ ಉಪಚುನಾವಣೆಯಲ್ಲಿ ಗೆಲ್ಲಲು ಅನೇಕ ಕಾರಣಗಳಿದ್ದವು. ಕನ್ನಡ ಚಿತ್ರರಂಗದ ಮೋಹಕ ತಾರೆ ರಮ್ಯಾ ಮಂಡ್ಯಕ್ಕೆ ಎಂಟ್ರಿ ಕೊಟ್ಟದ್ದೇ ಕಡೇಗಳಿಗೆಯಲ್ಲಿ, ನಾಮಪತ್ರ ಸಲ್ಲಿಸಿದ್ದ ದಿನವೇ ಆಕೆಯ ಸಾಕುತಂದೆ ಆರ್.ಟಿ.ನಾರಾಯಣ್ ತೀರಿಕೊಂಡಿದ್ದು ಮತದಾರರಲ್ಲಿ ಅನುಕಂಪ ಮೂಡಿಸಿತ್ತು, ಆಗಷ್ಟೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಅಂಬರೀಶ್‌ಗೆ ಚುನಾವಣೆ ಪ್ರತಿಷ್ಠೆಯಾಗಿತ್ತು, ಜಿಲ್ಲಾ ಕಾಂಗ್ರೆಸ್‌ನಲ್ಲಿ ಅಂಬಿ-ಕೃಷ್ಣ ಬಣಗಳು ಒಗ್ಗಟ್ಟಿನಿಂದ ಕೆಲಸ ಮಾಡಿದ ಪರಿಣಾಮ ರಮ್ಯಾ ಉಪಚುನಾವಣೆಯಲ್ಲಿ 67 ಸಾವಿರ ಮತಗಳ ಅಂತರದಿಂದ ಗೆಲ್ಲಲು ಕಾರಣವಾಗಿತ್ತು, ಆದಾಗಿ 6 ತಿಂಗಳು ಕಳೆಯುವಷ್ಟರಲ್ಲಿ ರಮ್ಯಾ ಅಂಬಿ ಬಣದ ದ್ವೇಷ ಕಟ್ಟಿಕೊಂಡರು. ಅಂಬಿ ಬೆಂಬಲಿಗರನ್ನು ಕಡೆಗಣಿಸಿದ್ದಲ್ಲದೆ ತನ್ನ ಕಾರ್ಯವೈಖರಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಕೆಂಗಣ್ಣಿಗೂ ರಮ್ಯಾ ಗುರಿಯಾಗಿದ್ದರು. ಅಂಬಿ ಸಿಂಗಾಪುರದಲ್ಲಿದ್ದಾಗ ರಮ್ಯಾ ಆಡಿದ ಉಡಾಫೆ ಮಾತುಗಳಿಂದ ಸಿಟ್ಟಾಗಿದ್ದ ಅಂಬಿ ಬೆಂಬಲಿಗರು ರಮ್ಯಾಗೆ ಸರಿಯಾದ ಪಾಠ ಕಲಿಸಬೇಕೆಂದು ಅವಕಾಶಕ್ಕಾಗಿ ಕಾಯುತ್ತಿದ್ದರು. ಆ ಅವಕಾಶ ಈ ಚುನಾವಣೆಯಲ್ಲಿ ಒದಗಿಬಂತು. ರಮ್ಯಾರನ್ನು ಸೋಲಿಸಿ ಸೇಡು ತೀರಿಸಿಕೊಂಡೇಬಿಟ್ಟಿದ್ದಾರೆ.

ರಮ್ಯಾ ಸೋಲಿಗೆ ಕಾರಣಗಳು


ಜಿಲ್ಲಾ ಕಾಂಗ್ರೆಸ್‌ನಲ್ಲಿರುವ ಎಸ್.ಎಂ. ಕೃಷ್ಣ-ಅಂಬಿ ಬಣಗಳ ಗುದ್ದಾಟದಿಂದ ಈ ಬಾರಿ ರಮ್ಯಾ ಚುನಾವಣೆ ಹೇಗೆ ಎದುರಿಸುತ್ತಾರೆಂಬ ಕುತೂಹಲ ಜಿಲ್ಲೆಯಾದ್ಯಂತ ಕೇಳಿಬರುತ್ತಿತ್ತು, ಸಂಸದ ರಮ್ಯಾ ಕೂಡ 6 ತಿಂಗಳಲ್ಲೇ ಸಚಿವ ಅಂಬಿ ಜೊತೆ ಮನಸ್ತಾಪ ಮಾಡಿಕೊಂಡಿದ್ದರು. ರಮ್ಯಾ ಮಂಡ್ಯದ ಯಾವುದೇ ಸಮಾರಂಭಕ್ಕೆ ಬರಲಿ ಅಂಬಿ ಗಮನಕ್ಕೆ ತರುತ್ತಿರಲಿಲ್ಲ, ಸಂಸದೆಯಾದ ಮೇಲೆ ಅಂಬಿ ಬೆಂಬಲಿಗರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮೂಲೆಗುಂಪು ಮಾಡಿದ್ದರು. ಇನ್ನು ಅಂಬಿ- ಜಿಲ್ಲಾಧ್ಯಕ್ಷ ಆತ್ಮಾನಂದರಿಗೂ ಎಣ್ಣೆ ಸೀಗೆಕಾಯಿ ಸಂಬಂಧ. ಅಂಬಿ ಬೆಂಬಲಿಗರನ್ನು ಜಿಲ್ಲಾಧ್ಯಕ್ಷ ಸ್ಥಾನದಿಂದ ಆತ್ಮಾನಂದರನ್ನು ಬದಲಾಯಿಸಲು ಹೊರಟಾಗ ರಮ್ಯಾ ಸ್ಪಂದಿಸಲೇ ಇಲ್ಲ.

ಶ್ರೀರಂಗಪಟ್ಟಣದಲ್ಲಿ ಕಾಂಗ್ರೆಸ್ ವಿರೋಧಿ ಮುಖಂಡರ ಮನೆಗೆ ಹೋದ ರಮ್ಯಾಳನ್ನು ಪ್ರಶ್ನಿಸಿದ ಕಾಂಗ್ರೆಸ್ ಕಾರ್ಯಕರ್ತರನ್ನೇ ತರಾಟೆಗೆ ತೆಗೆದುಕೊಂಡು ರಮ್ಯಾ ನೀವ್ಯಾರೂ ಅದನ್ನೆಲ್ಲ ಕೇಳೋಕೆ ಎಂದು ಆವಾಜ್ ಹಾಕಿ ಕಾಂಗ್ರೆಸ್ಸಿಗರ ಕೋಪಕ್ಕೆ ಗುರಿಯಾಗಿದ್ದರು. ಮಂಡ್ಯ ಕ್ಷೇತ್ರದ ಯಾವುದೇ ಭಾಗಕ್ಕೆ ರಮ್ಯಾ ಭೇಟಿ ಕೊಡುವಾಗ ಸ್ಥಳೀಯ ನಾಯಕರಿಗೆ ಸೌಜನ್ಯಕ್ಕೂ ತಿಳಿಸುತ್ತಿರಲಿಲ್ಲ, ಆನೆ ನಡೆದದ್ದೇ ದಾರಿ ಎಂಬಂತೆ ಬರುತ್ತಿದ್ದ ರಮ್ಯಾಳ ಈ ವರ್ತನೆ ವಿರುದ್ಧ ಸ್ಥಳೀಯ ಮುಖಂಡರೇ ದೂರಲಾರಂಭಿಸಿದರು. ನಾವೇ ಗೆಲ್ಲಿಸಿ ಕಳುಹಿಸಿದ ಸಂಸದೆ ಈ ರೀತಿ ವರ್ತಿಸಿದರೆ ಹೇಗಪ್ಪಾ ಎಂದು ಕಾಂಗ್ರೆಸ್ಸಿಗರೇ ರಾಜ್ಯ ನಾಯಕರ ಮುಂದೆ ಅಳಲು ತೋಡಿಕೊಳ್ಳುವಂತಾಯಿತು. ರಾಹುಲ್‌ಗಾಂಧಿ ಆಪ್ತ ಬಳಗದಲ್ಲಿದ್ದೇನೆ ಎನ್ನುವ ಅಹಂ ರಮ್ಯಾಗೆ ಇದ್ದರಿಂದ ಸಚಿವ ಅಂಬಿ ಮಾತಿಗೆ ಕೇರ್ ಮಾಡುತ್ತಿರಲಿಲ್ಲ. ಅಂಬಿಗಿಂತಲೂ ಸಾಕಷ್ಟು ಬಾರಿ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದ ರಮ್ಯಾ ತನ್ನದೇ ಇಮೇಜ್ ಬೆಳೆಸಿಕೊಳ್ಳಲು ಮುಂದಾಗಿದ್ದು ಅಂಬಿ ಮುನಿಸಿಗೆ ಕಾರಣವಾಗಿತ್ತು, ತಾನು ಅನಾರೋಗ್ಯದಿಂದ ಇದ್ದಾಗ ರಮ್ಯಾ ನೀಡಿದ ಬಾಲಿಶ ಹೇಳಿಕೆಗಳು ಅಂಬಿಗೆ ನೋವುಂಟು ಮಾಡಿದ್ದವು. ಮಂಡ್ಯದ ಜನರಿಗೆ ಟ್ವಿಟ್ಟರ್, ವಾಟ್ಸ್ ಅಪ್, ಫೇಸ್‌ಬುಕ್ ಗೊತ್ತಾಗೊಲ್ಲ ಎಂದು ರಮ್ಯಾಳನ್ನು ಕಿಚಾಯಿಸಿದ ಅಂಬಿ ವಿರುದ್ಧ ಗರಂ ಆದ ರಮ್ಯಾ ನನ್ನ ಹೇಳಿಕೆಗೆ ಬದ್ಧವಾಗಿದ್ದು ಯಾರೇ ಹೇಳಿದರೂ ಇವನ್ನೆಲ್ಲಾ ಬಿಡಲು ಸಾಧ್ಯವಿಲ್ಲ ಎಂದು ಟ್ವೀಟ್ ಮಾಡುವ ಮೂಲಕ ಅಂಬಿಗೆ ತಿರುಗೇಟು ನೀಡಿದ್ದರು. ಇನ್ನು ಅಂಬಿ ಅನಾರೋಗ್ಯದಿಂದ ಇದ್ದಾಗ ರಮ್ಯಾ ಆಡಿದ ಮಾತುಗಳಿಂದ ಬೇಸರಗೊಂಡ ಅಂಬಿ ಬೆಂಬಲಿಗರು ಅಂತಿಮವಾಗಿ ರಮ್ಯಾಳನ್ನೇ ಸೋಲಿಸಲೇ ಬೇಕೆಂದು ಸ್ಕೆಚ್ ಹಾಕಿದ್ದರು. ಅಂಬಿ ಬೆಂಬಲಿಗರಾದ ಅಮರಾವತಿ ಚಂದ್ರಶೇಖರ್, ಶಿವಾನಂದ, ಲಿಂಗರಾಜು, ಸಚ್ಚಿದಾನಂದ, ಎಲ್.ಟಿ.ರ[illegible] ಸೇರಿದಂತೆ ಎಲ್ಲರೂ ರಮ್ಯಾ ಸೋಲಿಸಲೇಬೇಕೆಂದು ಚುನಾವಣೆಗೂ ಮುನ್ನವೇ ತೀರ್ಮಾನಿಸಿ ಬಿಟ್ಟಿದ್ದರು. ನಿರ್ಧರಿಸಿದ್ದರು. ಚುನಾವಣೆಯಲ್ಲಿ ರಮ್ಯಾಳಿಂದಲ[illegible] ಇಡಿಗಂಟು ಪಡೆದ ಅಂಬಿ ಶಿಷ್ಯರು ಅತ್ತ ಜೆಡಿಎ[illegible] ಮುಖಂಡರಿಂದಲೂ ಭರ್ಜರಿ ಪ್ರಸಾದ ಸ್ವೀಕರಿಸಿ ರಮ್[illegible] ಸೋಲಿಗೆ ಕಾಣಿಕೆ ಸಲ್ಲಿಸಿದ್ದಾರೆ. ಅಂಬಿ ಕೂಡ ಬೆಂಬಲಿಗ[illegible] ತಾಳಕ್ಕೆ ಕುಣಿದು ಅನಾರೋಗ್ಯವನ್ನೇ ಮುಂದಿಟ್ಟುಕೊಂಡು ರಮ್ಯಾ ಸೋಲಿಗೆ ಪರೋಕ್ಷವಾಗಿ ಕಾರಣರಾಗಿದ್ದಾರೆ. ರಮ್[illegible] ಕಾಂಗ್ರೆಸ್ ನಾಯಕರನ್ನು ಒಟ್ಟಾಗಿ ತೆಗೆದುಕೊಂಡು ಹೋಗದಿರುವುದು, ದಾಢಸಿ ವ್ಯಕ್ತಿತ್ವ, ಅತಿಯಾದ ಆತ್ಮವಿಶ್ವಾಸದಿಂದಲೇ ಸೋತಿದ್ದಾರೆ ಎಂದರೆ ತಪ್ಪಾಗಲಾರದು.

● ಮಂಡ್ಯ ನಾಗೇಶ

...ಹಿಂದೂತ್ವದ ಬಿಗಿಬಂಧನದಲ್ಲಿ ಕರಾವಳಿ!!








...ಕರಾವಳಿಯ ಮೂರೂ ಲೋಕಸಭಾ ಕ್ಷೇತ್ರಗಳಿಂದ ...ನಿರ್ಘಾತದ ಫಲಿತಾಂಶ ಬಂದಿದೆ! ರಾಜಕೀಯ ...ಪಡಿಯ ಪಂಡಿತ-ಪಾಮರರ ಲೆಕ್ಕಾಚಾರಗಳೆಲ್ಲವೂ ...ಲ್ಟಾ-ಪಲ್ಟಾ ಹೊಡೆದಿದೆ. ಬಿಜೆಪಿ ದಕ್ಷಿಣ ಕನ್ನಡ, ಉಡುಪಿ ...ಕ್ಕಮಗಳೂರು ಮತ್ತು ಉತ್ತರ ಕನ್ನಡ ಕ್ಷೇತ್ರದಲ್ಲಿ ಲಕ್ಷಾಂತರ ...ಮತಾಂತರದಿಂದ ಗೆದ್ದಿರುವುದು ಆ ಪಾರ್ಟಿಯ ಮುಖೇಡಿ ...ಡಿಡೇಟ್‌ಗಳಿಗೇ ಆನಂದಾಘಾತ ಮೂಡಿಸಿದೆ. ...ದೂತ್ವದ ಹಿಡನ್ ಅಜೆಂಡಾದಿಂದ ಹಿಂಡಿ ಹಿಪ್ಪೆಯಂತಾ...ವ ಕರಾವಳಿಯ ಮಂದಿ ಮತ್ತದೇ ಜನಿವಾರದ ಬಿಗಿ ...ಧನಕ್ಕೆ ತಮ್ಮನ್ನು ಒಡ್ಡಿಕೊಂಡಿರುವುದು ವಿಪರ್ಯಾಸವೇ

...ಇಡೀ ದಕ್ಷಿಣ ಕನ್ನಡ ಹಿಂದೂತ್ವದ ಅಮಲಲ್ಲಿ ...ಲಾಡುತ್ತಿದೆ. ಹಿಂದೂತ್ವದ ಪ್ರಯೋಗಶಾಲೆಯಂತಾಗಿರುವ ... ಕ್ಷೇತ್ರದಲ್ಲಿ ಬಿಜೆಪಿ ಅದ್ಯಾವ ಪರಿ ಸೈತಾನ ಶಕ್ತಿ ...ಚಿಕೊಂಡಿದೆ ಎಂದರೆ, ಸ್ವತಃ ಆರೆಸ್ಸೆಸ್ 'ಡಾನ್' ಕಲ್ಲಡ್ಕ ...ಟ್ಟನೇ ಒಳಗೊಳಗೇ ಕಾಂಗ್ರೆಸ್ ಪರ ಕೆಲಸ ಮಾಡಿದರೂ ...ಪಕ್ಷ ಸೋಲದಷ್ಟು ಕಸುವು ಪಡೆದಿದೆ. ಇಲ್ಲಿಯ ...ವರ ಕೇಸರೀಕರಣ ಜಾತಿ ಲೆಕ್ಕಾಚಾರ, ಮನುಷ್ಯತ್ವ ...ವುದೂ ಲೆಕ್ಕಕ್ಕೆ ಬಾರದಂತೆ ಮಾಡಿಬಿಟ್ಟಿದೆ. ಬಿಲ್ಲವರು ...ತ್ತು ಮುಸ್ಲಿಮರು ಒಂದಾಗಿ ಓಟು ಜಡಿದರೂ ಸಾಕು, ...ಪಿ ಈ ಕ್ಷೇತ್ರದಲ್ಲಿ ಹೇಳ ಹೆಸರಿಲ್ಲದಂತಾಗುತ್ತದೆ. ...ಸೆ ಹಿಂದುಳಿದ ವರ್ಗದ ಬಿಲ್ಲವರಿಗೆ, ಚೆಡ್ಡಿಗಳಿಂದ ...ಸಿಕೊಳ್ಳುತ್ತಿರುವ ಅಲ್ಪಸಂಖ್ಯಾತರಿಗೆ ಸಂಘ ಪರಿವಾರದ ...ಮತುಗಳು ಅರ್ಥವೇ ಆಗುತ್ತಿಲ್ಲ. ಆ ಮಟ್ಟಿಗೆ ದಕ್ಷಿಣ ...ಡದ ಶೂದ್ರಾದಿಗಳ ಬ್ರೇನ್‌ವಾಶ್ ಹಿಂದೂತ್ವ- ಮೋದಿತ್ವದ ...ಶಪ್ ಮಾಡಿಬಿಟ್ಟಿದೆ.

...ಈ ಬಾರಿ ಜನಪರ ಬದ್ಧತೆಯ ಕಾಂಗ್ರೆಸ್ ನಾಯಕ ...ನಾರ್ದನ ಪೂಜಾರಿ ಸಣ್ಣ ಅಂತರದಲ್ಲಾದರೂ ...ಲ್ಲುತ್ತಾರೆಂದು ಬಿಜೆಪಿಯ ಭೂಪರೇ ಹೇಳುತ್ತಿದ್ದರು. ಇದಕ್ಕೆ ...ಖ್ಯ ಕಾರಣ ಕರಾವಳಿ ಬಿಜೆಪಿ ದೊರೆ ಕಲ್ಲಡ್ಕ ಭಟ್ಟರಿಗೆ ...ಸ್ವದ ನಳಿನ್‌ಕುಮಾರ್ ಕಟೀಲ್ ಎಂಬ ಹಗಲು ಹಾದರ ...ಸೋ ಗೆಲ್ಲೋದು ಬೇಕಾಗಿರಲಿಲ್ಲ. ಈ ಕಲ್ಲಡ್ಕ ಭಟ್ಟ ...ಗ್ರೆಸ್‌ನ ಜನಾರ್ದನ ಪೂಜಾರಿ ಜತೆ ಒಳ ಒಪ್ಪಂದವೂ ...ಡಿಕೊಂಡಂತಿತ್ತು. ಹಾಗೆಯೇ ರಂಗೀಲಾ ರಗಳೆಗಳು, ...ಗೇಡಿತನದಿಂದ ನಳಿನ್ ಹೆಸರು ಕೆಡಿಸಿಕೊಂಡಿದ್ದರು. ...ಡೂ ಬಿಜೆಪಿ ಒಂದೂಕಾಲು ಲಕ್ಷ ಮತದಂತರದಿಂದ ಗೆದ್ದಿದೆ! ಯಾಕೆ?

ಯಾಕೆಂದರೆ, ಮೊದಲ ಕಾರಣ ದಕ್ಷಿಣ ಕನ್ನಡದ ಬಹುಸಂಖ್ಯಾತ ಶೂದ್ರರು ಸಂಘ ಪರಿವಾರದ ಹುನ್ನಾರಗಳಿಗೆ ಸುಲಭವಾಗಿ ಬಲಿ ಬೀಳುತ್ತಿದ್ದಾರೆ. ಇನ್ನೊಂದು ಕಾಂಗ್ರೆಸ್‌ನಲ್ಲೇ ಜನಾರ್ದನ ಪೂಜಾರಿಯ ಹೆಡ್ ಮಾಸ್ತರಿಕೆ ವಿರೋಧಿಸುವ ದೊಡ್ಡದೊಂದು ಗ್ಯಾಂಗ್ ವ್ಯವಸ್ಥಿತವಾಗಿ ಕೆಲಸ ಮಾಡಿದೆ.. ಕಾಂಗ್ರೆಸಿನ ಕಾಲೆಳೆಯುವ ಕಸರತ್ತುಗಳೇ ಮತ್ತೆ ಬಿಜೆಪಿಯನ್ನು ದಕ್ಷಿಣ ಕನ್ನಡದಲ್ಲಿ ಗೆಲ್ಲಿಸಿದೆಯೇ ಹೊರತು ಮೋದಿ

ಅಲೆಯೇನೂ ಇರಲಿಲ್ಲ! ಪ್ರಬಲ ಬಂಟರು ಜಾತಿ ಸ್ಪಿರಿಟ್‌ನಿಂದ ಓಟು ಹಾಕಿದಂತೆ ಬಿಲ್ಲವರು ತಮ್ಮ ಜಾತಿಯತೆ ತೋರಿಸಿಲ್ಲ. ಇದು ಬಿಲ್ಲವರ ಪೂಜಾರಿಯನ್ನು ಸೋಲಿಸಿ ಬಂಟರ ನಳಿನ್‌ನನ್ನು ಮತ್ತೆ ದಿಲ್ಲಿ ರೈಲು ಹತ್ತಿಸಿದೆ.


ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಮೋದಿ ಹವಾಕ್ಕಿಂತಲೂ ಜೋರಾಗಿ ಬೀಸಿದ್ದು ಬಿಜೆಪಿ ಅಭ್ಯರ್ಥಿಣಿ ಶೋಭಾ ಕರಂದ್ಲಾಜೆ ಯಡ್ಡಿಯ ಹಣದ ಹವಾ! ಸಿ.ಟಿ. ರವಿ, ಸುನಿಲ್ ಕುಮಾರ್‌ನಂಥ ಕಟ್ಟರ್ ಚೆಡ್ಡಿ ಶಾಸಕರೇ ಶೋಭಾ ವಿರುದ್ಧ ಮಸಲತ್ತು ಮಾಡಿದರೂ ಯಡ್ಡಿಯ ಸ್ವ-ಜಾತಿ ಬಂಧುಗಳಾದ ಲಿಂಗಾಯತರು ನಿರ್ಣಾಯಕ ಪಾತ್ರ ಆಡಿದ್ದಾರೆ. ಜತೆಗೆ ಜೆಡಿಎಸ್‌ನ ದಗಲುಬಾಜಿ ಹುರಿಯಾಳು ಧನಂಜಯ್ ಕುಮಾರ್‌ಗೆ ಹತ್ತು ಸಾವಿರದಷ್ಟು ಓಟು ಪಡೆಯಲಾಗಿಲ್ಲ. ಇದು ಬಿಜೆಪಿಗೆ ವರವಾಗಿದೆ.

ದುರಂತವೆಂದರೆ, ಜಯಪ್ರಕಾಶ್ ಹೆಗ್ಡೆಯಂಥ ಜನಪರವಾಗಿ ಸದಾ ಚಿಂತಿಸುವ ಅತ್ಯುತ್ತಮ ಪಾರ್ಲಿಮೆಂಟರಿಯನ್ ಸೋತಿರುವುದು. ಇದಕ್ಕೆ ಕಾರಣ ಕ್ಷೇತ್ರದಲ್ಲಿ ಬಿಜೆಪಿ ಹರಿಸಿದ ಹಿಂದೂತ್ವದ ಅಮಲು, ಹಣದ ಹೊಳೆ ಮತ್ತು ಅಡಿಕೆ ನಿಷೇಧದ ಗುಮ್ಮ. ಇದನ್ನು ಎದುರಿಸಲು ಜೆಪಿ ಏಕಾಂಗಿಯಾಗಿ ಹೋರಾಡಿದರೇ ಹೊರತು ಕಾಂಗ್ರೆಸ್‌ನ ಸ್ಥಳೀಯ ಮುಖಂಡರಿಗೆ ಪಾರ್ಟಿ ನಿಷ್ಠೆ ಎಂಬುದು ಇರಲಿಲ್ಲ. ಜೆಪಿ ಮೇಲಿನ ಅಸೂಯೆಯಿಂದ ಹಿಕಮತ್ತು ಮಾಡಿದ ಕಾಂಗ್ರೆಸ್‌ನ ಕಿಂಗ್‌ಗಳು ಶೋಭಾಗೆ ರಹಸ್ಯವಾಗಿ ನೆರವಾಗಿದ್ದಾರೆ.

ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಕರಾವಳಿ ಮತ್ತು ಮಲೆನಾಡು ಎರಡೂ ಕಡೆ ಜಾತಿ ಲೆಕ್ಕಾಚಾರಗಳು ವರ್ಕ್‌ಔಟ್ ಆದಂತಿಲ್ಲ. ಗುಪ್ತಗಾಮಿಯಾಗಿ ಹರಿಯುತ್ತಿದ್ದ ಕೇಸರಿ ಅಮಲು ಮತ್ತು ಆಡಳಿತ ವಿರೋಧಿ ಅಲೆ ಗುರುತಿಸಲು ಕಾಂಗ್ರೆಸ್‌ನಲ್ಲಿ ಸ್ಟ್ರೆಟಜಿಯೇ ಇರಲಿಲ್ಲ. ಜೆಪಿ ಏಕಾಂಗಿಯಾಗಿ ಹೋರಾಡಿದರೆ, ಶೋಭಾಗೆ ಸಕಲ ಸಂಪನ್ಮೂಲ-ಯಡ್ಡಿ ಸ್ಕೆಚ್- ಜಾತಿ ಗಣಿತ ಸಂಸದೆಯಾಗಿ ಮಾಡಿದೆ. ಆದರೆ ಈ ಗೆಲುವು ಶೋಭಾಗೆ ಬೆಚ್ಚಿಬೀಳಿಸಿದೆ. ಆಕೆ ಇಷ್ಟು ದೊಡ್ಡ ಅಂತರದಿಂದ ಗೆಲ್ಲುವ ನಿರೀಕ್ಷೆಯಲ್ಲಿ ಇರಲಿಲ್ಲ!!

ಉತ್ತರ ಕನ್ನಡದಲ್ಲಿ ಬಿಜೆಪಿ ಕ್ಯಾಂಡಿಡೇಟ್ ಅನಂತಕುಮಾರ್ ಹೆಗಡೆ ಯಾನೆ ಕ್ರಿಮಿನಲ್ ಅನಂತ್ಮಾಣಿಯ ವ್ಯರ್ಥ ಸಂಸದಗಿರಿ ವಿರುದ್ಧದ ಅಲೆಗಿಂತಲೂ ರಭಸವಾಗಿ ಕಾಂಗ್ರೆಸ್ ಅಭ್ಯರ್ಥಿ ಪ್ರಶಾಂತ್ ದೇಶಪಾಂಡೆಯ ಪಿತಾಜೀ-ಮಂತ್ರಿಜೀ ಆರ್.ವಿ. ದೇಶಪಾಂಡೆಯ ಪಾಳೆಗಾರಿಕೆ, ಕುಟುಂಬ ರಾಜಕಾರಣದ ವಿರುದ್ಧ ತುಫಾನೇ ಎದ್ದಿತ್ತು. ದೇಶಪಾಂಡೆ ನಿರಂತರವಾಗಿ ಮ್ಯಾಗಿ ಗೆಲ್ಲದಂತೆ ಮಾಡಿದ ದ್ರೋಹವೇ ಇವತ್ತು ಆತನಿಗೆ ತಿರುಗುಬಾಣವಾಗಿದೆ. ಬರೋಬ್ಬರಿ 1,47,832 ಮತದಂತರದಿಂದ ದೊಡ್ಡ ದೇಶಪಾಂಡೆ ಮತ್ತು ಸಣ್ಣ ದೇಶಪಾಂಡೆ ಮುಖಭಂಗ ಅನುಭವಿಸಿದ್ದಾರೆ. ಅಧಿಕಾರ ಸ್ಥಾನಗಳೆಲ್ಲವೂ ತನ್ನ ಜಾತಿಯವರಿಗೆ ಕರುಳಕುಡಿಗೇ ಬೇಕೆಂಬ ದೇಶಪಾಂಡೆಯ ಯಜಮಾನ ಸಂಸ್ಕೃತಿ ಕಾಂಗ್ರೈಗೆ ದುಬಾರಿಯಾಗಿದೆ.

ಬಿಜೆಪಿಯ ಅನಂತ್ಮಾಣಿ ಜನದ್ರೋಹಿ, ನಿದ್ದೆ ಬಡುಕ, ಅಧಿಕ ಪ್ರಸಂಗಿ, ಭ್ರಷ್ಟ, ಅರಣ್ಯ ನುಂಗಣ್ಣ ಎಂಬ ಟೀಕೆ-ಮೂದಲಿಕೆ ಆತ ಹೋದಹೋದಲ್ಲಿ ಎದುರಾಗಿತ್ತು. ಆದರೆ ಹಿಂದೂತ್ವ-ಮೋದಿತ್ವದ ಒಳತುಡಿತ ನಾಲಾಯಕ್ ಅನಂತ್ಮಾಣಿಯನ್ನು ಮಾತ್ರ ಸಂಸದನನ್ನಾಗಿ ಮಾಡಿದೆ. ಆತನಿಗೆ



ಪಾರ್ಟಿಯಲ್ಲೇ ದೊಡ್ಡ ವಿರೋಧವಿತ್ತು. ಮಾಜಿ ಮಂತ್ರಿ ಕಾಗೇರಿ ಆತನನ್ನು ಸೋಲಿಸಲು ಏನೇನು ಮಸಲತ್ತು ಸಾಧ್ಯವೋ ಅದೆಲ್ಲ ಮಾಡಿದ್ದರು. ಮೋದಿ ಮೇನಿಯಾ ಮಾಣಿಯನ್ನು ಬಚಾವಾಗಿಸಿದೆ.

ದೇಶಪಾಂಡೆಯ ರಿಂಗ್ ಮಾಸ್ಟರಿಕೆ ಕಾಂಗ್ರೆಸ್‌ನಲ್ಲಿ ಅಸಮಾಧಾನ ಮೂಡಿಸಿತ್ತು. ಆತನ ವಿರುದ್ಧ ಬಹುಸಂಖ್ಯಾತ ದೀವರು (ಈಡಿಗರು) ತಿರುಗಿ ಬಿದ್ದಿದ್ದರು. ಈ ಹಿಂದುಳಿದ ಜಾತಿಯ ಭೀಮಣ್ಣ ನಾಯ್ಕ್, ಎನ್.ವಿ. ನಾಯ್ಕ್, ರವೀಂದ್ರನಾಥ ನಾಯ್ಕ್ ವಗೈರೆಗಳನ್ನು ದೇಶಪಾಂಡೆ ಹೊಸಕಿ ಹಾಕಿದ್ದರು. ಹಾಗೆಯೇ ದೇಶಪಾಂಡೆ ಬಹುವಾಗಿ ನೆಚ್ಚಿಕೊಂಡಿದ್ದ ಇನ್ನೊಂದು ಬಹುಸಂಖ್ಯಾತ ಸಮುದಾಯವಾದ ಬ್ರಾಹ್ಮಣರು ಆತನ ನಂಬಲೇ ಇಲ್ಲ. ಬ್ರಾಹ್ಮಣರು ಬಿಜೆಪಿ ಬೆಂಬಲಿಗರೆಂದು ಗೊತ್ತಿದ್ದು ದೇಶಪಾಂಡೆ ಮುಖೇಡಿ ಬ್ರಾಹ್ಮಣ ಲೀಡರ್‌ಗಳಾದ ಶಾಂತಾರಾಮ ಹೆಗಡೆ, ಶಿವಾನಂದ ಹೆಗಡೆ ವಗೈರೆ ವಿಪ್ರರನ್ನು ಕಟ್ಟಿಕೊಂಡಿದ್ದರು. ಇವರಿಂದ ಒಂದೇ ಒಂದು ಸ್ವಜಾತಿ ಮತ ಕಾಂಗ್ರೆಸ್‌ಗೆ ಕೊಡಿಸಲಾಗಲಿಲ್ಲ.

ದೇಶಪಾಂಡೆಗೆ ಕಾಂಗ್ರೆಸ್‌ನಲ್ಲಿ ಅನಂತ್ಮಾಣಿ ಬಿಜೆಪಿಯಲ್ಲಿದ್ದಕ್ಕಿಂತ ನೂರು ಪಟ್ಟು ವಿರೋಧವಿತ್ತು. ಕುಮಟಾದ ಶಾಸಕಿ ಶಾರದಾಶೆಟ್ಟಿ, ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್, ಕಾರವಾರ ಜೈಲುವಾಸಿ ಶಾಸಕ ಸತೀಶ್ ಸೈಲ್ ದೇಶಪಾಂಡೆಯ ದಾದಾಗಿರಿ ವಿರುದ್ಧ ಸಿಡಿದೆದ್ದು ಆತನ ಮಗನಿಗೆ ಓಟು ಬರದಂತೆ ಮಾಡಿದ್ದಾರೆ. ಬಿಜೆಪಿಯ ಅನಂತ್ಮಾಣಿ ಉತ್ತರ ಕನ್ನಡಿಗರ ಪಾಲಿಗೆ ಅನಿವಾರ್ಯ ಆಯ್ಕೆ. ಜೋಭದ್ರಗೇಡಿ ಮಾಣಿ ಇನ್ನಾದರೂ ತನ್ನನ್ನು ಗೆಲ್ಲಿಸಿದ ಜನರ ಋಣ ತೀರಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ. ಹಳೇ ಚಾಳಿ ಬಿಟ್ಟು ಜನರಿಗೆ ರಿಚೇಬಲ್ ಆಗಬೇಕಿದೆ.

ಉತ್ತರ ಕನ್ನಡದ ಲೋಕಸಭಾ ಎಲೆಕ್ಷನ್ ಫಲಿತಾಂಶ ಅನಂತ್ಮಾಣಿ ಮೇಲಿನ ಒಲವಿನ ಸಂಕೇತ ಅಲ್ಲ; ದೇಶಪಾಂಡೆ ಮೇಲಿನ ಸಿಟ್ಟಿನ ಪ್ರತೀಕ!!

● ವರದಿಗಾರ

...ಟ್ಲರನ ಮೊಟ್ಟೆಗಳು

...ನೆಂಬುವನು ಹುಟ್ಟನಿಂದಾದವನೇ?
...ರೊಳಗಿದ್ದ ಸತ್ತಿಲ್ಲದ ಸೈತಾನ
...ಹೂಂಕರಿಸಿದಾಗ
...ದ್ದಲ್ಲವೇ ಹಿಟ್ಲರನ ಘರ್ಜನೆ?

...ಬೀದಿಯಲ್ಲಿ ನಾಯಿಕುನ್ನಿಗಳ ಸಾವು
...ಜ ರಾಜಧರ್ಮ
...ದ ಆಕ್ರಂದನ ರಸಭಂಗವೆನ್ನುವುದು
...ಸಾಸನರ ಮನೋಧರ್ಮ
...ದು ಬುನಾದಿ? ಯಾವುದು ಮಹಲು?
...ಟಿಸಬಹುದೇ ಸಯಾಮೀ ಕವಲು?

...ಗಳಿಗಿಲ್ಲಾ ಒಂದೆ ಅಡಿಪಾಯ.
...ಯೂ ರಾಜಸೂಯ
...ಮಾಡದ ಕರುಣಿ... ಸಾಮಂತರು
...ದೂ ಕೊರತೆ ಇಲ್ಲ.


ಭರವಸೆ ಕೊಟ್ಟ ಯಾವುದೂ ಬದಲಿಸಲಿಲ್ಲ ವರಸೆ
ಗೆಲುವೆಂದರೆ ಸೋಲಿನ ಹೊಸ ದಿರಿಸೇ?

ಕ್ರಿಯೆಗೆ ತಕ್ಕ ಪ್ರತಿಕ್ರಿಯೆ
ನರಮೇಧ ಶುದ್ಧ ವಿಜ್ಞಾನ
ಪ್ರಶ್ನೆಗಳ ಸಾವೇ ಉತ್ತರದ ಮೋಕ್ಷ
ಆಧ್ಯಾತ್ಮದ ಸನಾತನ ವ್ಯಾಖ್ಯಾನ
ಯಾವುದು ಕಾರಣ? ಯಾವುದು ಪರಿಣಾಮ?
ಯುದ್ಧದಲ್ಲಿ ಮೊದಲು ಆತ್ಮಸಾಕ್ಷಿಯ ನಿರ್ನಾಮ

ಇದ್ದ ಇಬ್ಬರಲ್ಲಿ ಜಾಗವೆಲ್ಲಿತ್ತು ಮೂರನೆಯ ಹಿಟ್ಲರನಿಗೆ?
ನನ್ನೊಳಗೇ ಇದ್ದ ಅವನನ್ನು ಹೊರದಬ್ಬಿದ್ದು ಯಾರು?
ಎಲ್ಲಿತ್ತು ಈ ಅಂತರ?
ಸತ್ತಿದ್ದು ನಾನೋ? ಸತ್ತಿದ್ದು ಅವನೋ?
ದಕ್ಕಬಹುದೇ ಎಂದಾದರೂ ಉತ್ತರ?

ಬಹಿರಂಗದ ಹಿಟ್ಲರ ಬರಿಯ ಒಂದು ರೋಬೊಟು
ಅಂತರಂಗದಲ್ಲಿ ಒಡಬಿದ್ದರೆ ಅವನ ಸಾರೋಟು

● ಶಿವಸುಂದರ್



ಕತೆ

ಚುನಾವಣೆಗಳ ಫಲಿತಾಂಶ ಹೊರಬಿದ್ದಿದೆ. ಈ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಬಿಜೆಪಿಯ ನಾಯಕ ನರೇಂದ್ರ ಮೋದಿ ಒಮ್ಮೆ ತನ್ನ ಭಾಷಣದಲ್ಲಿ ಬಾಂಗ್ಲಾದೇಶದಿಂದ ಅಕ್ರಮವಾಗಿ ಭಾರತಕ್ಕೆ ನುಸುಳಿರುವ ಮುಸಲ್ಮಾನರನ್ನು ವಾಪಸ್ ಒದ್ದೋಡಿಸಲಾಗುವುದು ಎಂದು ಹೇಳಿದ್ದ. ಆದರೆ ಯಾರು ಅಕ್ರಮವಾಗಿ ಬಂದಿರುವ ಮುಸಲ್ಮಾನರು, ಯಾರು ಇಲ್ಲಿಯೇ ಜನಿಸಿದ ಮುಸಲ್ಮಾನರು ಎಂದು ನಿರ್ಧರಿಸುವುದು ಯಾರು ಮತ್ತು ಹೇಗೆ? ಈ ಹಿನ್ನೆಲೆಯಲ್ಲಿ 1995ರಲ್ಲಿ ಎನ್.ಎಸ್. ಮಾಧವನ್ ಅವರು ಬರೆದಿದ್ದ ಕತೆಯ ಅನುವಾದವನ್ನು ಪ್ರಕಟಿಸುತ್ತಿದ್ದೇವೆ. ಮೋದಿ ಎಂಬ ಕೋಮುವಾದಿ ಈ ದೇಶದ ಪ್ರಧಾನಿ ಆದರೆ ಇಲ್ಲಿರುವುದು ಕೇವಲ ಕಾಲ್ಪನಿಕ ಕತೆ ಆಗುವುದಿಲ್ಲ, ಬದಲಾಗಿ ವಾಸ್ತವವಾಗುವ ಅಪಾಯ ಇದೆ...

ಮುಂಬೈ

ಬಾಲ್ಯದ ನೆನಪುಗಳು ಈ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಅಜೀಜನಿಗೆ ನೆರವಾಗುತ್ತಿದ್ದವು. ಅದು ಎಲ್ಲರ ವಿಷಯದಲ್ಲೂ ನಿಜವಿರಬಹುದು. ಆದರೆ ಆಡಮ್ ವಿಷಯದಲ್ಲಿ ಅದು ನಿಜವಲ್ಲ, ಯಾಕೆಂದರೆ ಈ ಭೂಮಿಯ ಮೇಲಿನ ಪ್ರಥಮ ಪುರುಷನಾದ ಆಡಮ್‌ಗೆ ಬಾಲ್ಯವೇ ಇರಲಿಲ್ಲ. (ಆತನಿಗೆ ಹೊಕ್ಕಳು ಕೂಡ ಇರಲಿಲ್ಲ ಎಂದು ನೆನಪಿಸಿಕೊಂಡ ಅಜೀಜ್ ಒಳಗೊಳಗೇ ನಕ್ಕ). ತನ್ನ ಬಾಲ್ಯದ ನೆನಪುಗಳನ್ನೆಲ್ಲಾ ಅಜೀಜ್ ಇಷ್ಟಪಡುತ್ತಿದ್ದ. ಆ ಕಾರಣಕ್ಕೇ ಆತನಿಗೆ ಮುಂಬೈ ಇಷ್ಟವಾಗಿತ್ತು, ಮತ್ತಂಚೇರಿಯನ್ನು ಚಪ್ಪಟೆ ಮಾಡಿದರೆ ಅದು ಮುಂಬೈನಂತಾಗುತ್ತಿತ್ತು. ಮುಂಬೈ ಅಲ್ಲದೆ ವಾರ್ಡನ್ ರಸ್ತೆಯಲ್ಲಿ ಅವನಿಗೆ ಕೊಠಡಿಯನ್ನು ಬಾಡಿಗೆಗೆ ಕೊಟ್ಟಿದ್ದ ವಯಸ್ಸಾದ ದಂಪತಿಗಳೂ ಅವನಿಗೆ ಇಷ್ಟವಾಗಿದ್ದರು. ಶಕೂರ್ ಸಾಬ್ ಅವರ ತುಂಟ ನಗೆ ಮತ್ತು ದಟ್ಟವಾಗಿದ್ದ ಬಿಳಿ ಮೀಸೆ ಏರ್ ಇಂಡಿಯಾದ ಮಹಾರಾಜನನ್ನು ನೆನಪಿಸುತ್ತಿದ್ದರೆ, ಅವರ ಪತ್ನಿ ಅಮ್ಮಿಜಾನ್ ಅವರ ಆಳವಾದ ಕೆನ್ನೆಗುಳಿಗಳು ಅಜೀಜನ ಪ್ರೀತಿಯ ನಟಿ ಕೆ.ಪಿ.ಎ.ಸಿ. ಲಲಿತಾಳನ್ನು ನೆನಪಿಸುತ್ತಿದ್ದವು.

ಎಂದಿನಂತೆ ಅವತ್ತಿನ ಬೆಳಗ್ಗೆಯೂ ಹೊಸದಾಗಿ ತೊಳೆದಿದ್ದ ಟ್ಯಾಕ್ಸಿಗಳು ಅಜೀಜನನ್ನು ಮುದಗೊಳಿಸಿದವು. ಬೇರೆ ನಗರಗಳಲ್ಲಿರುವಂತೆ ಮುಂಬೈನ ಟ್ಯಾಕ್ಸಿಗಳು ಭಾರವಾದ ಅಂಬ್ಯಾಸಿಡರ್‌ಗಳಾಗಿರಲಿಲ್ಲ, ಬದಲಾಗಿ ಅವು ಹಗುರವಾದ ಫಿಯೆಟ್ ಕಾರ್‌ಗಳಾಗಿದ್ದವು.

ಟ್ಯಾಕ್ಸಿ ಏರುತ್ತಿದ್ದಂತೆ ಅಜೀಜ್ ದಿನಪತ್ರಿಕೆಯನ್ನು ತೆರೆದ. ಮುಖಪುಟದಲಿದ್ದ ಶೀರ್ಷಿಕೆಗಳನ್ನು ಓದಲೂ ಹೋಗದೆ ಸ್ಟಾಕ್ ಮತ್ತು ಶೇರ್‌ಗಳ ಸುದ್ದಿ ಇದ್ದ ಪುಟಗಳನ್ನು ಓದಲಾರಂಭಿಸಿದ. ಅಲ್ಲಿದ್ದ ಅಂಕಿಗಳಲ್ಲಿ ಆತ ಮುಳುಗಿದ್ದಾಗ ಗಾಳಿಯಲ್ಲಿ ಪತ್ರಿಕೆಯ ಪುಟಗಳು 'ಪಟಪಟ ಬಡಿಯಲಾರಂಭಿಸಿದಾಗಲೇ ಟ್ಯಾಕ್ಸಿ ಕಡಲತಡಿಯಲ್ಲಿ ಹಾದುಹೋಗುತ್ತಿರುವುದು ಎಂದು ಅಜೀಜನಿಗೆ ಅರಿವಾಯಿತು. ಕಿಟಕಿಯ ಗಾಜಿಗೆ ಅಂಟಿಸಿದ್ದ ತೆಳು ಹಸಿರು ಬಣ್ಣದ ಪೊರೆಯ ಆಚೆ ಚೌಪಟ್ಟಿಯಲ್ಲಿರುವ ಸಮುದ್ರ ಕಾಣಿಸಿತು. ಜೆನೆಸಿಸ್ ಯುಗದಲ್ಲಿ ಹೊಸದಾಗಿ ಸೃಷ್ಟಿಸಿದ್ದ ಹಸಿರು ಬಣ್ಣದ ಸಮುದ್ರದಂತೆ ಅದು ಕಂಡಿತು. ಹಸಿರು ಬಣ್ಣದ ಪೊರೆಯ ಮೇಲೆ ಅಂಟಿಸಿದ್ದ ಸ್ಟಿಕರ್‌ಅನ್ನು ಅರ್ಥಮಾಡಿಕೊಳ್ಳಲು ಅಜೀಜನಿಗೆ ಸ್ವಲ್ಪ ಸಮಯ ಹಿಡಿಯಿತು. ನೆಗೆಯುತ್ತಿದ್ದ ಹುಲಿಯ ಪಕ್ಕ ಹಳದಿ ಬಣ್ಣದ ಅಕ್ಷರಗಳಲ್ಲಿ 'ಗರ್ವ್ ಸೆ ಕಹೋ ಹಮ್ ಹಿಂದೂ ಹೈ' ಎಂಬ ಸಾಲಿತ್ತು.

ಒಂದು ಕೆಂಪು ದೀಪದ ನಂತರ ಇನ್ನೊಂದು ಕೆಂಪು ದೀಪವನ್ನು ದಾಟುತ್ತಾ ಟ್ಯಾಕ್ಸಿ ಮುಂದೆ ಸಾಗಿದಂತೆ ಈಗತಾನೆ ಚುನಾವಣೆಗಳನ್ನು ಮುಗಿಸಿ ಸೋಮಾರಿಯಂತೆ ವಿಶ್ರಾಂತಿ ಪಡೆಯುತ್ತಿದ್ದ ಮುಂಬೈ ಬಗ್ಗೆ ಅಜೀಜ್ ಆಲೋಚಿಸಿದ. ಹಸ್ತ ಕಮಲ, ಬಿಲ್ಲು ಬಾಣ, ದೋಣಿ, ರೈಲು ಎಂಜಿನ್ - ಗೋಡೆಗಳ ಮೇಲಿದ್ದ ಇಂತಹ ಚಿಹ್ನೆಗಳು ನಗರವನ್ನೇ ರಾಜಕೀಯ ಪಠ್ಯಪುಸ್ತಕದ ಪೀಠಿಕೆಯಾಗಿ ಪರಿವರ್ತಿಸಿದ್ದವು. ಅಧಿಕಾರದಲ್ಲಾಗುವ ಬದಲಾವಣೆಯನ್ನು ಮೊದಲು ಪ್ರತಿಬಿಂಬಿಸುತ್ತಿದ್ದದ್ದು ಸ್ಟಾಕ್ ಮಾರುಕಟ್ಟೆ. ಇಲ್ಲವೆಂದಿದ್ದರೆ ಅಜೀಜನಿಗಾಗಲಿ, ಆತ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿದ್ದ ಇತರೆ ಸೇಲ್ಸ್ ಎಂಜಿನಿಯರ್‌ಗಳಿಗಾಗಲಿ ಹೊಸ ಸರ್ಕಾರ ಬಂದಿರುವುದರ ಬಗ್ಗೆ ಅರಿವೂ ಆಗುತ್ತಿರಲಿಲ್ಲ. ಹಿಂದಿನ ದಿನ ಮಧ್ಯಾಹ್ನ ಊಟ ಮಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಪ್ರದೀಪ್ ಪಿಳ್ಳೈ "ಸರ್ಕಾರ ಬದಲಾಗಿದೆ" ಎಂದಾಗಲೇ ಈ ವಿಷಯ ಅಜೀಜನಿಗೆ ಹೊಳೆದದ್ದು.

"ಅಂದರೆ?" ಎಂದು ಮತ್ತೊಬ್ಬ ಸೇಲ್ಸ್ ಎಂಜಿನಿಯರ್ ಜ್ಯೋತಿಪ್ರಸಾದ್ ಶ್ರೀವಾಸ್ತವ ಕೇಳಿದ್ದ.

"ಬೇರೆ ವಿಷಯಗಳಲ್ಲೂ ಬದಲಾವಣೆಗಳಾಗುತ್ತವೆ..." ಪ್ರದೀಪ್ ಪಿಳ್ಳೈ ಉತ್ತರಿಸಿದ್ದ.

"ಏನು ನಿನ್ನ ಮಾತಿನ ಅರ್ಥ? ನಾವು ತುಂಬಾ ಕಷ್ಟಪಟ್ಟು ದಕ್ಕಿಸಿಕೊಂಡ ಟೆಂಡರ್‌ಗಳನ್ನೂ ಹೊಸ ಸರ್ಕಾರ ತಿರಸ್ಕರಿಸುತ್ತಾ?" ಎಂದು ಎಲ್ಲರಿಗಿಂತ ಹಿರಿಯವನಾಗಿದ್ದ ಜಯಂತ್ ಕರ್ಮಾಕರ್ ಕೇಳಿದ್ದ.

"ಇತರೆ ಬದಲಾವಣೆಗಳೊಂದಿಗೆ..." ಎಂದು ಪ್ರದೀಪ್ ಪಿಳ್ಳೈ ಉತ್ತರಿಸಿದ್ದ. ಆತ ಬೇಕಂತಲೇ ನಿಗೂಢವಾಗಿ ಮಾತನಾಡುತ್ತಿದ್ದಾನೆಂದು ಅಜೀಜನಿಗೆ ಅನ್ನಿಸಿತ್ತು.

ನಾರಿಮನ್ ಪಾಯಿಂಟ್‌ನಲ್ಲಿದ್ದ, ಅಜೀಜ್ ಕೆಲಸ ಮಾಡುತ್ತಿದ್ದ ಬಹುಮಹಡಿ ಕಟ್ಟಡದ ಮುಂದೆ ಟ್ಯಾಕ್ಸಿ ನಿಲ್ಲುವ ಹೊತ್ತಿಗೆ ಆಳವಾಗಿ ಯೋಚಿಸಿದ್ದ ಆತ ಏನೂ ಬದಲಾಗುವುದಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದ. ಮುಂಬೈಯನ್ನು ಸೀಳುವ ಸ್ಥಳೀಯ ಟ್ರೈನುಗಳು ಎಂದಿನಂತೆ ಓಡಾಡುತ್ತಿದ್ದವು. ಸೆನ್ಸೆಕ್ಸ್ ಕೂಡ ಚೇತರಿಸಿಕೊಂಡಿತ್ತು, ಎಂದಿನಂತೆ ಚರ್ಚ್ ಗೇಟ್ ಹತ್ತಿರ ಇಳಿಯುತ್ತಿದ್ದ ಸಹಸ್ರಾರು ಪ್ರಯಾಣಿಕರು ಎಡಕ್ಕೂ, ಬಲಕ್ಕೂ ನೋಡದೆ ಸಾಗುತ್ತಿದ್ದರು. ಡಬ್ಬಾವಾಲಾಗಳು ಸೈಕಲ್‌ಗಳಲ್ಲಿ ಸಾವಿರಾರು ಊಟದ ಡಬ್ಬಾಗಳನ್ನು ತಲುಪಿಸಬೇಕಾದ ಸ್ಥಳಗಳಿಗೆ ಸಾಗಿಸುತ್ತಿದ್ದರು: ರಾತ್ರಿಯ ಪಾಳಿಯಲ್ಲಿ ಕೆಲಸ ಮಾಡುತ್ತಿರುವವರು ಇಷ್ಟು ಹೊತ್ತಿಗೆ ಎಚ್ಚರಗೊಂಡು ತಮ್ಮ ಹೆಂಡತಿ ಮನೆಯಲ್ಲಿಲ್ಲದಿದ್ದರೆ ಮನೆ ಕೆಲಸಕ್ಕೆ ಬಂದಿದ್ದ ಕಾಂತಾ ಬಾಯಿಯನ್ನು ಅಪ್ಪಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಆಫೀಸಿನಲ್ಲಿದ್ದ ತನ್ನ ಕೊಠಡಿಯನ್ನು ಪ್ರವೇಶಿಸಿದ ಅಜೀಜ್ ಟೇಬಲ್ ಮೇಲಿದ್ದ ತನ್ನ ಪಾಸ್‌ಪೋರ್ಟ್ ಸೈಜಿನ ಫೋಟೋಗಳನ್ನು ನೋಡಿದ. ಎಲ್ಲ ಪಾಸ್‌ಪೋರ್ಟ್ ಫೋಟೋಗಳಂತೆ ಆತನ ಫೋಟೊ ಕೂಡ ಪರಕೀಯನ ಫೋಟೋದಂತೆ ಕಂಡಿತು. ನೀಲಿ ಬಣ್ಣದಲ್ಲಿದ್ದ ಪಾಸ್ ಪೋರ್ಟ್ ಅರ್ಜಿಯನ್ನು ಆತ ಭರ್ತಿ ಮಾಡಲಾರಂಭಿಸಿದ. ಆ ಕೆಲಸ ನಿಧಾನವಾಗಿ ಸಾಗಿತು. ಕಂಪನಿಯ ಪ್ರತಿನಿಧಿಯಾಗಿ ಫ್ರಾಂಕ್‌ಫರ್ಟ್‌ನಲ್ಲಿ ನಡೆಯಲಿದ್ದ ಇಂಡಸ್ಟ್ರಿಯಲ್ ಎಕ್ಸಿಬಿಷನ್‌ಗೆ ಅಜೀಜನನ್ನು ಕಳುಹಿಸಲು ನಿರ್ಧರಿಸಲಾಗಿತ್ತು.

ಅರ್ಜಿಯನ್ನು ಆತ ಭರ್ತಿ ಮಾಡಿ ಟ್ರಾವೆಲ್ ಏಜೆಂಟ್‌ಗೆ ಅದನ್ನು ಕಳುಹಿಸುವ ಹೊತ್ತಿಗೆ ಮಧ್ಯಾಹ್ನದ ಊಟಕ್ಕೆ ಹೊರಗೆ ಹೋಗಿದ್ದ ಆತನ ಸಹೋದ್ಯೋಗಿಗಳು ಹಿಂದಿರುಗಲಾರಂಭಿಸಿದರು. ಅವರೆಲ್ಲ ದೊಡ್ಡ ದನಿಯಲ್ಲಿ ಮಾತನಾಡುತ್ತಿದ್ದದ್ದನ್ನು ಕೇಳಿಸಿಕೊಂಡ ಅಜೀಜ್ ರಿಲಯನ್ಸ್ ಅಥವಾ ಎಸಿಸಿ ಸಿಮೆಂಟ್‌ನ ಶೇರುಗಳು ಏರಿರಬೇಕು ಅಥವಾ ಕುಸಿದಿರಬೇಕು ಎಂದು ಭಾವಿಸಿದ.

ಅಜೀಜ್ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆ ಜ್ಯೋತಿಪ್ರಸಾದ್ ಶ್ರೀವಾಸ್ತವ "ನೀನು ಹೇಳು ಅಜೀಜ್. ಈ ಕರ್ಮಾಕರ್ ಅಕ್ರಮ ವಲಸಿಗರನ್ನು ಒದ್ದೋಡಿಸಬೇಕೆಂಬ ಹೊಸ ಸರ್ಕಾರದ ನಿಲುವು ಕೆಟ್ಟದ್ದು ಎನ್ನುತ್ತಿದ್ದಾನೆ. ಅದರಲ್ಲಿ ತಪ್ಪೇನಿದೆ?" ಎಂದು ಆಗ್ರಹಿಸಿದ.

"ತಪ್ಪೇನಿಲ್ಲ, ಎಲ್ಲ ಸರ್ಕಾರಗಳೂ ವೀಸಾ ಇಲ್ಲದೆ ಬಂದಿರುವ ಅಕ್ರಮ ವಲಸಿಗರನ್ನು ಹೊರಗೆ ಕಳುಹಿಸುತ್ತವೆ. ನಾವೂ ಯಾಕೆ ಕಳುಹಿಸಬಾರದು?" ಎಂದ ಅಜೀಜ್.

"ಇದು ರಾಜಕೀಯ. ನಿಮಗೆಲ್ಲ ಅದು ಅರ್ಥವಾಗುವುದಿಲ್ಲ" ಎಂದು ಕರ್ಮಾಕರ್ ಕೆಂಡಕಾರಿದ.

"ನೋಡಪ್ಪ, ನಮಗೆ ಅರ್ಥವಾಗುವುದು ಸ್ಟಾಕ್ ಮಾರ್ಕೆಟ್ ಮಾತ್ರ. ಈ ರಾಜಕೀಯದ ಬಗ್ಗೆ ಹರಟುತ್ತಾ ಟೈಮ್ ವೇಸ್ಟ್ ಮಾಡುವ ಬದಲು ಒಂದಿಷ್ಟು ಹಣವನ್ನಾದರೂ ಮಾಡೋಣ" ಎಂದು ಹೇಳುತ್ತ ಪ್ರದೀಪ್ ಪಿಳ್ಳೈ ಹೊರನಡೆದ. ಇತರರು ಅವನನ್ನು ಹಿಂಬಾಲಿಸಿದರು.

ಅಜೀಜ್ ಒಂದುಕ್ಷಣ ತನ್ನ ಕಣ್ಣುಗಳನ್ನು ಮುಚ್ಚಿದ. ಅದೇ ಹೊತ್ತಿಗೆ ಟ್ರಾವೆಲ್ ಏಜೆಂಟನಿಂದ ಕರೆ ಬಂತು. "ಮಿಸ್ಟರ್ ಅಜೀಜ್, ನೀವು ಕೂಡಲೇ ನಿಮ್ಮ ರೇಶನ್ ಕಾರ್ಡ್‌ನ ಪ್ರತಿಯನ್ನು ನಮಗೆ ಕಳುಹಿಸಿಕೊಡಿ" ಎಂದ ಏಜೆಂಟ್.

"ಆದರೆ ನನ್ನ ಹತ್ತಿರ ರೇಶನ್ ಕಾರ್ಡ್ ಇಲ್ಲ."

"ಇಲ್ಲ ಅಂದ್ರೆ ಒಂದನ್ನು ಕೂಡಲೆ ಪಡೆಯಿರಿ."

"ಪಾಸ್‌ಪೋರ್ಟ್ ಪಡೆಯೋದಕ್ಕೆ ಏನೆಲ್ಲಾ ಕಷ್ಟ ಪಡಬೇಕಪ್ಪಾ! ನಿಮ್ಮ ಪ್ರಕಾರ ಅವರು ಕೊಡುವ ರೇಶನ್ ಅಕ್ಕಿಯನ್ನು ನಾನು ತಿನ್ನಬೇಕಾ?"

"ತಿನ್ನೋದೇನು ಬೇಡ. ಆದರೆ ನಿಮ್ಮ ವಾಸ್ತವ್ಯ ಸಾಕ್ಷಿಗೆ ಒಂದು ರೇಶನ್ ಕಾರ್ಡ್ ಬೇಕಾಗುತ್ತೆ."

"ಅದಕ್ಕೇನು ಮಾಡಬೇಕು ನಾನೀಗ?"

"ರೇಶನ್ ಕಾರ್ಡಿಗೆ ಅರ್ಜಿ ಹಾಕಿ. ಒಂದೆರಡು ದಿನಗಳಲ್ಲಿ ಆಹಾರ ಇಲಾಖೆಯಿಂದ ಓರ್ವ ಇನ್ಸ್‌ಪೆಕ್ಟರ್ ನಿಮ್ಮ ಮನೆಗೆ ಬರುತ್ತಾರೆ. ಈಗ ಅವರ ರೇಟು ಒಂದು ಗಾಂಧಿ (ಗಾಂಧಿ ಚಿತ್ರವಿರುವ ಐನೂರು ರೂಪಾಯಿ ನೋಟು). ಅದಾದ ಒಂದೆರಡು ದಿನಗಳಲ್ಲಿ ನಿಮ್ಮ ರೇಶನ್ ಕಾರ್ಡ್ ಬರುತ್ತೆ. ಸಿಂಪಲ್."

***

ಪ್ರತಿ ಭಾನುವಾರದಂತೆ ಆ ಭಾನುವಾರವೂ ಅಜೀಜ್ ತನ್ನ ವಿಸಿಆರ್ ಮುಂದೆ ಕೂತು ಯಾವುದೋ ಹಳೆ ರಾಜ್‌ಕಪೂರ್ ಸಿನಿಮಾ ನೋಡುತ್ತಿದ್ದ. ಇಂತಹ ಹಳೆ ಹಿಂದಿ ಸಿನಿಮಾಗಳ ಮೂಲಕ ನಾಲ್ಕು ದಶಕಗಳ ಹಿಂದಿದ್ದ ಮುಂಬೈಯನ್ನು ಅರ್ಥಮಾಡಿಕೊಳ್ಳಲು ಅಜೀಜ್ ಯತ್ನಿಸುತ್ತಿದ್ದ. ಫೋರ್ಟ್, ಫೌಂಟನ್ನು, ಕ್ರಿಕೆಟ್ ಪೆವಿಲಿಯನ್ ತರಹ ಇದ್ದ ಬಾಂದ್ರಾ ಸ್ಟೇಷನ್, ಮೆಟ್ರೊ ಸಿನಿಮಾ, ತಾಜ್ ಹೋಟೆಲ್ ಇತ್ಯಾದಿಗಳು ಕಪ್ಪು ಮತ್ತು ಬಿಳಿ ಬಣ್ಣಗಳಲ್ಲಿ ತೆರೆಯ ಮೇಲೆ ಮೂಡಿದಾಗ ಬೃಹತ್ ಮುಂಬೈಯಲ್ಲಿ ತಾನು ಅನಾಮಿಕ ಎಂಬ ಅನಿಸಿಕೆ ಅಜೀಜನಲ್ಲಿ ಒಂದಿಷ್ಟು ಕಡಿಮೆ ಆಗುತ್ತಿತ್ತು.

ರಜಾದಿನಗಳಂದು ಊಟದ ಹೊತ್ತಿಗೆ ಅಮ್ಮಿಜಾ[ನ್] ಆತನ ಕೊಠಡಿಯ ಬಾಗಿಲನ್ನು ತಟ್ಟುತ್ತಿದ್ದರು. ಆ[ದರೆ] ಅವತ್ತು ಅವರು ಹನ್ನೊಂದು ಗಂಟೆಗೇ ಅವನ ಬಾಗಿಲ[ನ್ನು] ಮೆಲ್ಲಗೆ ತಟ್ಟಿದರು.

"ಯಾರೋ ನಿನ್ನನ್ನು ಭೇಟಿ ಆಗಲು ಬಂದಿದ್ದಾ[ರೆ.] ಅವರು ಆಹಾರ ಇಲಾಖೆಯವರಂತೆ" ಎಂದು ಅಮ್ಮಿಜಾ[ನ್] ಹೇಳಿದರು.

"ಭಾನುವಾರ ಬಂದಿದ್ದಾರ?"

"ಹೌದು, ಅವರ ಜೊತೆ ಈ ಪ್ರದೇಶದಲ್ಲಿ ಓಟುಗಳ[ನ್ನು] ಸಂಗ್ರಹಿಸುವ ದಾದಾ ಕೂಡ ಬಂದಿದ್ದಾನೆ."

ಅಜೀಜ್ ಬಾಗಿಲನ್ನು ತೆರೆಯುತ್ತಿದ್ದಂತೆ, ಆ[ಹಾರ] ಇಲಾಖೆಯಿಂದ ಬಂದಿದ್ದ ಇನ್ಸ್‌ಪೆಕ್ಟರ್ "ನೀವು ರೇಶ[ನ್] ಕಾರ್ಡಿಗೆ ಅರ್ಜಿ ಹಾಕಿದ್ದೀರಿ, ಹೌದಾ?" ಎಂದು ಕೇಳಿ[ದ].

"ನಿಮ್ಮೊಂದಿಗೆ ಬಂದಿರುವ ಇವರು ಯಾರು?"

"ರಾಮು ದಾದಾ. ನಿಮ್ಮ ಮನೆಯನ್ನು ಪತ್ತೆ ಹಚ್ಚ[ಲು] ಅವರನ್ನು ನನ್ನೊಂದಿಗೆ ಕರೆದುಕೊಂಡು ಬಂದೆ."

"ಹೌದಾ..."

"ನೀವು ನಾಳೆ ಬಂದು ನಮ್ಮ ಇಲಾಖೆಯ ಗೋ[ಖಲೆ] ಮೇಡಂ ಅವರನ್ನು ಭೇಟಿ ಆಗಬೇಕು. ಅದನ್ನು ತಿಳಿಸೋ[ಕೆ] ನಾನು ಇವತ್ತು ರಜಾ ದಿನವಾದರೂ ಬಂದೆ."

***

ಪ್ರಮೀಳಾ ಗೋಖಲೆಯ ಆಫೀಸಿನ ತು[...] ಬಾಗಿಲನ್ನು ತೆರೆದು ಒಳಹೊಕ್ಕಾಗ ಆಕೆಯ [...] ಆಕಾರವನ್ನು ಕಂಡು ಆತನಿಗೆ ಸ್ವಲ್ಪ ಅಚ್ಚರಿ ಆಯಿ[ತು.] ಮೊದಲ ನೋಟಕ್ಕೆ ಆಕೆ ಯುವತಿಯಂತೆ ಕಂ[ಡರೂ] ಆಕೆಯ ಕಣ್ಣುಗಳು ಮೂವತ್ತು ವಸಂತಗಳ[ನ್ನು] ದಾಟಿರುವವಳು ಎಂಬುದಕ್ಕೆ ಸಾಕ್ಷಿಯಾಗಿದ್ದವು. [...] ಬಾಲಕಿಯಂತೆ ಆಕೆ ಎರಡು ಜಡೆಗಳನ್ನು ಕಟ್ಟಿಕೊಂ[ಡು] ಬಿಲಿಯ ರಿಬ್ಬನ್ನುಗಳಿಂದ ಅವುಗಳನ್ನು ಎತ್ತಿಕಟ್ಟಿಕೊಂಡಿ[ದ್ದಳು.] ಆಕೆ ತೊಟ್ಟಿದ್ದು ನೀಲಿ ಬಣ್ಣದ ಕಮೀಜ್ ಮತ್ತು [...] ಬಣ್ಣದ ಪೈಜಾಮ ಮತ್ತು ದುಪ್ಪಟ್ಟಾಗಳು ಕೂಡ [...] ಸಮವಸ್ತ್ರದಂತೆ ಕಾಣಿಸುತ್ತಿದ್ದವು. ಕೆಂಪಗಿದ್ದ ತುಟಿ [...] ದಪ್ಪಗಿದ್ದ ಕನ್ನಡಕ ತೊಟ್ಟಿದ್ದ ಆಕೆ ಸೂಕ್ಷ್ಮ ವಾದ [...] ಇಲಿಯಂತಿದ್ದಳು. ಈ ಭೇಟಿಯ ಸಂದರ್ಭದಲ್ಲಿ [...] ಕೈಚಾಚಿ ಆಕೆಯ ಬೆನ್ನು ತಟ್ಟದಿದ್ದರೆ ಸಾಕು [...] ಅಜೀಜ್ ಯೋಚಿಸಿದ. ತೆರೆದಿದ್ದ ಆಕೆಯ ಟೇಬಲ್ [...] ಅರ್ಧ ಓದಿದ್ದ 'ಧ್ಯಾನೇಶ್ವರಿ' ಪುಸ್ತಕ ಮಕಾಡೆ ಮಲ[...].

ಪ್ರೇಯಸಿಯೊಬ್ಬಳು ತನ್ನ ಪ್ರಿಯತಮನನ್ನು ಉದ್[...] ಮಾತಾಡುವ ಮೆಲು ದನಿಯಲ್ಲಿ ಆಕೆ "ಮಿ[ಸ್ಟರ್] ಅಜೀಜ್?" ಎಂದು ಪ್ರಶ್ನಿಸಿದಳು.

"ಹೌದು."

"ತಂದೆಯ ಹೆಸರು?"

"ಬೀರನ್ ಕುಂಜು."

"ತಾಯಿಯ ಹೆಸರು?"

"ಫಾತಿಮಾ."

"ಇಬ್ಬರೂ ಬದುಕಿದ್ದಾರಾ?"

"ಇಲ್ಲ, ಎರಡು ವರ್ಷಗಳ ಹಿಂದೆ ಒಂದೇ [...] ಅಂತರದಲ್ಲಿ ಅವರಿಬ್ಬರೂ ತೀರಿಕೊಂಡರು."

"ನಿಮ್ಮ ಹೆಸರಲ್ಲಿ ಯಾವುದಾದರೂ ಆಸ್ತಿ ಇದೆ[ಯಾ?]"

ನನ್ನನ್ನು ಜಿಐಟಿಯಲ್ಲಿ ಓದಿಸಲು ಮತ್ತು ನನ್ನ ತಮ್ಮನಿಗೆ ದಾಬಿಯ ವೀಸಾ ಕೊಡಿಸಲು ಇದ್ದ ಭೂಮಿಯನ್ನೂ ಮಾರಿದ್ದರು."

"...ಆಸ್ತಿಗೆ ಪಾವತಿಸಿದ್ದ ಕಂದಾಯ ರಸೀದಿಗಳಾದರೂ ...ವಾ?"

"ಇಲ್ಲ."

"ಹಾಗಾದರೆ, ನೀವು ಭಾರತದಲ್ಲಿ ಯಾವುದೇ ಆಸ್ತಿಯನ್ನು ...ವಿರುವುದಕ್ಕೆ ಯಾವ ಪುರಾವೆಯೂ ಇಲ್ಲ?"

"ಇಲ್ಲ, ನನ್ನ ರೇಶನ್ ಕಾರ್ಡ್..."

"ಅದಕ್ಕೆಂದೇ ಇಷ್ಟೆಲ್ಲ ಪ್ರಶ್ನೆಗಳು. ನೀವು ಮೊದಲು ...ತೀಯರು ಎಂಬುದು ಸಾಬೀತಾಗಬೇಕು. ಆಗಲೇ ... ನಾವು ರೇಶನ್ ಕಾರ್ಡ್ ಕೊಡುವ ಬಗ್ಗೆ ...ಸಬಹುದು."

"ಇದೊಳ್ಳೆ ಆಟದಂತಿದೆಯಲ್ಲಾ. ಅಕಸ್ಮಾತ್ ಯಾರೋ ... ನಿಮ್ಮನ್ನು ಮಧ್ಯ ರಾತ್ರಿ ಎಬ್ಬಿಸಿ ನೀವು ಭಾರತೀಯರು ... ಸಾಬೀತುಮಾಡಿ ಎಂದು ಹೇಳಿದರೆ ನೀವು ಏನು ...ತ್ತೀರಿ ಸಿಸ್ಟರ್?" ಎಂದು ಅಜೀಜ್ ಏರು ದನಿಯಲ್ಲೇ ...

...ಚೇರಿಯ ತುಂಡು ಬಾಗಿಲಿನ ಆಚೆ ಇದ್ದಕ್ಕಿದ್ದಂತೆ ...ಟ್ಟ ಪಾದಗಳ ಸದ್ದು ಕೇಳಿಸಿತು. ಪ್ರಮೀಳಾ ...ಬಲೆಯ ಕಿಟಕಿಯ ಆಚೆ ಗುಂಪು ಸೇರಿದ್ದ ಮುಖಗಳು ...ದವು. ಒಂದುಕ್ಷಣ ಆ ಮುಖಗಳು ಕೋಪದಿಂದ ...ವು.

"ನಾನು ನನ್ನ ಹೆಸರನ್ನು ಹೇಳುತ್ತೇನೆ. ಅಷ್ಟು ಸಾಕು. ...ಹೆಸರೇ ನನ್ನ ಭೂತ ಮತ್ತು ಭೂಗೋಳ. ಪ್ರಮೀಳಾ ...ಖಲೆ. ಮಹಾರಾಷ್ಟ್ರದವಳು. ಹಿಂದೂ. ಚಿತ್ಪಾವನ್ ...ಣ. ನಿಮಗೆ ಅರ್ಥವಾಗುತ್ತಾ?" ಎಂದು ಆಕೆ ...ವಳು. ಇದನ್ನೂ ಆಕೆ ಪ್ರಿಯತಮೆಯೊಬ್ಬಳು ...ನಾಡುವಷ್ಟೇ ಮೃದುವಾಗಿ ಹೇಳಿದ್ದು ಅಜೀಜನಲ್ಲಿ ... ಹುಟ್ಟಿಸಿತು.

"ಈಗ ನಾನೇನು ಮಾಡಬೇಕು?"

"ಈಗ ನೀವು ಹೋಗಬಹುದು. ನಿಮ್ಮನ್ನು ಮತ್ತೆ ...ಯುತ್ತೇವೆ. ಆಗ ನೀವು ಬರಲೇ ಬೇಕು ಬ್ರದರ್" ...ಆಕೆ ಎದ್ದು ನಿಂತಳು.

***

...ಎರಡು ದಿನಗಳ ತರುವಾಯ ಅಜೀಜ್ ಆಕೆಯನ್ನು ... ಭೇಟಿ ಆದಾಗ ಆಕೆಯ ವೇಷಭೂಷಣದಲ್ಲಿ ...ವುದೇ ಬದಲಾವಣೆ ಕಾಣಿಸಲಿಲ್ಲ. ಆಕೆಯ ಕೊಠಡಿಯೂ ...ನ ಬಾರಿ ಇದ್ದಂತೆಯೇ ಇತ್ತು. ಆದರೆ ಡ್ರಾನಲ್ಲಿದ್ದ ...ನೇಶ್ವರಿ' ಪುಸ್ತಕದ ಮತ್ತಷ್ಟು ಪುಟಗಳನ್ನು ಆಕೆ ಓದಿ ...ಸಿದ್ದಂತೆ ಕಾಣಿಸಿತು.

"ಮಿಸ್ಟರ್ ಅಜೀಜ್, ನಿಮ್ಮಿಂದ ಮತ್ತಷ್ಟು ...ಯಗಳನ್ನು ತಿಳಿದುಕೊಳ್ಳಲು ನಿಮ್ಮನ್ನು ಕರೆಸಿದ್ದೇವೆ."

"ಒಂದು ರೇಶನ್ ಕಾರ್ಡಿಗೆ ಇಷ್ಟೆಲ್ಲ ಪ್ರಶ್ನೆಗಳೆ. ಇದೇನು? ...ವೆ ಪ್ರಸ್ತಾಪದ ಪರಿಶೀಲನೆಯೇ?"

"ನೀವು ಹುಟ್ಟಿದ್ದು ಎಲ್ಲಿ" ಆಕೆ ಇನ್ನಷ್ಟು ...ಯಿಂದಲೇ ಕೇಳಿದಳು.

"ಕೇರಳದಲ್ಲಿ."

"ಕೇರಳದಲ್ಲಿ ಎಲ್ಲಿ?"

"ಮಲ್ಲಾಪುರಂ ಜಿಲ್ಲೆ."

"ಯಾವ ಹಳ್ಳಿ?"

"ಪಾಂಗ್."

"ಪಾಂಗ್? ಏನು ಪಾಂಗ್?" ಮೊದಲ ಬಾರಿಗೆ ...ಕೆ ದನಿ ಏರಿತು. ಕೂಡಲೇ ತುಂಡು ಬಾಗಿಲಿನ ...ಅಸಂಖ್ಯಾ ಪಾದಗಳ ಸದ್ದು ಕೇಳಿಸಿತು.

"ಪಾಂಗ್. ಅದು ನನ್ನ ಹುಟ್ಟೂರಿನ ಹೆಸರು."

"ಅಂಥ ಹೆಸರಿನ ಊರು ಇರಲು ಸಾಧ್ಯವಿಲ್ಲ. ...ತದಲ್ಲಿ ಪಾಂಗ್ ಎಂಬ ಹಳ್ಳಿ ಇರಲು ಸಾಧ್ಯವೇ?"

"ಮೇಡಂ, ನಾನ್ಯಾಕೆ ಸುಳ್ಳು ಹೇಳಲಿ?"

"ನನಗೇನು ಗೊತ್ತು, ಇರಲಿ ಬಿಡಿ. ಮಲೆಯಾಳಂನಲ್ಲಿ ... ಪದದ ಅರ್ಥವೇನು?"

"ಅದಕ್ಕೆ ಅರ್ಥ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ."

"...ನು? ಅರ್ಥವಿಲ್ಲದ ಪದ ಇರೋದಕ್ಕೆ ಹೇಗೆ ...? ಪದಗಳಿಗೆ ಅವಮಾನ ಮಾಡಬೇಡಿ. ನಿಮ್ಮ ...ಂಡ ಪಾಂಗ್ ಎಂಬ ಹಳ್ಳಿ ಇಲ್ಲ ಎಂಬುದು ...ಗುತ್ತದೆ."

"ಪಾಂಗ್ ಎಂಬುದು ಇದೆ. ಬೇಕಿದ್ದರೆ ಮಲ್ಲಾಪುರಂನ ... ಅವರಿಗೆ ಟೆಲಿಗ್ರಾಂ ಕಳುಹಿಸಿ ಚೆಕ್ ಮಾಡಿ."

"...ರತದ ಭೂಪಟದಲ್ಲಿ ಪಾಂಗ್ ಎಲ್ಲಿದೆ ಎಂಬುದನ್ನು ...ಸುತ್ತೀರಾ?"

"...ಲ್ಲ."

"...ರತದ ಭೂಪಟದಲ್ಲಿ?"



"ಗೊತ್ತಿಲ್ಲ."

"ಆ ಹೆಸರಿನ ಹಳ್ಳಿ ಭಾರತದಲ್ಲೇ ಇಲ್ಲ. ಈಗ ನೀವು ಹೋಗಿ."

ಅಜೀಜ್ ಕೊಠಡಿಯಿಂದ ಹೊರಗೆ ಬಂದಾಗ ಅಲ್ಲಿ ನೆರೆದಿದ್ದ ಗುಂಪು ಅಕ್ಕಪಕ್ಕ ಸರಿದು ಅವನಿಗೆ ದಾರಿ ಮಾಡಿಕೊಟ್ಟಿತು. ಆಗ ಸೆಸಿಲ್ ದೆ ಮಿಲ್ ಅವರ 'ಟೆನ್ ಕಮಾಂಡ್‌ಮೆಂಟ್ಸ್' ಸಿನಿಮಾದಲ್ಲಿ ಮೋಸೆಸ್‌ಗೆ ಸಮುದ್ರ ದಾರಿ ಮಾಡಿಕೊಟ್ಟ ದೃಶ್ಯ ಅಜೀಜನಿಗೆ ನೆನಪಾಯಿತು. ಮೋಸೆಸ್ ಆಗ ವಾಪಸ್ ಹೋದ. ಆಮೇಲೆ ಆತ ಭೂಮಿಯ ಮೇಲಿನ ಮೊದಲ ಪುರುಷನಾಗಿ, ಬಾಲ್ಯವಿಲ್ಲದ ಆಡಮ್ ಆಗಿ ಬಂದ (ಹೊಕ್ಕಳೂ ಇಲ್ಲದೆ).

***

ಇದಾದ ಕೆಲವು ದಿನಗಳ ಕಾಲ ಅಜೀಜ್ ಆಫೀಸಿಗೆ ಹೋಗಲಿಲ್ಲ. ಆತ ರೇಡಿಯೋವನ್ನು ಜೋರಾಗಿ ಹಾಕಿಕೊಂಡು - ತನ್ನ ತಲೆಯಲ್ಲಿದ್ದ ಯೋಚನೆಗಳೂ ಕೇಳಿಸದಷ್ಟು ಜೋರಾಗಿ - ತನ್ನ ಕೊಠಡಿಯಲ್ಲೇ ಇದ್ದ. ನೌಕಾದಳದಲ್ಲಿದ್ದ ಆತನ ಮಿತ್ರನೊಬ್ಬ ಕೆ.ಎ.ಅಬ್ಬಾಸ್ ಅವರ 'ಶಹರ್ ಔರ್ ಸಪ್ನಾ' ಎಂಬ ಸಿನಿಮಾ ಕೊಟ್ಟಿದ್ದ. ಆ ಹಳೇ ಸಿನಿಮಾವನ್ನು ಆತ ಅದೆಷ್ಟು ಬಾರಿ ನೋಡಿದರೂ ಅದರಲ್ಲಿ ಆತನಿಗೆ ಮುಂಬೈನ ಗತಕಾಲದ ನೆನಪುಗಳ ಸುಳಿವೂ ಸಿಕ್ಕಲಿಲ್ಲ.

ಒಂದು ಸಂಜೆ ಆಹಾರ ಇಲಾಖೆಯ ಇನ್ಸ್‌ಪೆಕ್ಟರ್ ಮತ್ತು ರಾಮು ದಾದಾ, ಪ್ರಮೀಳಾ ಗೋಖಲೆಯನ್ನು ಭೇಟಿ ಆಗಲು ತಮ್ಮ ಜೀಪಿನಲ್ಲಿ ಅಜೀಜನನ್ನು ಕರೆದುಕೊಂಡು ಹೋಗಲು ಬಂದರು. ಫ್ಲಾಟಿನ ಬಾಗಿಲನ್ನು ಮುಚ್ಚಲು ಅಜೀಜ್ ಹಿಂದಕ್ಕೆ ತಿರುಗಿದ್ದಾಗ ಮಾತನಾಡದೆ ನಿಂತಿದ್ದ ಶಕೂರ್ ಸಾಬ್ ಮತ್ತು ಅಮ್ಮಿಜಾನ್ ಪಕ್ಕದಲ್ಲಿ ಗಾಜಿನ ಹಿಂದೆ ಅಲಂಕಾರಿಕವಾಗಿ ಬರೆದಿದ್ದ 'ಬಿಸ್ಮಿಲ್ಲಾ' ಪದ ಆತನ ಕಣ್ಣಿಗೆ ಬಿತ್ತು. ಐದು ಕ್ಯಾಂಡಲ್‌ಗಳಿಂದ ಚಿಮ್ಮುತ್ತಿದ್ದ ಬೆಂಕಿಯಂತೆ ಕಾಣುತ್ತಿದ್ದ 'ಬಿಸ್ಮಿಲ್ಲಾ' ಪದ ಅರೇಬಿಕ್ ಭಾಷೆಯಲ್ಲಿ ಅಜೀಜನಿಗೆ ತುಂಬಾ ಇಷ್ಟವಾದ ಪದವಾಗಿತ್ತು.

ಈ ಬಾರಿ, ಪ್ರಮೀಳಾ ಗೋಖಲೆಯ ಆಫೀಸಿನಲ್ಲಿ ಇನ್ನಷ್ಟು ಜನ ಜಮೆ ಆಗಿದ್ದರು. ಆಕೆಯ ಕಿಟಕಿಯ ಹೊರಗೂ ಮುಖಗಳು ತುಂಬಿದ್ದವು. ಪ್ರಮೀಳಾ ಗೋಖಲೆ 'ಧ್ಯಾನೇಶ್ವರಿ' ಪುಸ್ತಕವನ್ನು ಹೆಚ್ಚುಕಡಿಮೆ ಓದಿ ಮುಗಿಸಿದಂತೆ ಕಾಣಿಸುತ್ತಿತ್ತು.

"1970ರಲ್ಲಿ ನೀವು ಭಾರತದಲ್ಲಿ ಇದ್ದಿರಾ?" ಎಂದು ಮತ್ತದೇ ಮೆಲು ದನಿಯಲ್ಲಿ ಪ್ರಶ್ನಿಸಲಾರಂಭಿಸಿದಳು.

"ಮೇಡಂ, ಆಗ ನಾನು ಹುಟ್ಟಿರಲಿಲ್ಲ."

"71ರಲ್ಲಿ?"

"ನಾನು ಹುಟ್ಟಿದ್ದು ಆ ವರ್ಷವೇ."

"ಹಾಗಾದರೆ ನೀವು 1970ರಲ್ಲಿ ಭಾರತದಲ್ಲಿ ಇರಲಿಲ್ಲ ಎಂದು ಒಪ್ಪಿಕೊಳ್ಳುತ್ತೀರಾ?"

"ಇದೆಂತಹ ಅಸಂಬದ್ಧತೆ? ಆಗ ನಾನು ಹುಟ್ಟೇ ಇರಲಿಲ್ಲ."

"ಬಾಂಗ್ಲಾದೇಶದಿಂದ ಭಾರತಕ್ಕೆ ಅಕ್ರಮ ವಲಸೆ ಪ್ರಾರಂಭವಾಗುವ ಮುನ್ನ ನೀವು ಭಾರತದಲ್ಲಿ ಇರಲಿಲ್ಲ ಎಂದು ನಾನು ದಾಖಲಿಸಿಕೊಳ್ಳಲೇ?"

"ಆಗ ನಾನು ಹುಟ್ಟಿರಲಿಲ್ಲ ಎಂದು ನಿಮಗೆ ಅದೆಷ್ಟು ಬಾರಿ ಹೇಳಬೇಕು?"

"ಹೌದು ಅಥವಾ ಇಲ್ಲ ಎಂದು ಮಾತ್ರ ಉತ್ತರಿಸಿ." ಪ್ರಮೀಳಾ ಗೋಖಲೆ ತನ್ನ ದನಿಯನ್ನು ಸ್ವಲ್ಪ ಏರಿಸಿದ್ದಳು. ಅದು ಅಜೀಜನಿಗೆ ಸಿಡಿಲುಹೊಡೆದಂತೆ ಕೇಳಿಸಿತು. ಕಿಟಕಿಯಲ್ಲಿದ್ದ ಮುಖಗಳು ಬೆದರಿಸುವಂತೆ ದಿಟ್ಟಿಸಿದವು. ತುಂಡು ಬಾಗಿಲಿನ ಆಚೆಯೂ ಪಾದಗಳ ಸದ್ದು ಹೆಚ್ಚಾಯಿತು.

"ಹೇಳಿ, ಬಾಂಗ್ಲಾದೇಶದಿಂದ 1970ರಲ್ಲಿ ಅಕ್ರಮ ವಲಸೆ ಪ್ರಾರಂಭವಾಗುವ ಮುನ್ನ ನೀವು ಭಾರತದಲ್ಲಿ ಇದ್ದಿರಾ?"

"ಇಲ್ಲ."

"ಅಕ್ರಮ ವಲಸೆ ಪ್ರಾರಂಭವಾದ ನಂತರ, ಅಂದರೆ 1971ರಲ್ಲಿ?"

"ಇದ್ದೆ."

ಕೆಲ ಕ್ಷಣ ಮೌನ ಆವರಿಸಿತು.

ಹತಾಶನಾಗುವ ಮುನ್ನ ಅಜೀಜ್ "ನನ್ನ ರೇಶನ್ ಕಾರ್ಡ್?" ಎಂದು ಕೇಳಿದ.

ಪ್ರಮೀಳಾ ಗೋಖಲೆ ಮಂದಹಾಸ ಬೀರಿದಳು. ಅದಕ್ಕೆ ಪ್ರತಿಕ್ರಿಯೆಯಾಗಿ ಹೊರಗಿದ್ದ ಜನ ಕೇಕೆ ಹಾಕಿ ನಕ್ಕರು. "ನಾನು ನನ್ನ ವರದಿಯನ್ನು ಸಂಪೂರ್ಣಗೊಳಿಸಿದ್ದೇನೆ. ನಾಳೆಯೇ ಅದನ್ನು ಸಲ್ಲಿಸುತ್ತೇನೆ" ಎಂದಳು ಆಕೆ.


"ಅಂದರೆ ನಾನು ಅಕ್ರಮ ವಲಸಿಗ ಎಂಬುದು ನಿಮ್ಮ ವಾದವೇ?"

"ಅದನ್ನು ನೀವೇ ಒಪ್ಪಿಕೊಂಡಿದ್ದೀರಲ್ಲ?" ಎನ್ನುತ್ತಾ ಆಕೆ ಎದ್ದು ನಿಂತಳು.


ಅಜೀಜ್ ಮನೆಗೆ ಹಿಂದಿರುಗಿದ. ಅವನು ವಾಸಿಸುತ್ತಿದ್ದ ಕಟ್ಟಡದ ಹೊರಗೆ ಇಬ್ಬರು ಪೊಲೀಸರು ಕಾವಲು ನಿಂತಿದ್ದರು. ಆತ ತನ್ನ ಕೊಠಡಿಯನ್ನು ಪ್ರವೇಶಿಸಿ ಬಾಗಿಲನ್ನು ಮುಚ್ಚಿದ. ಇನ್ನೇನು ಕರ್ಟನ್ ಸರಿಸಿ ಕಿಟಕಿಯನ್ನು ತೆರೆಯಬೇಕು, ಆಗ ಆಚೆ ಕಡೆ ನವಿಲಿನ ಬಾಲದಲ್ಲಿ ಇರುವಂತಹ ಜೀವವಿಲ್ಲದ ಕಣ್ಣುಗಳಿರುವ ಮುಖಗಳು ಇರುತ್ತವೆ ಎಂದು ಅವನಿಗೆ ಅನ್ನಿಸಿತು. ತಡೆಯಲಾಗದಷ್ಟು ಭಯ ಅವನನ್ನು ಆವರಿಸಿತು. ಅಜೀಜ್ ತನ್ನ ಮಂಚದ ಅಡಿ ನುಸುಳಿ ನೆಲದ ಮೇಲೆ ತನ್ನ ಮುಖವನ್ನು ಒತ್ತಿ ಮಲಗಿದ. ಮೃತಾವಸ್ಥೆ ಸ್ಥಿತಿಯಲ್ಲಿ ಜನಿಸಿದ ಕೂಸಿನಂತೆ ಒಂದಿಷ್ಟೂ ಚಲಿಸದೆ ಮಲಗಿದ.

ಮಲೆಯಾಳಿ ಮೂಲ: ಎನ್.ಎಸ್.ಮಾಧವನ್
ಇಂಗ್ಲಿಷಿಗೆ: ಶಾರದಾ ನಾಯರ್
ಕನ್ನಡಕ್ಕೆ: ಗೌರಿ ಲಂಕೇಶ್

ಕವಿಶೈಲದಲ್ಲಿ ಕವಿರಾಜನ ಮದುವೆ



ಇಂದಿನ ಸಿನಿಮಾಗಳಿಗೆ ತಕ್ಕಂತೆ ಹಾಡು ಬರೆಯುತ್ತ ಹೆಸರು ಮಾಡಿರುವ ಕವಿರಾಜ್, ಕಳೆದ ಭಾನುವಾರ ಕವಿಶೈಲದಲ್ಲಿ ರಾಜೇಶ್ವರಿ ಕೈ ಹಿಡಿದರು. ಮಹಾಕವಿ ಕುವೆಂಪುರವರು ಕಾವ್ಯದ ಸ್ಫೂರ್ತಿಯ ತಾಣವಾದ ಕವಿಶೈಲ. ಬೆಳಗಿನ ಹೊತ್ತು ಅನಿರ್ವಚನೀಯ ಅನುಭವ



ನೀಡುತ್ತದೆ. ಕುವೆಂಪು ಕವಿಶೈಲವನ್ನೇ ಕುರಿತು ಕಾವ್ಯ ಮತ್ತು ಲೇಖನಗಳನ್ನು ಬರೆದಿದ್ದಾರೆ. ಇದೇ ಪ್ರದೇಶದ ಕವಿರಾಜ್ ಕುವೆಂಪು ಕಾವ್ಯದಿಂದ ಸ್ಫೂರ್ತಿ ಪಡೆದು ಬರೆಯುತ್ತಿರುವ ಲೇಖಕ. ಆದ್ದರಿಂದ ತನ್ನ ಮದುವೆಯೂ ಕೂಡ ಕವಿಶೈಲದಲ್ಲಿ ನಡೆಯಬೇಕೆಂದು ತೀರ್ಮಾನಿಸಿದ್ದರಿಂದ, ಮಂತ್ರಮಾಂಗಲ್ಯ ಬೋಧಿಸಲು ನಾಗತಿಹಳ್ಳಿ ಚಂದ್ರಶೇಖರ್ ಬಂದಿದ್ದರು. ವಧುವರರು ಆಗಮಿಸುವ ಸಮಯಕ್ಕೆ ಸರಿಯಾಗಿ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್ ಬಂದಿದ್ದರು. ಅಲ್ಲದೆ ಮಾಜಿ ಶಾಸಕರಾದ ಪಟಮಕ್ಕಿ ರತ್ನಾಕರ್, ಅಲ್ಲದೆ ಕಡಿದಾಳು ಪ್ರಕಾಶ್ ಮುಂತಾದವರೆಲ್ಲಾ ತಮ್ಮ ಮನೆಯ ಮದುವೆಯಷ್ಟು ಉತ್ಸಾಹದಿಂದ ಭಾಗವಹಿಸಿದ್ದರು. ಇನ್ನು ಸಿನಿಮಾ ಜಗತ್ತಿನ ಜನರಂತೂ ನಿರೀಕ್ಷೆಗೂ ಮೀರಿ ಆಗಮಿಸಿದ್ದರು. ಈ ಪೈಕಿ ದರ್ಶನ್ ದೇವಂಗಿಯ ಹೋಂಸ್ಟೇ ಒಂದರಲ್ಲಿ ಉಳಿದು, ಕವಿಯ ಮದುವೆಗೆ ಬರಲಿಲ್ಲ. ಆದರೆ ವಧುವಿನ ಸ್ವಗ್ರಾಮದಲ್ಲಿ ನಡೆದ ಊಟದ ಸಮಯಕ್ಕೆ ಸರಿಯಾಗಿ ಬಂದರೂ ಇದ್ದೇನೆ ಅದರೂ, ಸಿನಿಮಾದ ಜನರು ತಮ್ಮ ಮದುವೆಗಳನ್ನು ಹುಸಿಯಾದ ಅದ್ದೂರಿತನದಲ್ಲಿ ಉಡಾಯಿಸುತ್ತಿರುವ ಈ ಸಮಯದಲ್ಲಿ ಮಂತ್ರಮಾಂಗಲ್ಯ ರಚಿಸಿ ಸರಳ ಮದುವೆ ಪ್ರತಿಪಾದಿಸಿದ ಕುವೆಂಪುರವರ ಕವಿಶೈಲದಲ್ಲಿ ಮದುವೆಯಾದ ಕವಿರಾಜ್, ಹೊಸ ತಲೆಮಾರಿಗೆ ಮಾದರಿಯಾಗಿದ್ದಾರೆ.

ಶೋಷಿತರಿಗೆ ಬುದ್ಧನೆಂಬ ಆಲದಮರವೇ ಗತಿ

ಸ್ವತಂತ್ರ ಭಾರತದ ನಂತರದ ಕೆಲವು ಘಟನೆಗಳನ್ನು ಗಮನಿಸಿ.

ಅಂಬೇಡ್ಕರರು ಲಾರ್ಡ್ ಮೌಂಟ್ ಬ್ಯಾಟನ್ನಿನ ಜೊತೆಗೆ ಹೈದರಾಬಾದಿನ ದೇವಾಲಯಕ್ಕೆ ಭೇಟಿ ಕೊಡುವ ಸಂದರ್ಭದಲ್ಲಿ ಅಲ್ಲಿನ ಪುರೋಹಿತರು ಮತ್ತು ಸವರ್ಣೀಯರು ಮೌಂಟ್ ಬ್ಯಾಟನ್ನರನ್ನು ದೇವಾಲಯದ ಒಳಗೆ ಪ್ರವೇಶ ನೀಡಿ ಅಂಬೇಡ್ಕರರಿಗೆ ಪ್ರವೇಶ ನಿರಾಕರಿಸುತ್ತಾರೆ. (ಇಂತಹ ನೂರಾರು ತಾರತಮ್ಯಗಳು ಅಂಬೇಡ್ಕರರ ಜೀವನದುದ್ದಕ್ಕೂ ಸಿಗುತ್ತದೆ.)

ಬಾಬು ಜಗಜೀವನ ರಾಮ್‌ರವರ ಅಧಿಕಾರಾವಧಿಯಲ್ಲಿ ಅವರನ್ನು ಕಾಶಿಯಲ್ಲಿನ ಸಂಪೂರ್ಣಾನಂದರ ಪುತ್ಥಳಿಯನ್ನು ಅನಾವರಣ ಮಾಡಲು ಕರೆಸಲಾಯಿತು ಮತ್ತು ಅನಾವರಣವನ್ನು ಮಾಡಿಸಲಾಯಿತು ಆದರೆ ಅವರು ಹೋದನಂತರ ಅಲ್ಲಿನ ಬ್ರಾಹ್ಮಣ ವಿದ್ಯಾರ್ಥಿಗಳು ಆ ಪುತ್ಥಳಿಯನ್ನು ಗೋವಿನ ಮೂತ್ರದಿಂದ ಶುದ್ಧಿಗೊಳಿಸಿದರು.

ಭಾರತದ ರಾಷ್ಟ್ರಪತಿಗಳಾಗಿದ್ದ ಕೆ.ಆರ್.ನಾರಾಯಣ್‌ರವರು ಫ್ರಾನ್ಸಿಗೆ ಭೇಟಿ ನೀಡಿದಾಗ ಅಲ್ಲಿನ ಒಂದು ಪತ್ರಿಕೆಯು ಫ್ರಾನ್ಸ್ ಸಂಸತ್ತಿನಲ್ಲಿ ಒಬ್ಬ ಅಸ್ಪೃಶ್ಯ ಎಂದು ಬರೆದಿತ್ತು ಮತ್ತು ಅದಕ್ಕೆ ನಂತರದ ದಿನಗಳಲ್ಲಿ ಕ್ಷಮಾಪಣೆಯನ್ನೂ ಕೇಳಿತು. ಆದರೆ ಅದಕ್ಕೆ ಪ್ರತಿಯಾಗಿ ಪತ್ರಕರ್ತರಿಗೆ ನಾರಾಯಣ್‌ರವರು ಕೊಟ್ಟ ಉತ್ತರ "ಈ ಅವಮಾನವನ್ನು ಮೂರು ವರ್ಷಗಳಿಂದಲೂ ಇಲ್ಲಿ (ರಾಷ್ಟ್ರಪತಿ ಭವನದಲ್ಲಿ) ನಾನು ಅನುಭವಿಸುತ್ತಲೇ ಬಂದಿದ್ದೇನೆ" ಎಂದು.

ಸಾಮಾನ್ಯ ದಲಿತರ ಕಥೆ ಇರಲಿ. ಈ ಮೇಲಿನ ಮೂರೂ ಘಟನೆಗಳು ನಮಗೆ ಈ ದೇಶದ ಮೂರು ಶ್ರೇಷ್ಠ ಭಾರತೀಯರ ನಿಜ ಕಥೆಗಳನ್ನು ಹೇಳುತ್ತವೆ. ಈ ಅವಮಾನ ತನ್ನ ಮುಂದಿನ ಸಹೋದರರಿಗೆ ಸಹೋದರಿಯರಿಗೆ ಆಗಲೇಬಾರದೆಂಬ ಕಾರಣಕ್ಕೆ ಬಾಬಾಸಾಹೇಬರು ಬಹುಶಃ ಯವೋಲಾ ಸಮಾವೇಶದಲ್ಲಿ ಅಂತಹ ಘೋಷಣೆ ಮಾಡಿದ್ದರು ಎನಿಸುತ್ತದೆ.

"ನಾನು ಹಿಂದೂವಾಗಿ ಹುಟ್ಟಿದ್ದೇನೆ ಏಕೆಂದರೆ ಅದು ನನ್ನ ಕೈಲಿರಲಿಲ್ಲ. ಆದರೆ ಹಿಂದೂವಾಗಿ ಮಾತ್ರ ಸಾಯಲಾರೆ" ಎಂದು ಯವೋಲಾ ಸಮಾವೇಶದಲ್ಲಿ ಅಂಬೇಡ್ಕರರು ಹೇಳಿದಾಗ ಭಾರತದ ಬಹಳಷ್ಟು ಬುದ್ಧಿಜೀವಿಗಳು ಅದನ್ನು ಅಷ್ಟು, ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ ಅಂಬೇಡ್ಕರರನ್ನು ತುಂಬಾ ಹತ್ತಿರದಿಂದ ಬಲ್ಲವರು ಅಂದು ಅವರು ನೀಡಿದ ಸೂಚನೆಯನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದರು. ಯಾವಾಗ ಅಂಬೇಡ್ಕರರ ಬಳಿಗೆ ಹಲವು ಧರ್ಮದ ಮುಖಂಡರು ಬಂದುಹೋಗುತ್ತಿದ್ದರೋ ಆವಾಗಲೇ ಸನಾತನವಾದಿಗಳಿಗೆ ತಡೆಯಲಾರದಷ್ಟು ಕೋಪ, ದಿಗಿಲು ಉಂಟಾದದ್ದು. ಹಲವಾರು ಧರ್ಮಗಳನ್ನು ಅಭ್ಯಸಿಸಿದ ಅಂಬೇಡ್ಕರ್‌ರವರಿಗೆ ಬಲು ಪ್ರಿಯವಾದದ್ದು ಬುದ್ಧನ ಧಮ್ಮ. ಇದು ಸುಖಾಸುಮ್ಮನೆ ತೆಗೆದುಕೊಂಡ ನಿರ್ಧಾರವಲ್ಲ. ಮೂಲತಃ ಕಬೀರ್ ಪಂಥದ ಸಾಂಪ್ರದಾಯಿಕ ಕುಟುಂಬದಲ್ಲಿ ಜನಿಸಿದ ಅಂಬೇಡ್ಕರರಿಗೆ ಆರಂಭದಲ್ಲಿ ಸಂಪ್ರದಾಯಗಳ ಬಗ್ಗೆ ಆಕರ್ಷಣೆ ಇತ್ತಾದರೂ ತನ್ನ ಜನತೆಯ ಬದುಕು ಬವಣೆಗಳನ್ನು ಅರಿತ ಅವರಿಗೆ ದೇವರು ಎಂಬುದು ಕೇವಲ ಕಾಲ್ಪನಿಕ, ಅದನ್ನು ಸೃಷ್ಟಿಸಿರುವುದೇ ಜನಾಂಗಗಳನ್ನು ಶೋಷಿಸಲು ಎಂಬುದು ಅರ್ಥವಾಗಲು ಬಹಳ ದಿನ ಬೇಕಾಗಲಿಲ್ಲ. ನಂತರ ಅವರ ವಿದ್ಯಾಭ್ಯಾಸ ಮತ್ತು ಎಡೆಬಿಡದ ಅವರ ಓದು ಅವರನ್ನು ನಾಸ್ತಿಕನ ಸ್ಥಾನಕ್ಕೆ ತಂದು ನಿಲ್ಲಿಸಿತು. ಅದಕ್ಕಾಗಿಯೇ ಅವರು ಮೂರ್ತಿ ಭಂಜಕರಾಗಿದ್ದು. ಸ್ವತಃ ಹೆಂಡತಿಯು ಕೊನೆ ಕಾಲದಲ್ಲಿ ಪಂಡರಾಪುರ ದರ್ಶನ ಮಾಡಬೇಕೆಂದಾಗ ಅದು ವ್ಯರ್ಥ ಎಂದು ತಿಳಿಸಿ ತಡೆದದ್ದು. ಹೀಗೆ ನಾಸ್ತಿಕವಾದಿಯಾಗಿ ಬದಲಾಗಿದ್ದ ಅಂಬೇಡ್ಕರರಿಗೆ ದೇವರಿಲ್ಲದ, ಆತ್ಮವಿಲ್ಲದ, ಪಾಪಪುಣ್ಯಗಳಿಗೆ ಬೆಲೆಯಿಲ್ಲದ, ಮನುಜನ ಜೀವನಕ್ಕೆ ಮಾತ್ರ ಸೀಮಿತವಾಗಿದ್ದ ಧರ್ಮವೊಂದು ಬೇಕಿತ್ತು, ಅದು ಬುದ್ಧನ ಧಮ್ಮದಲ್ಲಿ ಬಹಳ ಸುಲಭವಾಗಿ ಸಿಕ್ಕಾಗ ಅವರು ಅದನ್ನು ನಿರಾಕರಿಸಲಿಲ್ಲ. ಪ್ರಪಂಚದ ನಾಸ್ತಿಕನೊಬ್ಬ ಆಚರಿಸಬಹುದಾದ ಧಮ್ಮ ಬುದ್ಧನ ಧಮ್ಮ. ಬುದ್ಧನ ಧಮ್ಮವು ತನ್ನ ಕೇಂದ್ರದಲ್ಲಿ ನೈತಿಕತೆಯನ್ನಿಟ್ಟುಕೊಂಡಿರುವುದು ಅಂಬೇಡ್ಕರರಿಗೆ ಬಹಳ ಇಷ್ಟವಾಯಿತಲ್ಲದೆ ಸಾವಿರಾರು ದೇವರನ್ನು ಪೂಜಿಸುತ್ತಿದ್ದ ದಲಿತರಿಗೆ ಪರ್ಯಾಯವಾಗಿ ಒಂದು ನೆಲೆಯನ್ನು ಹುಡುಕಿಕೊಡಬೇಕಾಗಿದ್ದರಿಂದ ಬುದ್ಧನನ್ನು ಅಪ್ಪಿಕೊಂಡರು. ಅದಷ್ಟೇ ಅಲ್ಲದೆ ದಲಿತರಿಗೆ ಸಮಾನತೆ ಬೇಕಾಗಿದ್ದರಿಂದ ಅದು ಬುದ್ಧನ ಧಮ್ಮದಲ್ಲಿ ಅಡಕವಾಗಿದ್ದರಿಂದ ನಿಸ್ಸಂದೇಹವಾಗಿ ಅಂಬೇಡ್ಕರರಿಗೆ ಬುದ್ಧ ಬಹಳ ಹತ್ತಿರವಾಗಿದ್ದ ಜೊತೆಗೆ ಸ್ಥಳೀಯನಾಗಿದ್ದ. ಹೀಗೆ ಅಂಬೇಡ್ಕರರು ದಲಿತರ ವಿಮೋಚನೆಗೆ ಬುದ್ಧನನ್ನು ಅವರ ಮುಂದೆ ತಂದು ನಿಲ್ಲಿಸಿದ್ದರು. ಆತನನ್ನು ಅಕ್ಟೋಬರ್ 14, 1956 ರಂದು ಅಧಿಕೃತವಾಗಿ ಸ್ವತಃ ಅಪ್ಪಿಕೊಂಡರು ಜೊತೆಗೆ ದಲಿತರಿಗೂ ಮತಾಂತರವಾಗಲು ತಿಳಿಸಿದರು.



ಬುದ್ಧನೂ ಸೇರಿದಂತೆ ಎಲ್ಲಾ ಭಿಕ್ಕುಗಳು ಸಹ ಭಿಕ್ಷಾಟನೆಯಿಂದ ಆಹಾರ ಸೇವಿಸುತ್ತಿದ್ದರು ಎಂಬುದು ಮುಟ್ಟು ಮೈಲಿಗೆಯೆಂಬ ಅನಿಷ್ಟವನ್ನು ಹೊಡೆದು ಹಾಕಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಆದ್ದರಿಂದ ಅವರಿಗೆ ಅಂದಿನ ವರ್ಣ ಪದ್ಧತಿಯ ಮೇಲೆ ನಂಬಿಕೆ ಇರಲಿಲ್ಲ. ಅಂದಿನ ವರ್ಣಪದ್ಧತಿಯೇ ಇಂದಿನ ಜಾತಿಪದ್ಧತಿಗೆ ಕಾರಣವಾಗಿರುವುದರಿಂದ ಜಾತಿವಿನಾಶಕ್ಕೆ ಬುದ್ಧನ ಮಡಿಲು ನಮಗೆ ಸೂಕ್ತವೆನಿಸುತ್ತದೆ.

ಬುದ್ಧನ ಸಂಘದಲ್ಲಿ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರವರೆಗೂ ಸದಸ್ಯರಾಗಿದ್ದರು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಇದನ್ನೇ ನಾವು ಅಂಬೇಡ್ಕರರು ಕಲ್ಪಿಸಿದ ಬೃಹತ್ ಶೋಷಿತರ ವೇದಿಕೆಯಾಗಿ ರೂಪಿಸಿಕೊಳ್ಳಬೇಕಾಗಿದೆ. ಈ ಬೃಹತ್ ವೇದಿಕೆಯಿಂದಲೇ ರಾಜಕೀಯ ನೆಲೆಯನ್ನು ಕಟ್ಟಿಕೊಳ್ಳುವುದು ಇಂದಿನ ತುರ್ತಾಗಿದೆ.

ಬರಿ ಮೇಲ್ನೋಟಕ್ಕೆ ಆಗದೆ ಬುದ್ಧನ ಧಮ್ಮವನ್ನು ಪ್ರಶ್ನಿಸಿ ಪರಿಶೀಲಿಸಿ ಮತಾಂತರವಾಗಿ ಎಂದೂ ತಿಳಿಸಿದರು. ಈ ಕ್ರಿಯೆಯನ್ನು ಹಲವರು ಅಂಬೇಡ್ಕರರು ಸುಸ್ತಾಗಿ ತೆಗೆದುಕೊಂಡ ತೀರ್ಮಾನವೆಂದು ಹೇಳಿದರೂ ಇಂದು ಬೌದ್ಧರಾಗಿರುವ ದಲಿತರಿಗೆ ಮಾತ್ರ ಅದರ ಫಲಗಳು ತಿಳಿಯುತ್ತಿವೆ. ಶತಶತಮಾನಗಳಿಂದಲೂ ಕೀಳಾಗಿಯೇ ಬದುಕಿದ್ದ ದಲಿತನು ಇಂದು ನಾನು ಬೌದ್ಧನೆಂದು ಹೇಳಿಕೊಳ್ಳುವಲ್ಲಿ ಹೆಮ್ಮೆ ಪಡುತ್ತಿದ್ದಾನಲ್ಲದೆ ಇತರರಿಗೆ ಸರಿಸಮಾನನಾಗಿ ಬದುಕಲು ತೀರ್ಮಾನಿಸುತ್ತಿರುವುದು ನಿಜಕ್ಕೂ ಪ್ರಶಂಸನೀಯ. ಆದರೆ ಅಂಬೇಡ್ಕರರು ಬುದ್ಧನನ್ನು ಅಪ್ಪಿಕೊಳ್ಳಲು ಕೇವಲ ದಲಿತರಿಗೆ ಮಾತ್ರ ತಿಳಿಸಿದ್ದರೆ? ಅದು ಕೇವಲ ದೇಶದ ದಲಿತರಿಗಾಗಿ ಮೀಸಲಿರಿಸಿದ ಮತಾಂತರವೆ? ಅದನ್ನು ಕೂಲಂಕಷವಾಗಿ ಅರ್ಥಮಾಡಿಕೊಳ್ಳಲು ಅಂಬೇಡ್ಕರರು ಮತಾಂತರವಾಗುವಾಗ ತೆಗೆದುಕೊಂಡ ಪ್ರತಿಜ್ಞೆಗಳಲ್ಲಿ ಪ್ರಮುಖವಾದುವನ್ನು ಗಮನಿಸಲೇಬೇಕು. ಅವು ಇಂತಿವೆ..

1. ನಾನು ಬ್ರಹ್ಮ, ವಿಷ್ಣು ಮಹೇಶ್ವರ ಹಾಗೂ ಯಾವುದೇ ಹಿಂದೂ ಧರ್ಮದ ದೇವ-ದೇವತೆಗಳನ್ನು ನಂಬುವುದಿಲ್ಲ, ಎಂದೂ ಅವರ ಆರಾಧನೆ ಮಾಡುವುದಿಲ್ಲ.
2. ನಾನು ದೇವತೆಗಳ ಅವತಾರವನ್ನು ನಂಬುವುದಿಲ್ಲ.
3. ಬುದ್ಧನು ವಿಷ್ಣುವಿನ ಅವತಾರವೆನ್ನುವುದು ಸಂಪೂರ್ಣ ಸುಳ್ಳು. ಇದು ಮೂಢನಂಬಿಕೆಯಿಂದ ಕೂಡಿದೆ ಮತ್ತು ಇದೊಂದು ಕುಚೇಷ್ಟೆ.
4. ನಾನು ಶ್ರಾದ್ಧ ಮತ್ತು ಪಿಂಡ ದಾನ ಮಾಡುವುದಿಲ್ಲ.
5. ನಾನು ಬುದ್ಧ ಧಮ್ಮದ ತತ್ವಗಳಿಗೆ ಯಾವುದೇ ಅಡಚಣೆ ಮಾಡುವುದಿಲ್ಲ.
6. ನಾನು ಬ್ರಾಹ್ಮಣರಿಂದ ಯಾವುದೇ ಕ್ರಿಯಾ ಕ್ರಮ ಮಾಡಿಸುವುದಿಲ್ಲ.
7. ಮಾನವ ಜನಾಂಗವನ್ನು ನಾನು ಸಮಾನರೆಂದು ತಿಳಿಯುತ್ತೇನೆ.
8. ನಾನು ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತೇನೆ.
9. ನನ್ನ ಪುನರ್ಜನ್ಮ ಅಸಾಧ್ಯವೆಂದು ನಾನು ನಂಬುತ್ತೇನೆ.

ಹೀಗೆ ಸುಮಾರು 22 ಪ್ರತಿಜ್ಞೆಗಳನ್ನು ಅಂಬೇಡ್ಕರರು ಅಂದು ಕೈಗೊಂಡು ತನ್ನೊಂದಿಗೆ ಮತಾಂತರವಾದ ಲಕ್ಷಾಂತರ ಬಂಧುಗಳಿಗೂ ಇದನ್ನೇ ಬೋಧಿಸುತ್ತಾರೆ. ಈ ಮೇಲಿನ ಪ್ರತಿಜ್ಞೆಗಳು ಈ ದೇಶದ ತಾರತಮ್ಯದ ವಿರುದ್ಧ ಬುದ್ಧನನ್ನು ವಿಷ್ಣುವಿನ ಅವತಾರವೆಂದಿರುವ ಹುನ್ನಾರದ ವಿರುದ್ಧ ಬ್ರಾಹ್ಮಣರೇ ಮೇಲೆಂಬ ಬ್ರಾಹ್ಮಣ್ಯದ ವಿರುದ್ಧ ಹಾಗು ವಿಜ್ಞಾನದ ಪರವಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅದಕ್ಕಿಂತ ಹೆಚ್ಚಾಗಿ ಮಾನವರೆಲ್ಲ ಒಂದೇ ಜಾತಿ ಎಂಬ ಸಮಾನತೆಯನ್ನು ಸಾರುತ್ತದೆ. ಆದ್ದರಿಂದ ಅಂಬೇಡ್ಕರರ ಮತಾಂತರವು ಈ ದೇಶದ ಜಾತಿವ್ಯವಸ್ಥೆಯನ್ನು ತೊಡೆದು ಹಾಕುವ ಜಾತಿವಿನಾಶ - ಕಾರ್ಯಕ್ರಮವನ್ನು ಸೂಚಿಸುತ್ತದೆ. ಈ ದೇಶದ ಜಾತಿಪದ್ಧತಿಗೆ ನೊಂದು ಬೆಂದಿರುವವರು ಬುದ್ಧನನ್ನು ಆಶ್ರಯಿಸಿದರೆ ಅದರಿಂದ ಅವರ ಜಾತಿಯು ಬೇರ್ಪಟ್ಟು ನಾಶವಾಗಿ ಹೋಗುತ್ತದೆ. ಇದಕ್ಕೆ ಬುದ್ಧನ ಕಾಲದಲ್ಲಿಯೇ ಅನುಭವ ಮಂಟಪವನ್ನು ನೆನಪಿಸುವ ಕ್ರಾಂತಿಯಾಗಿದೆ. ಸ್ವತಃ ಬುದ್ಧನೇ ಕೆಳಜಾತಿಯ ಉಪಾಲಿ, ಜಾಡಮಾಲಿಯವನಾದ ಸುನೀತ, ಅಸ್ಪೃಶ್ಯರಾದ ಸೋಪಕ, ಸುಪ್ಪಿ ಪ್ರಕೃತಿಯರನ್ನು ತನ್ನ ಸಂಘಕ್ಕೆ ಸೇರಿಸಿಕೊಂಡ ಉದಾಹರಣೆಗಳಿವೆ. ಅದಲ್ಲದೆ ಸುಪ್ರಬುದ್ಧ ಎಂಬ ಕುಷ್ಟರೋಗಿಯನ್ನು ವೇಶ್ಯೆಯನ್ನೂ ಸಹ ತನ್ನ ಸಂಘಕ್ಕೆ ಸೇರಿಸಿಕೊಂಡದ್ದು ಅವನ ಮಾನವೀಯತೆಯನ್ನು ತಿಳಿಸುತ್ತದೆ. ಬುದ್ಧನೂ ಸೇರಿದಂತೆ ಎಲ್ಲಾ ಭಿಕ್ಕುಗಳು ಸಹ ಭಿಕ್ಷಾಟನೆಯಿಂದ ಆಹಾರ ಸೇವಿಸುತ್ತಿದ್ದರು ಎಂಬುದು ಮುಟ್ಟು ಮೈಲಿಗೆಯೆಂಬ ಅನಿಷ್ಟವನ್ನು ಹೊಡೆದು ಹಾಕಿತ್ತು ಎಂಬುದನ್ನು ಸಾಬೀತುಪಡಿಸುತ್ತದೆ. ಆದ್ದರಿಂದ ಅವರಿಗೆ ಅಂದಿನ ವರ್ಣ ಪದ್ಧತಿಯ ಮೇಲೆ ನಂಬಿಕೆ ಇರಲಿಲ್ಲ. ಅಂದಿನ ವರ್ಣಪದ್ಧತಿಯೇ ಇಂದಿನ ಜಾತಿಪದ್ಧತಿಗೆ ಕಾರಣವಾಗಿರುವುದರಿಂದ ಜಾತಿವಿನಾಶಕ್ಕೆ ಬುದ್ಧನ ಮಡಿಲು ನಮಗೆ ಸೂಕ್ತವೆನಿಸುತ್ತದೆ.

ಅಂಬೇಡ್ಕರರು ಬುದ್ಧ ಧಮ್ಮವನ್ನು ಸ್ವೀಕರಿಸಿದ್ದು ಕೇವಲ ಸಾಮಾಜಿಕ ಸಮಾನತೆಗಾಗಿ ಎಂದು ಹಲವರು ಭಾವಿಸಿದ್ದಾ ಬುದ್ಧನನ್ನು ಕೇವಲ ಅಹಿಂಸೆಗೆ ಸೀಮಿತಗೊಳಿಸಿದ್ದ ಇಲ್ಲಿ ಬೌದ್ಧರನ್ನು ಮೀರಿ ಬುದ್ಧನಲ್ಲಿ ಸಮಾನತೆಯನ್ನು ಶೋಧಿಸಿದವರು ಅಂಬೇಡ್ಕರ್. ಅಂತಹ ಅಂಬೇಡ್ಕರರನ್ನು ಇಂದು ನಾವು ಕೇವಲ ಸಾಮಾಜಿಕ ಸಮಾನತೆಗೆ ಮೀಸಲಿರಿಸದೆ ಆರ್ಥಿಕ ಮತ್ತು ರಾಜಕೀಯ ಸಮಾನತೆಯೆಡೆಗೆ ಅವರ ಪರಿಹಾರಗಳು ಏನಿದ್ದವು ಎಂಬುದನ್ನು ಅರಿಯಬೇಕಿದೆ. ಈ ದೃಷ್ಟಿಯಲ್ಲಿ ನಾವು ಸಫಲರಾಗಲು ಬುದ್ಧನಲ್ಲಿ ಒಂದು ಬೆಳಕನ್ನು ಕಾಣಬಹುದಾಗಿದೆ. ಬುದ್ಧನ ಸಂಘದಲ್ಲಿ ಬ್ರಾಹ್ಮಣರಿಂದ ಹಿಡಿದು ಅಸ್ಪೃಶ್ಯರವರೆಗೂ ಸದಸ್ಯರಾಗಿದ್ದರು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಇದನ್ನೇ ನಾವು ಅಂಬೇಡ್ಕರರು ಕಲ್ಪಿಸಿದ ಬೃಹತ್ ಶೋಷಿತರ ವೇದಿಕೆಯಾಗಿ ರೂಪಿಸಿಕೊಳ್ಳಬೇಕಾಗಿದೆ. ಈ ಬೃಹತ್ ವೇದಿಕೆಯಿಂದಲೇ ರಾಜಕೀಯ ನೆಲೆಯನ್ನು ಕಟ್ಟಿಕೊಳ್ಳುವುದು ಇಂದಿನ ತುರ್ತಾಗಿದೆ. ಅಂಬೇಡ್ಕರರು ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್ ಪ್ರಬಂಧದಲ್ಲಿ ಬುದ್ಧನು ಹೇಗೆ ಖಾಸಗಿ ಆಸ್ತಿಯ ನಿರ್ಮೂಲನೆಯನ್ನು ಬೋಧಿಸಿದ್ದಾನೆ ಎಂಬುದನ್ನು ತಿಳಿಸಿದ್ದಾರೆ. ಇದು ನಿಜಕ್ಕೂ ನಮ್ಮನ್ನು ಸಮಾನತೆಯೆಡೆ ಕರೆದುಕೊಂಡು ಹೋಗುತ್ತದೆ. ಸ್ವತಃ ಬುದ್ಧನೇ ಸೇನಾಪ ಸಿಂಹಸೇನನಿಗೆ ಯುದ್ಧವು ಅನಿವಾರ್ಯವಾಗಿದ್ದರೆ ಮಾ ಮಾಡು ಎಂದು ಹೇಳಿರುವುದರಿಂದ ಶೋಷಿತರು ಕಟ್ಟಿ ಕುಳಿತುಕೊಳ್ಳುವ ಪ್ರಮೇಯವೇ ಇಲ್ಲ. ಬುದ್ಧ ವಿಶಾಲವಾದ ಚಪ್ಪರದಲ್ಲಿ ಎಲ್ಲ ಜಾತಿಯ ಶೋಷಿತರು ಸೇರಲು ಅವಕಾಶವಿದೆ. ಇಂತಹ ಅವಕಾಶವನ್ನು ಸೃಷ್ಟಿಸು ಕರ್ತವ್ಯವನ್ನು ಬಾಬಾಸಾಹೇಬರು ನಮಗೆ ಬಿಟ್ಟು ಹೋಗಿದ್ದಾರೆ. ಆದ್ದರಿಂದ ಇನ್ನೂ ಅದೇ ತಾರತಮ್ಯ ಕೂಪದಲ್ಲಿ ಬೇಯುತ್ತಿರುವ ನಮ್ಮ ಸೋದರರಿ ಸಮಾನತೆಯ ರುಚಿ ತೋರಿಸಬೇಕಿದೆ. ಬಹುಶಃ ಪೀಳಿಗೆಯಲ್ಲಾಗದಿದ್ದರೂ ಮುಂದಿನ ದಲಿತ ಪೀಳಿಗೆಯಂ ಜಾತಿ ಬಿಟ್ಟು ಕೇವಲ ಬೌದ್ಧನಾಗಿ ಜೀವಿಸಬಹುದಾಗಿ ಮತಾಂತರವಾದ ನವ ಬೌದ್ಧರು ಕೂಡ ಪರಿಶಿಷ್ಟ ಜಾತಿ ಸೇರುವುದರಿಂದ ಯಾವುದೇ ರೀತಿಯ ಸರ್ಕಾ ಸವಲತ್ತುಗಳನ್ನು ಕಳೆದುಕೊಳ್ಳುವ ಭಯವಿರುವುದಿಲ್ಲ.

ಈ ನಡುವೆಯೇ ನಮಗೆ ಮತ್ತೊಂದು ಆಘಾ ಎದುರಾಗುತ್ತಿದೆ. ದಿನೇದಿನೇ ಅಂಬೇಡ್ಕರರು ಯಾ ಹಿಂದೂತ್ವವನ್ನು ದೂರ ಮಾಡಲು ನಮಗೆ ತಿಳಿಸಿದ್ದರೋ ಅದೇ ಹಿಂದೂತ್ವದೆಡೆಗೆ ದಲಿತರು ಇತ್ತೀಚೆ ವಾಲುತ್ತಿರುವುದು. ಮೀಸಲಾತಿ ಸೌಲಭ್ಯದಿಂದ ಮೇ ಬಂದಿರುವ ಇಂದಿನ ಹಲವು ದಲಿತ ವಿದ್ಯಾವಂತ ನೌಕರರು ಅಂಬೇಡ್ಕರರ ಆಶಯಕ್ಕೆ ವಿರುದ್ಧವಾಗಿ ಮನೆಗ ಸತ್ಯನಾರಾಯಣ ಪೂಜೆಗಳನ್ನು ಮಾಡುತ್ತಾ, ಜ್ಯೋತಿಷಿ ಮನೆ ಬಾಗಿಲಿಗೆ ಅಲೆಯುತ್ತಾ, ಮಡೆಸ್ನಾನದಂತಹ ಅನಿ ಪದ್ಧತಿಯಲ್ಲಿ ಉರುಳಾಡುತ್ತಾ ಮತ್ತದೇ ಕೂಪ ಬೀಳುತ್ತಿರುವುದು ನಿಜಕ್ಕೂ ವಿಷಾದನೀಯ. ಏನ ಅರಿಯದ ದಲಿತರನ್ನು ಹಿಂದೂತ್ವದ ಕೂಪದಿಂದ ಹೊ ತರಬೇಕಾದ ವಿದ್ಯಾವಂತರೇ ಇಂತಹ ಕೆಲಸಗಳ ಮಾಡುತ್ತಿರುವುದು ಅಂಬೇಡ್ಕರರ ವಿಮೋಚನಾ ರಥವ ಹಿಂದಕ್ಕೆ ಎಳೆದಂತೆಯೇ ಆಗಿದೆ. ಇಂತಹ ತಿಳಿಗೇಡಿಗಳ ಬಳಸಿಕೊಳ್ಳುವ ಮನುವಾದಿಪರ ರಾಜಕೀಯ ಪಕ್ಷಗ ದಲಿತರನ್ನು ತಮ್ಮ ಸಹೋದರರನ್ನೇ ಸೋಲಿಸು ದಾಳವನ್ನಾಗಿಸಿಕೊಳ್ಳುತ್ತಿವೆ. ಈ ಬೆಳವಣಿಗೆ ನೂರಾ ಕಾಜ್ರೋಳ್ಕರರನ್ನು ಹುಟ್ಟು ಹಾಕುತ್ತದೆಯೇ ಹೊ ಒಬ್ಬ ಅಂಬೇಡ್ಕರರನ್ನೂ ಹುಟ್ಟಿಸಲಾರದು. ಆದಕಾ ದಲಿತ ಯುವ ಪಡೆಯ ಮೇಲೆ ಮುಂದಿನ ದಿನಗ ಅಗಾಧವಾದ ಜವಾಬ್ದಾರಿಯಿದೆ. ನಮ್ಮ ಜನತೆಯ ವಿಮೋಚನೆಯ ಕಡೆ ಕೊಂಡೊಯ್ಯುವ ಅಗತ್ಯವಿದೆ. ಅ ಜೊತೆಗೆ ಇತರ ಜಾತಿಗಳ ಶೋಷಿತರನ್ನು ಸೇರಿಸಿಕೊ ಮುನ್ನಡೆಯುವ ತುರ್ತಿದೆ. ಇದು ನಮಗೆ ಅಂಬೇ ಮತ್ತು ಬಸವಣ್ಣನ ವಿಚಾರಧಾರೆಗಳಲ್ಲಿ ಅಡಗಿದೆ. ಇವರ ವಿಚಾರಗಳು ಬುದ್ಧನೆಂಬ ಆಲದಮರದಲ್ಲಿ ಅಡಗಿ ಅದೊಂದೇ ಶೋಷಿತರಿಗೆ ಆಶ್ರಯದ ಜೊತೆಗೆ ಸಾಮಾ ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ತರಬಲ್ಲ ಈಗಲೇ ನಾವು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗ ಯಥಾ ಪ್ರಕಾರ NCRB ನೀಡುವ ವಾರ್ಷಿ ರಿಪೋರ್ಟಿನಲ್ಲಿ ದಿನಕ್ಕೆ 3 ದಲಿತರ ಕೊಲೆಯಾಗು 2 ದಲಿತ ಹೆಣ್ಣು ಮಕ್ಕಳ ಅತ್ಯಾಚಾರವಾಗುತ್ತದೆ ಮನೆಗೆ ಬೆಂಕಿ ಹಾಕಲಾಕುತ್ತದೆ ಎಂದು ನೋಡಿ ಲೊಚ ಸುಮ್ಮನಾಗುವವರ ಸಂಖ್ಯೆ ಹೆಚ್ಚಾಗುತ್ತದೆ. ಇನ್ನೂ ಮು ಹೋದರೆ ಮೇಲಿನ ಸಂಖ್ಯೆಗಳಲ್ಲಿ ನಮ್ಮ ಕುಟುಂಬ ಇರುತ್ತದೆ! ಮತ್ತೂ ಮುಂದೇ ಹೋದರೆ ನಾ ಇರುತ್ತೇವೆ!!

● ವಿ.ಆರ್.ಮೌರ್ಯ, ಬೆಂಗಳ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಲಲಿತೆ: ಶ್ರೀಮಾತೆ

ಜನಪದ ವರ್ಸಸ್ ವೈದಿಕ ಪರಂಪರೆ

ಜನಪದ ಮತ್ತು ವೈದಿಕ ಸಂಪ್ರದಾಯದ ...ಲುವುಗಳಿಗೆ ಸಾಕಷ್ಟು ವ್ಯತ್ಯಾಸಗಳಿವೆ. ಹಾಗೆಯೇ ಈ ...ಎರಡರಲ್ಲೂ ಸಾಮ್ಯತೆಗಳೂ ಇವೆ. ದ್ವಂದ್ವ ಮತ್ತು ...ಮ್ಯತೆಗಳನ್ನು ನೋಡುವಾಗ ಅವುಗಳ ಹಿಂದಿನ ಜನರ ...ನಸ್ಥಿತಿ ಮತ್ತು ಸಾಮಾಜಿಕ ನಿಲುವುಗಳು ಸ್ಪಷ್ಟವಾಗುತ್ತಾ ...ಹೋಗುತ್ತವೆ.


ವೇದ ಮತ್ತು ಉಪನಿಷತ್ತುಗಳಾಗಲಿ ಅಥವಾ ...ಹ್ಮಸೂತ್ರ, ಪತಂಜಲಿ ಯೋಗಸೂತ್ರ ಇನ್ನಾವುದೇ ವೈದಿಕ ...ತ್ತು ಭಾರತೀಯ ದರ್ಶನಗಳ ಸಾಹಿತ್ಯವೂ ಗ್ರಾಂಥಿಕ ...ಪದಲ್ಲಿ ಒದಗಿ ಬಂದವೇನಲ್ಲ. ನಮ್ಮ ಜನಪದ ...ಹಿತ್ಯದಂತೆಯೇ ಬಾಯಿಂದ ಬಾಯಿಗೆ ಹರಿದುಬಂದವು. ...ದರೆ, ಈ ಎರಡರ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ...ವುಗಳ ಉದ್ದೇಶ ಮತ್ತು ನಿಲುವುಗಳಲ್ಲಿ ಢಾಳಾಗಿ ...ಣುವಂತಹ ವ್ಯತ್ಯಾಸಗಳಿವೆ. ವೇದಾಂತ ಸಾಹಿತ್ಯಗಳ ...ಕಾರರು ಅಕ್ಷರಸ್ಥರಾಗಿದ್ದರೂ, ಬರೆಯಲು ...ಬಲ್ಲವರಾಗಿದ್ದರೂ ಬರೆಯದೇ ಹೋಗಲು ಬಹುಮುಖ್ಯ ...ಕಾರಣವೇನೆಂದರೆ, ಆ ಕೃತಿಗಳ ರಹಸ್ಯ ಮತ್ತು ...ಪವಿತ್ರತೆಯನ್ನು ಕಾಪಾಡಲು. ಕೃತಿಗಳು ಶತ್ರುಗಳಿಗೆ ಅಥವಾ ...ಅಪಾತ್ರರಿಗೆ, ಒಟ್ಟಾರೆ ಪರರಿಗೆ ದಕ್ಕಕೂಡದೆಂಬ ...ಮನೋಭಾವವೇ ಅವರ ಮೌಖಿಕ ಪರಂಪರೆಗೆ ಕಾರಣ. ...ಇದರಿಂದ ಕೃತಿಯ ಅಥವಾ ವಿಚಾರಗಳ ಮೌಲ್ಯವು ...ಅಪಮೌಲ್ಯಕ್ಕೆ ಒಳಗಾಗುವುದೆಂಬ ಭಯವು ಒಂದು ...ಕಾರಣಯಾದರೆ, ನಿರ್ದಿಷ್ಟ ಗುರುಪರಂಪರೆ ಮತ್ತು ...ಶಿಷ್ಯರಿಗೆ ಮಾತ್ರ ಈ ವಿದ್ಯೆ ಮೀಸಲಾಗಿರಲಿ ...ಎಂಬಂಥ ಮನೋಭಾವವೂ ಕೂಡ ಕಾರಣವಾಗಿತ್ತು. ...ತಮ್ಮ ವಿದ್ಯೆಯ ಫಲವನ್ನು ಬೇರೆ ಯಾರೂ ...ಪಡೆಯಬಾರದು ಎಂಬಂತಹ ಅವರ ಮನೋಭಾವವು ...ಎಷ್ಟೋ ವಿದ್ಯೆಯ ಮೂಲ ವಿಚಾರ ಮತ್ತು ಭಾವವು ...ಅವರೊಂದಿಗೇ ನಾಶವಾಗಿ ಹೋಗಿದ್ದಲ್ಲದೇ, ಪರರಿಗೆ ...ಕದ್ದು ಬರೆ ಸಾಗಿದ ವಿದ್ಯೆ ತನ್ನ ಮೂಲ ಸ್ವರೂಪವನ್ನು ...ಕಳೆದುಕೊಂಡಿರಲಿಕ್ಕೂ ಸಾಧ್ಯವಿದೆ. ಏನೇ ಆಗಲಿ, ಅವರ ...ಮೌಖಿಕ ಪರಂಪರೆಯು ಹೊಂದಿದ್ದ ಸಂಕುಚಿತ ...ಮನೋಭಾವದಿಂದಾಗಿ ಅದರ ಮೌಲ್ಯವನ್ನಾಗಲಿ, ...ಪವಿತ್ರತೆಯನ್ನಾಗಲಿ ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ.


ಆದರೆ, ಜನಪದದಲ್ಲಿ ಹಾಗಾಗಲಿಲ್ಲ. ಅದು ...ಮೌಖಿಕವಾಗಿ ಬೆಳೆದುಬಂದ ಮೊದಲ ಕಾರಣ ಅವರು ...ಅನಕ್ಷರಸ್ಥರಾಗಿದ್ದರು. ಎರಡನೆಯದಾಗಿ ವೈದಿಕದಲ್ಲಿ ಇದ್ದಂತೆ ...ಸಂಕುಚಿತ ಮತ್ತು ಸೀಮಿತ ಗುಂಪಿನಲ್ಲಿರದೇ ಬಹು ...ಮುಕ್ತವಾಗಿ, ತೆರೆದ ಸಾಮಾಜಿಕ ವಲಯದಲ್ಲಿ ವಿಷಯಗಳು ...ಅಭಿವ್ಯಕ್ತವಾಗುತ್ತಿದ್ದವು ಮತ್ತು ವಿಚಾರಗಳು ಬೆಳೆಯುತ್ತಿದ್ದವು. ...ಇದರಲ್ಲಿ ಮೂಲ ಕರ್ತೃ ಯಾರೇ ಆಗಿದ್ದರೂ, ಜನರು ...ತಮ್ಮ ನೆಲೆಗೆ ಬಂದಾಗ, ತಮ್ಮ ಸಂಸ್ಕೃತಿಯ ಪರಿಧಿಗೆ ...ಬಂದಾಗ ಮುಕ್ತವಾಗಿ ತಮ್ಮ ಬಳುವಳಿ ನೀಡುತ್ತಿದ್ದರು. ...ವಿಚಾರವು ತಮ್ಮ ನೆಲೆಯಿಂದ ಅಭಿವ್ಯಕ್ತಗೊಳ್ಳಲು ಮತ್ತು ...ತಮ್ಮ ಪರಂಪರೆಯ ಬಳುವಳಿಯನ್ನು ಪಡೆದುಕೊಂಡು ...ಬೆಳೆಯಲು ಮುಕ್ತವಾದ ಅವಕಾಶಗಳಿರುತ್ತಿದ್ದವು. ...ದೇವರುಗಳು ಕಥಕ್ಕಳಿ, ಯಕ್ಷಗಾನದಂತಹ ಜನಪದ ಕಲೆಗಳಲ್ಲಿ ...ರಂಗುರಂಗಾಗಿ ವಿಜೃಂಭಿಸಿದವು. ಹಾಗಾಗಿ, ...ಜನಪದದಲ್ಲಿರುವಂತಹ ವೈವಿಧ್ಯತೆಯ ಜೊತೆಗೆ, ಮುಕ್ತ ...ಅವಕಾಶ, ಜೀವಪರ ಮತ್ತು ಸಮಾಜಮುಖಿಯಾದಂತಹ ...ನಿಲುವುಗಳು ಕಟ್ಟರ್ ವೈದಿಕ ಸಾಹಿತ್ಯದಲ್ಲಿ ಸಾಧ್ಯವಾಗಲೇ ...ಇಲ್ಲ. ಬಾಯಿಂದ ಬಾಯಿಗೆ ಹರಿದುಬರುವ ಪರಂಪರೆ ...ವೈದಿಕದಲ್ಲಿದ್ದರೂ ಅದು ಜನಪದವಾಗದೇ ಬರಿಯ ...ಮೌಖಿಕ ಸಾಗುವಳಿಯಷ್ಟೇ ಆಯಿತು.


...ತಮ್ಮ ವಿಷಯಗಳ ಪ್ರತಿಮಾರೂಪಗಳ ಶುದ್ಧತೆಯ ...ಬಗ್ಗೆ ವೈದಿಕರು ತೀರಾ ಅವೈಚಾರಿಕವಾಗಿ ಮತ್ತು ಕೆಲವರು ...ಅಸಂಬದ್ಧತನದಲ್ಲಿ ನಿಲುವುಗಳನ್ನು ಬದಲಿಸುತ್ತಾ ...ಹೋಗುತ್ತಾರೆ. ಗೀತೆ, ನೃತ್ಯ ಮತ್ತು ಇತರ ಕಲೆಯ ...ಪ್ರಕಾರಗಳಲ್ಲಿ ಅಭಿವ್ಯಕ್ತವಾಗುವ ಶುದ್ಧ ಸ್ವರೂಪದಲ್ಲಿ ಇಲ್ಲದ ...ವಿಚಾರಗಳನ್ನು ತಮ್ಮ ವೃತ್ತಿಗೆ ಅನುಕೂಲಕರವಾಗುವಂತಿದ್ದರೆ ...ಸ್ವೀಕರಿಸಿಕೊಳ್ಳುತ್ತಾರೆ. ಅದೇ ವೈಚಾರಿಕವಾಗಿ ಪ್ರಶ್ನಿಸಿದರೆ ಮಾತ್ರ ...ಶುದ್ಧತೆಯ ಬಗ್ಗೆ ಮಾತಾಡುತ್ತಾ ಗೊಂದಲವೆಬ್ಬಿಸಿಕೊಳ್ಳುತ್ತಾರೆ. ...ಇದರಿಂದ ವೈದಿಕರಿಗೆ ಯಾವುದೂ ಸ್ಪಷ್ಟವಿಲ್ಲ, ವ್ಯಾಪಾರಕ್ಕೆ ...ನಷ್ಟವಾಗುವ ಆತಂಕದಲ್ಲಿ ಮಾತಾಡುವ ಅವರು ಅತ್ಯಂತ ...ಅವಿಚಾರಿಗಳು ಮತ್ತು ಕುತರ್ಕಿಗಳು.

...ಪುರಾಣದ ಕಥೆಗಳನ್ನು ನೋಡಿದಾಗ ವೈದಿಕರಿಗೂ ...ಜನಪದದ ಪ್ರಭಾವವಾಗಿದೆ ಎಂದೂ ತೋರುತ್ತದೆ. ಆದರೆ ...ಅವು ಅವುಗಳನ್ನು ನಿರೂಪಿಸಿರುವ ಉದ್ದೇಶಗಳು ಮಾತ್ರ ...ಜಾನಪದಿಕರಿಂದ ಪುರಾಣಿಕರಿಗೆ ಬದಲಾಗಿವೆ. ಕೆಲವು ...ಪುರಾಣಗಳು ಅಮೂರ್ತವಾಗಿರುವಂತಹ ವಿಷಯಗಳನ್ನು ...ರೂಪಕಗಳಲ್ಲಿ ಕಟ್ಟಿಕೊಡುವ ಪ್ರತಿಮೆಗಳನ್ನು ನಿಲ್ಲಿಸಿದರೆ, ಕೆಲವು ಪುರಾಣಗಳಲ್ಲಿ ತಮ್ಮ ನಾಯಕ ಅಥವಾ ನಾಯಕಿಯ ಬಹು ಉತ್ಪ್ರೇಕ್ಷಿತ ವರ್ಣನೆ. ಹಾಗೆಯೇ ಕೆಲವು ಪುರಾಣಗಳಲ್ಲಿ ಸಾಂಸ್ಕೃತಿಕ ರಾಜಕಾರಣ ಮತ್ತು ಸಮಾಜದ ಮೇಲೆ ನೇರವಾಗಿ ಹತೋಟಿಯನ್ನು ತೆಗೆದುಕೊಳ್ಳುವಂತಹ ಮನೋಭಾವ. ಆದರೆ, ಜನಪದದಲ್ಲಿ ದೇವತೆಗಳನ್ನು ಮತ್ತು ದೈವೀಶಕ್ತಿಗಳನ್ನು ತಮ್ಮ ಗುಣ ಮತ್ತು ಸ್ವಭಾವದಲ್ಲಿ ಕಂಡುಕೊಂಡಂತಹ ನಿರೂಪಣಾ ಕಥನಗಳು ಪುರಾಣಗಳಲ್ಲಿಯೂ ಕೂಡ ಕಾಣಿಸಿಕೊಂಡಿವೆ. ಆದರೆ, ಅವುಗಳನ್ನು ರಚಿಸಿದವರು ಮಾತ್ರ ವೈದಿಕರೇ ಆಗಿದ್ದು ಅಥವಾ ಅವರಿಗೆ ಸಮೀಪದವರೇ ಆಗಿದ್ದಿರಬಹುದು. ಆ ಕಾರಣದಿಂದ ಪುರಾಣಗಳನ್ನು ಅವೆಷ್ಟೇ ವೈರುಧ್ಯಗಳಿಂದ ಕೂಡಿದ್ದರೂ ವೈದಿಕರು ಅವನ್ನು ಪರಿಗಣಿಸುತ್ತಾರೆ, ಅವರಿಗೆ ಹೊಂದದೇ ಹೋದ ಪಕ್ಷದಲ್ಲಿ ಮರೆಮಾಚಿಬಿಡುತ್ತಾರೆಯೇ ಹೊರತು ಅವನ್ನು ಖಂಡಿಸುವುದಿಲ್ಲ.

ಆದರೆ, ಅನಕ್ಷರಸ್ಥ ಜನರ ಮತ್ತು ಆಳುವ ಅಥವಾ ಬ್ರಾಹ್ಮಣ ವರ್ಗದವರಲ್ಲದ ಜನರಿಂದ ಬಂದಂತಹ ಜನಪದದಲ್ಲಿರುವ ದೇವರುಗಳನ್ನು ಮತ್ತವರ ಕಥೆಗಳನ್ನು ವೈದಿಕರು ತಮ್ಮ ವ್ಯಾಪ್ತಿಗೆ ಒಳಪಡಿಸಿಕೊಳ್ಳದೇ ಹೋದದ್ದು ಅಸಡ್ಡೆ, ಮೇಲರಿಮೆ ಹಾಗೂ ಸಾಂಸ್ಕೃತಿಕ ಭಿನ್ನತೆಯಿಂದಾಗಿ ಮಾತ್ರವಲ್ಲದೇ, ತಮ್ಮ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಅವೇನೂ ಸಹಕಾರಿಯಾಗಿರಲಿಲ್ಲ. ದೇವರೆಂದರೆ, ಮಾನವೇತರ







ಶಕ್ತಿಯುಳ್ಳದ್ದು ಮತ್ತು ಮುನಿದಾಗ ಶಪಿಸುವ ಅಥವಾ ನಾಶಮಾಡುವ, ಒಲಿದಾಗ ವರಕೊಡುವಂತಹ ಸರ್ವಶಕ್ತ ಸ್ವರೂಪವನ್ನು ಅವು ಕೊಡದೇ, ಸಾಮಾನ್ಯ ಮಾನವರ ಜೀವನದಲ್ಲಿ ಮುನಿದಾಗ ಶಪಿಸುವ, ಒಲಿದಾಗ ವರಕೊಡುವಂತಹ ಸಹಜ ಕ್ರಿಯೆ-ಪ್ರತಿಕ್ರಿಯೆಗಳು ಜನಪದರಲ್ಲಿ ಕಾಣುತ್ತಿದ್ದವು. ವೈದಿಕರಲ್ಲಿ ದೇವರ ಬಗ್ಗೆ ನಂಬುಗೆ ಶ್ರದ್ಧೆಗಳು ಪುರೋಹಿತ ಅಥವಾ ಯಾಜ್ಞಿಕರಂಥ ಒಂದು ವರ್ಗದ ಜನರಿಂದ ಹೇರಲ್ಪಟ್ಟುದಾದರೆ, ಜನಪದದಲ್ಲಿ ಶ್ರದ್ಧೆ ಮತ್ತು ನಂಬುಗೆಗಳು ಸಾಮಾನ್ಯರಲ್ಲಿ ಮುಕ್ತ ಸಮಾಜದಲ್ಲಿ ಉಂಟಾದ ಅನುಭವಗಳಿಂದ ಹುಟ್ಟಲ್ಪಟ್ಟು ಅವುಗಳನ್ನು ಪರಂಪರೆಯಾಗಿ ಮುಂದುವರಿಸಲ್ಪಟ್ಟಿರುತ್ತಾರೆ. ವೈದಿಕರಲ್ಲಿ ವಿಷಯಗಳನ್ನು ನಂಬಿಸುವ ಪ್ರಕ್ರಿಯೆಯಾದರೆ, ಜನಪದದಲ್ಲಿ ತಾವಾಗಿ ನಂಬುವ ಪ್ರಕ್ರಿಯೆ. ಹಾಗಾಗಿಯೇ ವೈದಿಕ ಶ್ರದ್ಧಾ ನಂಬುಗೆಗಳು ಒಂದು ವರ್ಗದ ಹಿತಾಸಕ್ತಿಯನ್ನು ಕಾಪಾಡುವ ಸಂಚಿನಿಂದ ಕೂಡಿರುವ ಮೌಢ್ಯದ ಬಿತ್ತನೆಯಂತೆ ಕಂಡರೆ, ಜನಪದದ ನಂಬುಗೆಗಳು ಅವರವರ ಸಾಂಸ್ಕೃತಿಕ ಹಿನ್ನೆಲೆಗಳನ್ನು ಹೊಂದಿರುವಂತಹ ಮುಗ್ಧತೆಯ ನಿರೂಪಣೆಗಳಂತೆ ಕಾಣುತ್ತವೆ.

ಸೃಜನಶೀಲ ಪುರಾಣಿಕರು

ವೈದಿಕ ಪರಂಪರೆಯ ಪರಿಧಿಯಲ್ಲಿಯೇ ಇದ್ದುಕೊಂಡು, ಅವರ ನಿಯಮ ನಡಾವಳಿಗಳಿಗೆ ಬದ್ಧವಾಗಿಯೇ ಇದ್ದುಕೊಂಡು ಕೆಲವರು ತಮ್ಮ ಸೃಜನಶೀಲತೆಯನ್ನು ಮುಕ್ತವಾಗಿ ಮೆರೆದರು. ಇದು ಕೆಲವೊಮ್ಮೆ ವೈದಿಕ ಪರಂಪರೆಯನ್ನು ಪರೋಕ್ಷವಾಗಿ ನಿರಾಕರಿಸುವುದಾದರೆ, ಮತ್ತೆ ಕೆಲವರು ಜನಸಾಮಾನ್ಯರಿಗೆ ಆ ವೈದಿಕ ಪರಂಪರೆಯ ಶ್ರೇಷ್ಠತೆಯನ್ನು ಮನವರಿಕೆ ಮಾಡಿಕೊಡಲು ಕೃತಿ ರಚನೆಗಳನ್ನು ಮಾಡಿದರು. ಮತ್ತೂ ಕೆಲವರು, ವೇದಾಂತದ ಹಿನ್ನೆಲೆಯುಳ್ಳಂತಹ ಸೃಜನಶೀಲ ಋಷಿಗಳು, ಆರ್ಯ ಕವಿಗಳು ಅಥವಾ ದಾರ್ಶನಿಕರು ಅತ್ಯುತ್ತಮವಾದಂತಹ ಒಳನೋಟಗಳನ್ನು ಒಳಗೊಂಡಂತಹ ಪೌರಾಣಿಕ ಕೃತಿಗಳಿಗೆ ಕಾರಣರಾದರು. ಹಾಗಾಗಿ ನಾವು ಎಲ್ಲಾ ಪುರಾಣಗಳನ್ನು ಸಾರಾಸಗಟಾಗಿ ತಳ್ಳಿ ಹಾಕಲು ಸಾಧ್ಯವಾಗುವುದಿಲ್ಲ. ಅಧ್ಯಯನದ ದೃಷ್ಟಿಯಿಂದ ಕೆಲವು ಮಹತ್ತರವಾದ ಪಾತ್ರ ವಹಿಸುತ್ತವೆ ಹಾಗೂ ಯಾವುದೇ ಪುರಾಣ ಅಥವಾ ಇತರೇ ಕೃತಿಯಾಗಿರಲಿ, ಓದುಗನು ನಿಷ್ಪಕ್ಷಪಾತನಾಗಿ, ಜಿಜ್ಞಾಸುವಾಗಿ, ಪೂರ್ವಾಗ್ರಹಪೀಡಿತನಲ್ಲದೇ ಓದಿದರೆ, ಕೃತಿಕಾರನ ಆಶಯವು, ಸಾಮರ್ಥ್ಯವು ಮತ್ತು ಕೃತಿಯ ಧ್ವನಿಯು ನೇರವಾಗಿಯೇ ಅರಿವಿಗೆ ಬರುತ್ತದೆ. ಕೃತಿಕಾರನ ಅಜ್ಞಾನವಾಗಲಿ, ಮುಗ್ಧತೆಯಾಗಲಿ, ಕೌಶಲ್ಯವಾಗಲಿ ಕೃತಿಯನ್ನು ಕಟ್ಟಿಕೊಡುವ ರೂಪಕಗಳಲ್ಲಿ ಮತ್ತು ಅವುಗಳ ಆಶಯಗಳಲ್ಲಿ ಸ್ಪಷ್ಟವಾಗಿ ಕಾಣಸಿಗುತ್ತದೆ.

ಕೆಲವೊಂದು ಪುರಾಣಗಳು ತಮ್ಮದೇ ಆದಂತಹ ಆಶಯ ಮತ್ತು ಪರಿಕಲ್ಪನೆಗಳನ್ನು ಹೊಂದಿದ್ದರೂ ಕೂಡ, ಅವುಗಳಿಗೆ ವ್ಯಾಖ್ಯಾನವನ್ನು ಕೊಡುವಾಗ ಬೇರೆಯೇ ವಿಷಯವನ್ನು ಹೇಳುವಂತೆ ಕಾಣುತ್ತದೆ. ಪುರಾಣಕ್ಕೆ ತರ್ಕಬದ್ಧವಾಗಿ ತಮ್ಮದೇ ವ್ಯಾಖ್ಯಾನ ಕೊಡುವವರನ್ನು ಕಂಡಾಗ, ನನಗೆ ಮಾಡರ್ನ್ ಆರ್ಟ್ ನೆನಪಿಗೆ ಬರುತ್ತದೆ. ಅದರಲ್ಲಿ ಕಲಾಕಾರ ತನ್ನ ಸೃಜನಶೀಲ ಭಾವುಕತೆ ಅಥವಾ ಉನ್ಮತ್ತತೆಯಲ್ಲಿ ವಿಹರಿಸುತ್ತಾ ಹೊಸ ಕಲಾಕೃತಿಗೆ ಕಾರಣನಾಗಿರುತ್ತಾನೆ. ಆದರೆ, ಅದನ್ನು ವಿಶ್ಲೇಷಿಸುವ ಅಥವಾ ಅದಕ್ಕೆ ವ್ಯಾಖ್ಯಾನ ನೀಡುವ ವ್ಯಕ್ತಿ ಅಥವಾ ವಿಮರ್ಶಕ ತನ್ನದೇ ಆದ ಬಗೆಯಲ್ಲಿ, ತನ್ನ ಅಧ್ಯಯನ, ಪರಿಗ್ರಹಿಸುವ ಶಕ್ತಿ ಮತ್ತು ಸಾಂಸ್ಕೃತಿಕ/ಸಾಮಾಜಿಕ ಹಿನ್ನೆಲೆಯ ಪ್ರಕಾರ ಅದನ್ನು ತರ್ಕಬದ್ಧವಾಗಿಯೇ ವಿವರಿಸುತ್ತಾನೆ. ಇದು ಒಂದು ಪರಿಗ್ರಹಿಸುವಿಕೆಯ ವಿಧಾನವಾಗುವುದೇ ಹೊರತು, ಇದೇ ಕೃತಿಕಾರನ ಧ್ವನಿ ಎಂದು ಹೇಳಲು ಬರುವುದಿಲ್ಲ. ಆದರೆ, ವ್ಯಾಖ್ಯಾನಿಸುವವನಿಗೆ ತಾನು ಕಂಡುಕೊಂಡಂತಹ ಒಳನೋಟಗಳನ್ನು, ತನ್ನದೇ ವಿಷಯವನ್ನು ಮತ್ತು ವಿಚಾರವನ್ನು ವಿವರಿಸಲು ಕೃತಿಯನ್ನು ಬಳಸಿಕೊಳ್ಳುತ್ತಾನೆ.

ಅದೇ ರೀತಿಯಲ್ಲಿ ಪುರಾಣದ ವಿಶ್ಲೇಷಣೆಗಳು ನಾನಾರೀತಿಯಲ್ಲಿ ಆಗುತ್ತಿರುತ್ತವೆ. ಅವು ಸೌಂದರ್ಯಾತ್ಮಕವಾಗಿದ್ದು ರಸಿಕತೆಯನ್ನು ಉಂಟುಮಾಡುವುದೋ, ಹೊಸ ವಿಷಯಗಳಿಗೆ ರೂಪಕವಾಗಿ ತೆರೆದುಕೊಂಡು ವೈಚಾರಿಕತೆಯನ್ನು ಹುಟ್ಟು ಹಾಕುವುದೋ ಅಥವಾ ಮೌಢ್ಯವನ್ನು ಬಿತ್ತಿ ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಯತ್ನಿಸುವುದೋ; ಆಯಾ ವ್ಯಾಖ್ಯಾನಕಾರನ ಗುಣಧರ್ಮವನ್ನು, ಸ್ವಭಾವವನ್ನು ಅವಲಂಬಿಸಿರುತ್ತದೆ.

ವೈಚಾರಿಕವಾಗಿ ವ್ಯಾಖ್ಯಾನಗಳೇನೇ ಇರಲಿ, ರಸಿಕತೆಯ ರಸಸ್ವಾದನೆಗಳೇನೇ ಇರಲಿ, ಅವುಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಉದ್ದೇಶಗಳನ್ನು ಮಾತ್ರ ಇತಿಹಾಸದ ಅಧ್ಯಯನದ ಹಿನ್ನೆಲೆಯನ್ನು ಉಳ್ಳವರಿಗೆ ಮಾತ್ರ ನಿರೂಪಿಸಲು ಸಾಧ್ಯವಾಗುತ್ತದೆ.

ಹಾಗೆಯೇ ಲಲಿತೆಯ ಕಥೆಯನ್ನೂ ಮನೋವಿಜ್ಞಾನದ ಹಿನ್ನೆಲೆಯನ್ನಿಟ್ಟುಕೊಂಡು ವಿವರಿಸಲು ಸಾಧ್ಯ. ಜೋಸೆಫ್ ಮರ್ಫಿ ವಿವರಿಸುವ ದ ಪವರ್ ಆಫ್ ಸಬ್ ಕಾನ್ಷಸ್ ಮೈಂಡಿನ ವಿಚಾರಗಳನ್ನು ಗಮನಿಸುತ್ತಾ ಅನೇಕ ಸಾಂಸ್ಕೃತಿಕ ವಿಚಾರಗಳೂ ಲಲಿತೆಯಲ್ಲಿ ಕಂಡುಬರುತ್ತದೆ.

ಶ್ರೀಮಾತಾ ಶ್ರೀಮಹಾರಾಜ್ಞಿ

ಲಲಿತಾ ಸಹಸ್ರನಾಮದಲ್ಲಿನ ಮೊಟ್ಟ ಮೊದಲ ನಾಮವೇ ಶ್ರೀಮಾತೆ. ಪೋಷಿಸುವ ಸ್ವಭಾವದ ಪ್ರತಿಮಾರೂಪವಾಗಿರುವ ಶಕ್ತಿಗೆ ಶ್ರೀಮಾತೆ ಎಂಬ ಹೆಸರನ್ನು ಹೇಳಿದರೆ, ಶ್ರೀ ಮಹಾರಾಜ್ಞಿ ಎಂದು ಹೇಳುವ ಮೂಲಕ ಆ ಪೋಷಿಸುವ ಶಕ್ತಿಯೇ ತನ್ನ ಗುಣಪ್ರದರ್ಶನದ ಮೂಲಕ ಆಳುವ ಸಾಮರ್ಥ್ಯವನ್ನೂ ಹೊಂದಿರುವುದು ಎಂದು ಹೇಳುತ್ತಾರೆ.

ಇಲ್ಲಿ ಜೋಸೆಫ್ ಮರ್ಫಿಯ ಸುಪ್ತಚೈತನ್ಯದ ಶಕ್ತಿಯ ವಿವರಣೆಯನ್ನೂ ಮತ್ತು ಲಲಿತೆಯ ವಿವರಣೆಯನ್ನೂ ತಾಳೆ ಮಾಡಿ ನೋಡಿದರೆ ಸಾಮ್ಯತೆ ಕಾಣುವುದು. ಅತಿ ಸುಪ್ತವಾಗಿರುವ ಸೂಕ್ಷ್ಮಮನಸ್ಥಿತಿಯ ಶಕ್ತಿಯು ತನ್ನೊಳಗೆ ಬರುವ ಎಲ್ಲಾ ವಿಚಾರಗಳನ್ನೂ ನಿಷ್ಪಕ್ಷಪಾತವಾಗಿ, ನಿರುದ್ದೇಶದಿಂದ ಪೋಷಿಸುವುದು. ಹಾಗೆ ಪೋಷಿಸಲ್ಪಟ್ಟ ವಿಷಯಗಳೇ ತಮ್ಮ ಪ್ರಭಾವವನ್ನು ಬೀರುವ ಮೂಲಕ ಜಾಗೃತಿ ಚೇತನದ ಮುಖಾಂತರ ವ್ಯಕ್ತಿಯ ನಡವಳಿಕೆಯನ್ನು, ಕ್ರಿಯೆ, ಪ್ರತಿಕ್ರಿಯೆ ಮತ್ತು ಪ್ರಕ್ರಿಯೆಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವುದು.

ಹೀಗೆಯೇ ವಿವರಿಸುತ್ತಾ ಹೋದಂತೆ ಬಹಳ ಕುತೂಹಲಕರವಾದಂತಹ ಅಂಶವನ್ನು ಲಲಿತಾ ಸಹಸ್ರನಾಮ ಹೇಳುತ್ತದೆ. 'ಮಹಾಸಕ್ತ ಕುಂಡಲಿನೀ ಬಿಸತಂತು ತನೀಯಸಿ' ಎನ್ನುತ್ತಾ ಮಹ ಎಂದರೆ ಉತ್ಸವದಲ್ಲಿ, ಉತ್ತಮವಾಗಿರುವ, ಉತ್ಕೃಷ್ಟವಾಗಿರುವ ಆನಂದದಲ್ಲಿ ಆಸಕ್ತಿಯನ್ನು ಹೊಂದಿರುವ ಈ ಶಕ್ತಿಯು ಕುಂಡಲಾಕಾರವಾಗಿದ್ದು, ಕಮಲನಾಳದಂತೆ ಕೃಶಾಕೃತಿಯುಳ್ಳದ್ದು ಎಂದು ಹೇಳುತ್ತದೆ. ಈ ಜಗತ್ತಿನ ಎಲ್ಲಾ ಬಗೆಯ ಶಕ್ತಿಯ ತರಂಗಗಳನ್ನು ಸೂಕ್ಷ್ಮ ತಂತುಗಳಾಗಿ ಚಿತ್ರಿಸುವ ನಿರೂಪಣಾ ಪದ್ಧತಿಯಂತೆ ಜೋಸೆಫ್ ಮರ್ಫಿಯ ಸುಪ್ತಚೈತನ್ಯವೂ ಯಾವಾಗಲೂ ಜೀವನ್ಮುಖಿ. ಅದೊಂದು ಶುದ್ಧ ಮತ್ತು ಮುಗ್ಧ ಚೈತನ್ಯವಾಗಿರುವ ಕಾರಣದಿಂದ ಅದರ ಪಾಡಿಗೆ ಅದನ್ನು ಕ್ರಿಯಾಶೀಲವಾಗಿರಲು ಬಿಟ್ಟರೆ, ಅದು ಸದಾ ಜೀವನ್ಮುಖಿಯಾಗಿಯೇ ಇದ್ದು, ಸಕಾರಾತ್ಮಕವಾಗಿಯೇ ಜಗತ್ತಿನ ಜೊತೆ ಸಂವಹನ ನಡೆಸುವುದಲ್ಲದೇ, ಜಗತ್ತಿನ ಸಕಾರಾತ್ಮಕ ತರಂಗಗಳಿಗೆ ಸ್ಪಂದಿಸುತ್ತದೆ.


ಈ ಸುಪ್ತ ಚೈತನ್ಯದ ಪ್ರಕಟಣಾ ಶಕ್ತಿಯು ದ್ವಿಗುಣಗೊಳ್ಳುವ ಪರಿಯನ್ನು ಜೋಸೆಫ್ ಮರ್ಫಿಯು ಹೇಳುವುದೆಂತೆಂದರೆ, ಒಳಗಿರುವ ಶಕ್ತಿಯು ತರಂಗಗಳ ಮೂಲಕವಾಗಿ ಹೊಮ್ಮುತ್ತಾ ಹೊರಗೆಯೂ ಇರುವಂತಹ ಅದೇ ಬಗೆಯ ಶಕ್ತಿಯ ಜೊತೆಗೆ ತನ್ನ ಸಂಪರ್ಕವನ್ನು ಸಾಧಿಸುತ್ತದೆ. ಇದನ್ನೇ ಕೊಂಚ ಉಪನಿಷತ್ತಿನ ಭಾಷೆಯಲ್ಲಿ ಹೇಳುವುದಾದರೆ, ಘಟಾಕಾಶ ಮತ್ತು ಮಹಾಕಾಶಗಳ ಮಿಲನ. ಮಡಿಕೆಯೊಳಗಿನ ಖಾಲಿಯಾದ ಅವಕಾಶವಿದೆ ಹಾಗೆಯೇ ಮಡಿಕೆಯ ಹೊರಗಡೆಯೂ ಖಾಲಿಯಾದ ಅವಕಾಶವಿದೆ. ಎರಡೂ ಖಾಲಿಯಾಗಿರುವುದರಿಂದ ಒಂದಾಗುವುದು ಏನೂ ಕಷ್ಟವಲ್ಲ. ಆದರೆ ಅವುಗಳ ಮಧ್ಯೆ ಒಂದಾಗಲು ಸಾಧ್ಯವಿಲ್ಲದಂತೆ ಮಡಿಕೆಯ ಗೋಡೆಯು ಅಡ್ಡವಿದೆ. ಈ ಮಡಿಕೆಯ ಗೋಡೆಯು ಒಡೆದರೆ, ಮಡಿಕೆಯೊಳಗಿನ ಖಾಲಿಯೂ ಮತ್ತು ಮಡಿಕೆಯ ಹೊರಗಿನ ಖಾಲಿಯೂ ಒಂದಾಗುತ್ತದೆ. ಅದೇರೀತಿಯಲ್ಲಿ ಒಳಗಿನ ಸುಪ್ತ ಚೈತನ್ಯದ ಮನೋಶಕ್ತಿಯು ಜಗತ್ತಿನಲ್ಲಿ ವಿಪುಲವಾಗಿ, ವ್ಯಾಪಕವಾಗಿರುವ ಶಕ್ತಿಯ ಜೊತೆಗೆ ಮಿಲನವಾಗಲು ಇರುವ ಅಡೆತಡೆಗಳೆಂದರೆ ಅಥವಾ ಬ್ಲಾಕೇಜ್‌ಗಳೆಂದರೆ, ಜಾಗೃತ ಮನಸ್ಸಿನ ಆಲೋಚನೆಗಳು. ಈ ಆಲೋಚನೆಗಳು ಉಂಟುಮಾಡಿರುವ ಒಡ್ಡುಗಳಿಂದಾಗಿ ಶಕ್ತಿಗಳ ಸಮ್ಮಿಲನವಾಗದೇ ಹೋಗುತ್ತದೆ. ಒಂದು ವೇಳೆ ಜಾಗೃತ ಚೇತನದ ವಿಚಾರಗಳು ಪೂರಕವಾಗಿ ಕೆಲಸ ಮಾಡಿದರೆ ಅಥವಾ ತಟಸ್ಥವೋ, ವಿಶ್ರಾಂತವೋ ಆಗಿಹೋದ ಪಕ್ಷದಲ್ಲಿ ಈ ಒಳಗಿನ ಮತ್ತು ಹೊರಗಿನ ಎರಡೂ ಶಕ್ತಿಗಳು ಸಂವಹನಗೊಳ್ಳುತ್ತವೆ, ಸಂಪರ್ಕಕ್ಕೆ ಬರುತ್ತವೆ. ಸಮ್ಮಿಲಿತವಾಗಿ ಶಕ್ತಿಪೂರ್ಣವಾಗಿ, ನಮ್ಮ ಉದ್ದೇಶಿತ ಕಾರ್ಯವನ್ನು ನೆರವೇರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಶವಸಂಸ್ಕಾರದ ಸಮಯದಲ್ಲಿ ಒಡೆಯುವ ಮಡಿಕೆಯ ಸಂಕೇತವು ಕೂಡ ಘಟಾಕಾಶವು ಮಹಾಕಾಶವನ್ನು ಸೇರುವ ಸೂಚನೆಯೇ ಆಗಿದೆ. ಆದರೆ ಇಲ್ಲಿ, ಮಡಿಕೆಯೊಳಗಿನ ಅವಕಾಶವು ಜೀವಾತ್ಮವೆಂದೂ, ಮಡಿಕೆಯ ಹೊರಗಿನ ಅವಕಾಶವು ಪರಮಾತ್ಮನೆಂದೂ, ಮಡಿಕೆಯು ದೇಹವೆಂದೂ, ಅದರಿಂದ ಸುರಿಯುವ ಜಲವು ಜೀವ (ಜೀವನ?) ವೆಂದೂ ಸಂಕೇತಿಸಲಾಗುತ್ತದೆ.

ಒಟ್ಟಿನಲ್ಲಿ, ಸುಪ್ತಚೈತನ್ಯವನ್ನು ಲಲಿತೆಯ ಪ್ರತಿಮಾರೂಪದಲ್ಲಿ ನೋಡಲು ಸಾಧ್ಯವಿದೆ. ತಾರ್ಕಿಕವಾಗಿಯೇ ವ್ಯಾಖ್ಯಾನಕ್ಕೆ ದೊರಕುತ್ತದೆ ಎಂದಾಯಿತು. ಇದೇ ಜೋಸೆಫ್ ಮರ್ಫಿಯ ಪ್ರಕಾರ ಲಲಿತೆಯೆಂದು ಕರೆಯಿಸಿಕೊಳ್ಳುವ ಶಕ್ತಿಯನ್ನು ಸಾಧಿಸುವುದು ಹೇಗೆ ಎಂದು ಮುಂದಿನ ಸಂಚಿಕೆಯಲ್ಲಿ ನೋಡೋಣ.

ಗುಜರಾತ್ ಮಾದರಿ ಅಂದರೆ ಇದೇನಾ?

ಬೂಸಿ ಬಸ್ಯ... ಮೋದಿ! 24



ಮೋದಿ ಹೇಳದೇ ಇದ್ದ ಸತ್ಯಗಳು

ಇತ್ತೀಚೆಗೆ ಕೆಲವು ಟಿವಿ ಚಾನಲ್‌ಗಳು ನರೇಂದ್ರ ಮೋದಿ ಜೊತೆ ಸಂದರ್ಶನ ನಡೆಸಿದವು. ಆದರೆ ಆ ಆಂಕರ್‌ಗಳ ಪೈಕಿ ಯಾರೊಬ್ಬನೂ ಮೋದಿಯ ಉತ್ತರಗಳನ್ನು ಪ್ರಶ್ನಿಸಿ ಸುಳ್ಳುಗಳನ್ನು ಬಯಲಿಗೆಳೆಯಲು ಹೋಗಲಿಲ್ಲ! ಆಘಾತಿಯ ಸಂಗತಿಯೆಂದರೆ ಇವರಲ್ಲಿ ಹೆಚ್ಚಿನವರು 2002ರ ನರಮೇಧವನ್ನು ಕಣ್ಣಾರೆ ಕಂಡವರು!! ಆದುದರಿಂದ 2002ರ ಆ ಭೀಕರ ನರಮೇಧವನ್ನು ಮರೆತಿರುವವರಿಗೋಸ್ಕರ, ಮೋದಿಯ ಪ್ರಚಾರಯಂತ್ರ ಹರಿಯಬಿಟ್ಟಿರುವ ಅಸತ್ಯಗಳನ್ನು ಕಣ್ಮುಚ್ಚಿಕೊಂಡು ನಂಬುವವರಿಗೋಸ್ಕರ ಇಂತಹ 9 ಸುಳ್ಳುಗಳನ್ನು ಬಯಲಿಗೆಳೆದಿದ್ದಾರೆ ಶೆಹಜಾದ್ ಪೂನಾವಾಲಾ (ಡಿಎನ್‌ಎ, ಏಪ್ರಿಲ್ 29, 2014).

ಸುಳ್ಳು 1: ನರೇಂದ್ರ ಮೋದಿ ನೇತೃತ್ವದ ಗುಜರಾತ್ ಸರ್ಕಾರ ಗೋಧ್ರೋತ್ತರ ಗಲಭೆಗಳನ್ನು 2-3 ದಿನಗಳಲ್ಲಿ ಹತೋಟಿಗೆ ತಂದಿತ್ತು.

ಸತ್ಯ: 'ಗಲಭೆಗಳು ಎರಡು ತಿಂಗಳಿಗೂ ಅಧಿಕ ಕಾಲ ಮುಂದುವರಿದಿತ್ತಲ್ಲದೆ ಸಾವುನೋವುಗಳ ಸಂಖ್ಯೆ ಕೂಡಾ ಹೆಚ್ಚುತ್ತಾ ಹೋಗಿತ್ತು' (ದಿವಂಗತ ನ್ಯಾ|| ಜೆ.ಎಸ್. ವರ್ಮಾ ನೇತೃತ್ವದ ರಾಷ್ಟ್ರೀಯ ಮಾನವಹಕ್ಕು ಆಯೋಗದ ಅಂತಿಮ ವರದಿ).

ಸುಳ್ಳು 2: ಗುಜರಾತ್ ಪೊಲೀಸರು ದಂಗೆಕೋರರನ್ನು ಬಂಧಿಸುವ ವಿಚಾರದಲ್ಲಿ ಪಕ್ಷಪಾತರಹಿತವಾಗಿ ಕಾರ್ಯಾಚರಿಸಿದರು.

ಸತ್ಯ: ನರೋದಾ ಪಾಟಿಯಾ ಪ್ರಕರಣದಲ್ಲಿ ಸಾಕ್ಷಿ ನಂಬರ್ 219 ಕೊಟ್ಟಿರುವ ಹೇಳಿಕೆಯ ಪ್ರಕಾರ 'ಪೊಲೀಸರ ಸಮ್ಮುಖದಲ್ಲೇ ಮುಸ್ಲಿಮರ ಮನೆಗಳನ್ನು ಸುಟ್ಟುಹಾಕುತ್ತಿದ್ದುದನ್ನು ಕಂಡು ದೂರು ಕೊಡಲು ಮುಂದಾದಾಗ ಅವರು "ಹೋಗಿ ಒಳಗೆ. ಮುಸ್ಲಿಮರ ಪಾಲಿಗಿದು ಪ್ರಳಯಕಾಲ" ಎಂದರು.' ಮೋದಿ ಸಚಿವಸಂಪುಟದ ಸದಸ್ಯೆಯಾಗಿದ್ದ ಮಾಯಾ ಕೊಡ್ನಾನಿ ಮತ್ತಿತರ ಮಂದಿಗೆ ಜೀವಾವಧಿ ಶಿಕ್ಷೆಯಾಗಿರುವುದು ಇದೇ ಪ್ರಕರಣದಲ್ಲಿ.

ಸುಳ್ಳು 3: ಗುಜರಾತ್ ಸರ್ಕಾರ ಯಾವುದೇ ಷಡ್ಯಂತ್ರ ನಡೆಸಿಲ್ಲ. 2002ರ ಗಲಭೆಗಳು ಸಂಭವಿಸಿದ್ದು ತಕ್ಷಣದ ಪ್ರತಿಕ್ರಿಯೆಯಾಗಿ.


ಸತ್ಯ: ಹತ್ಯಾಕಾಂಡದ ಮೊದಲ ದಿನ ಪೊಲೀಸ್ ನಿಯಂತ್ರಣ ಕೊಠಡಿಯಲ್ಲಿ ಠಿಕಾಣಿ ಹೂಡಿದ್ದ ರಾಜ್ಯದ ಪ್ರಮುಖ ಸಚಿವರೊಬ್ಬರು ಮುಸ್ಲಿಮರನ್ನು ಅಪಾಯದಿಂದ ಪಾರು ಮಾಡಬೇಡಿರೆಂದು ಸೂಚನೆ ನೀಡುತ್ತಿದ್ದರು. ಮತದಾರ ಪಟ್ಟಿಗಳ ಮೂಲಕ ಮುಸ್ಲಿಮರ ವಾಸಸ್ಥಳಗಳನ್ನು ಗುರುತಿಸಿ ಟಾರ್ಗೆಟ್ ಮಾಡಲಾಯಿತು. (ಹ್ಯೂಮನ್ ರೈಟ್ಸ್ ವಾಚ್, ಏಪ್ರಿಲ್ 2002, Đtr. 14, No. 3(ಅ))

ಸುಳ್ಳು 4: ಮೋದಿ ಸರ್ಕಾರ ಆರೋಪಿಗಳ ವಿಚಾರಣೆ ನ್ಯಾಯಯುತವಾಗಿರುವಂತೆ ನೋಡಿಕೊಂಡ ಕಾರಣಕ್ಕೇ ಮಾಯಾ ಕೊಡ್ನಾನಿಯಂಥವರಿಗೆ ಶಿಕ್ಷೆಯಾಗಿದೆ.

ಸತ್ಯ: ಜಾಹಿರಾ ಶೇಕ್ ಪ್ರಕರಣದಲ್ಲಿ ಸುಪ್ರೀಂಕೋರ್ಟಿನ ಟಿಪ್ಪಣಿಗಳನ್ನು ಗಮನಿಸಿ.

'ಬೆಸ್ಟ್ ಬೇಕರಿ, ಮುಗ್ಧ ಮಕ್ಕಳು, ಅಸಹಾಯಕ ಹೆಣ್ಮಕ್ಕಳೆಲ್ಲ ಬೆಂಕಿಯಲ್ಲಿ ಸುಟ್ಟು ಹೋಗುತ್ತಿದ್ದಾಗ ಆಧುನಿಕ 'ನೀರೊ'ಗಳ ಗಮನ ಬಹುಶಃ ಬೇರೆತ್ತಲೋ ಇದ್ದಿರಬೇಕು. ಪ್ರಾಯಶಃ ಅವರು ಅಪರಾಧಿಗಳನ್ನು ಬಚಾಯಿಸುವುದು ಅಥವಾ ರಕ್ಷಿಸುವುದು ಹೇಗೆಂದು ಯೋಚಿಸುತ್ತಿದ್ದಿರಬೇಕು.'

'ಈ ಸ್ವೇಚ್ಛಾಚಾರಿಗಳ ಕೈಲಿ ಕಾನೂನು ಮತ್ತು ನ್ಯಾಯಗಳು ನೊಣಗಳಂತಾಗಿವೆ. ಬೇಲಿಯೇ ಎದ್ದು ಹೊಲವನ್ನು ಮೇಯಲಾರಂಭಿಸಿದಾಗ ಕಾನೂನು ಸುವ್ಯವಸ್ಥೆ ಅಥವಾ ಸತ್ಯ, ನ್ಯಾಯಗಳ ಉಳಿವಿಗೆ ಆಸ್ಪದವೇ ಇಲ್ಲ.....'



'ಆರೋಪಿಯು ಅಸಮರ್ಥನೀಯ ವಿಧಾನಗಳ ಮೂಲಕ ಕಾನೂನುಕ್ರಮಕ್ಕೆ ಅಡ್ಡಿ ಉಂಟುಮಾಡುತ್ತಿದ್ದಾರೆಂದು ಮೇಲೆ ಹೇಳಲಾಗಿರುವ ವಾಸ್ತವಾಂಶಗಳಿಂದ ತೋರಿಬರುತ್ತದೆ. ಸಹಾಯಕ ಪ್ರಾಸಿಕ್ಯೂಟರ್ (ರಘುವೀರ್ ಪಾಂಡ್ಯ, ಆಗ ಬಿಜೆಪಿಯ ಸಕ್ರಿಯ ಸದಸ್ಯರು. 1996ರ ನಗರಪಾಲಿಕಾ ಚುನಾವಣೆಗಳಲ್ಲಿ ಬಿಜೆಪಿ ವತಿಯಿಂದ ಸ್ಪರ್ಧಿಸಿದ್ದವರು) ಮತ್ತು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರು ಒಂದಲ್ಲ ಒಂದು ವಿಧದಲ್ಲಿ ತಮ್ಮ ಕರ್ತವ್ಯಪಾಲನೆಯಲ್ಲಿ ಆಸಕ್ತಿಯನ್ನೇ ತೋರಿಸಿಲ್ಲ'. (**Zahira Habibulla H Sheikh And Anr vs State Of Gujarat And Ors on 12 April, 2004 CASE NO.: Appeal (crl.) 446-449 of 2004)**

ಸುಳ್ಳು 5: ನರೇಂದ್ರ ಮೋದಿ ಗೋಧ್ರೋತ್ತರ ಗಲಭೆಗಳನ್ನು ಯಾವತ್ತೂ ಸಮರ್ಥಿಸಿಲ್ಲ.

ಸತ್ಯ: ಕ್ರಿಯೆ ಪ್ರತಿಕ್ರಿಯೆ ಕುರಿತು ಮೋದಿ ಹೇಳಿದ ಮಾತುಗಳನ್ನು ಜೀ ಟಿವಿ ದಾಖಲಿಸಿತ್ತು. ಆ ದಾಖಲೆಗಳು ಈಗಲೂ ಲಭ್ಯವಿವೆ. (ಎಡಿಟರ್ಸ್ ಗಿಲ್ಡ್‌ನ ಸತ್ಯಶೋಧನಾ ವರದಿ 2002)

ಸುಳ್ಳು 6: ಮೋದಿಯ ಭಾಷಣಗಳಲ್ಲಿ ಕೇವಲ ಅಭಿವೃದ್ಧಿಯ ಮಾತುಗಳಿರುತ್ತವೆ. 2002ರ ನರಮೇಧದ ನಂತರವೂ ಆತ ಕೋಮು ದ್ವೇಷದ ಭಾಷಣ ಮಾಡಿಲ್ಲ.

ಸತ್ಯ: 2002ರ ಸೆಪ್ಟೆಂಬರ್ 30ರಂದು ಸಾರ್ವಜನಿಕ ಭಾಷಣ ಮಾಡಿದ್ದ ಮೋದಿ 'ಚುನಾವಣಾ ಆಯೋಗದ ಜೇಮ್ಸ್ ಮೈಕಲ್ ಲಿಂಗ್ಡೊರ ಧರ್ಮವನ್ನು ಅವಹೇಳನ ಮಾಡಿದ್ದ. ಮತ್ತೊಂದು ಕಡೆ ನಿರಾಶ್ರಿತರ ಶಿಬಿರಗಳು 'ಮಕ್ಕಳನ್ನು ಉತ್ಪಾದಿಸುವ ಕಾರ್ಖಾನೆಗಳು' ಎಂದಿದ್ದ.

ಸುಳ್ಳು 7: ಮೋದಿ ಎಂದೂ ಅಮೆರಿಕಾ ವೀಸಾ ಕೋರಿ ಅರ್ಜಿ ಸಲ್ಲಿಸಿಲ್ಲ.

ಸತ್ಯ: ಮೋದಿ ಅರ್ಜಿ ಹಾಕಿದ್ದ ಮತ್ತು ಆ ಅರ್ಜಿಯನ್ನು ಮಾರ್ಚ್ 18, 2005ರಂದು ತಿರಸ್ಕರಿಸಲಾಯಿತು. ಅಮೆರಿಕಾದ ನಿಯಮಗಳ ಪ್ರಕಾರ "ಜನರ ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳ ತೀವ್ರ ಉಲ್ಲಂಘನೆಗೆ ಹೊಣೆಗಾರನಾದ ಅಥವಾ ಅದರಲ್ಲಿ ನೇರವಾಗಿ ಪಾಲ್ಗೊಂಡ ಯಾವನೇ ವಿದೇಶಿ ಸರ್ಕಾರಿ ಅಧಿಕಾರಿಗೆ" ವೀಸಾ ನಿರಾಕರಿಸಲಾಗುತ್ತದೆ. 'ನರೇಂದ್ರ ಮೋದಿ 2002ರ ಫೆಬ್ರವರಿ ಮತ್ತು ಮೇ ನಡುವೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ. ಆದುದರಿಂದ ಆ ಅವಧಿಯಲ್ಲಿ ಸರ್ಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಆತನೇ ಹೊಣೆಗಾರನೆಂದು ಅಮೆರಿಕಾದ ಸ್ಟೇಟ್ ವಿಭಾಗ ಅಭಿಪ್ರಾಯಪಟ್ಟಿದೆ. ತನ್ನ ವರದಿಯಲ್ಲಿ ಅದು ಭಾರತದ ರಾಷ್ಟ್ರೀಯ ಮಾನವಹಕ್ಕು ಆಯೋಗದ ವರದಿಯನ್ನು ಉಲ್ಲೇಖ ಮಾಡಿದೆ: "ರಾಜ್ಯ ಸರ್ಕಾರ ತನ್ನ ಪ್ರಜೆಗಳ ಬದುಕು, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಯ ಹಕ್ಕುಗಳ ಸತತವಾದ ಉಲ್ಲಂಘನೆಯನ್ನು ನಿಯಂತ್ರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ". (2005ರ ಮಾರ್ಚ್ 21ರಂದು ಅಮೆರಿಕನ್ ರಾಯಭಾರಿ ಡೇವಿಡ್ ಮುಲ್‌ಫೋರ್ಡ್ ಕೊಟ್ಟಿರುವ ಹೇಳಿಕೆ).

ಸುಳ್ಳು 8: ವಾಜಪೇಯಿ ಮೋದಿಗೆ 'ರಾಜಧರ್ಮ' ಪಾಲಿಸುವಂತೆ ಹೇಳಿಲ್ಲ. 2002ರ ಹತ್ಯಾಕಾಂಡವನ್ನು ಟೀಕಿಸಿಲ್ಲ.


ಸತ್ಯ: ವಾಜಪೇಯಿ ಅಹಮದಾಬಾದ್‌ನ ಶಾ ಆ... ಶಿಬಿರದಲ್ಲಿ ಭಾವಾವೇಶದಿಂದ ಮಾತನಾಡಿದ್ದರು. ಗೋ... ಘಟನೆ "ಖಂಡನೀಯ"; ಆದರೆ ಅದರ ನಂತರ... ಘಟನೆಗಳು "ಮತಿಗೇಡಿ" ಕೃತ್ಯ ಎಂದಿದ್ದರು. ಮುಂದುವರಿ... "ಮತಿಕೆಟ್ಟ ಕಾರ್ಯಕ್ಕೆ ಅದೇ ವಿಧದ... ಪ್ರತಿಕ್ರಿಯಿಸುವುದಲ್ಲ..... ಪ್ರತಿಯೊಬ್ಬನ ಆಸ್ತಿಪಾಸ್ತಿ, ಜೀ... ಹಾಗೂ ಘನತೆಯನ್ನು ರಕ್ಷಿಸುವುದು ನಮ್ಮ ಸರ್ಕಾ... ಕರ್ತವ್ಯ... ಇಲ್ಲಿ ತಾರತಮ್ಯಕ್ಕೆ ಅವಕಾಶವಿಲ್ಲ" ಎಂ... ಹೇಳಿದ್ದರು. (ಏಪ್ರಿಲ್ 4, 2002ರ ಬಿಬಿಸಿ ವರದಿ)

ಸುಳ್ಳು 9: ಒಂದು ಕಾಲದಲ್ಲಿ ಮೋದಿಯ... ಟೀಕಿಸುತ್ತಿದ್ದ ಸ್ಮೃತಿ ಇರಾನಿಯಂಥವರು ಇವ... ಹೊಗಳುಭಟರಾಗಿರುವುದು ಅವಕಾಶವಾದವಲ್ಲ.

ಸತ್ಯ: ಅಂದು ದಿಲ್ಲಿಯ ಮುಸ್ಲಿಂ ಬಾಹುಳ್ಯ ಪ್ರದೇಶ... ಚಾಂದನಿ ಚೌಕ್‌ನಿಂದ ಸ್ಪರ್ಧಿಸಿದ್ದ ಸ್ಮೃತಿ ಇರಾ... ಚುನಾವಣೆಯಲ್ಲಿ ಪರಾಜಯಗೊಂಡಿದ್ದರು. ಆ ಸಂದರ್ಭ... ಆಕೆ ಚುನಾವಣೆಗಳಲ್ಲಿ ಬಿಜೆಪಿಯ ಕಳಪೆ ಸಾಧ... ಮೋದಿಯೇ ಕಾರಣವೆಂದು ದೂರಿದ್ದರು. "ಗುಜರಾ... ಹೆಸರೆತ್ತಿದ ಕೂಡಲೆ ಜನ 2002ರ ಹತ್ಯಾಕಾಂಡದ ... ಮಾತನಾಡುತ್ತಾರೆ. ನನಗೆ ಅಟಲ್‌ಜೀ ಮತ್ತು ಬಿ... ಬಗ್ಗೆ ಗೌರವವಿದೆ. ಆ ಗೌರವವನ್ನು ಉಳಿಸಿಕೊ... ಮೋದಿಯನ್ನು ಕಿತ್ತುಹಾಕಬೇಕೆಂದು ಉಪವಾಸ ಸತ್ಯಾ... ಹೂಡಲೂ ಹಿಂಜರಿಯೆನು." (ಡಿಸೆಂಬರ್ 12, 20... ಟೈಮ್ಸ್ ಆಫ್ ಇಂಡಿಯ ವರದಿ)

ಈಡಿಗರು ತಮ್ಮದು ಆರ್ಯ ಮೂಲ ಎಂದು ಹೆಮ್ಮೆ ಪಡುವುದು ತಪ್ಪ...

ಅನಾರ್ಯ ಈಡಿಗರ ಆರ್ಯನ್ ಮನಃಸ್ಥಿತಿಯ ಬಗ್ಗೆ ಪ್ರಕಾಶರಾಜ್ ಮೇಹು ಬರೆದ ವಿಷಯಗಳು ಇನ್ನೂ ಹಲವು ದಕ್ಷಿಣ ಭಾರತೀಯ ಜಾತಿ ಜನಾಂಗಗಳಿಗೆ ಅನ್ವಯವಾಗುತ್ತವೆ. ತಾವು ಆರ್ಯ ಮೂಲದವರು ಎಂದು ಹೇಳಿಕೊಳ್ಳುವುದರಲ್ಲಿ ಅನೇಕ ಮಧ್ಯಮ ಜಾತಿಯ ದಕ್ಷಿಣ ಭಾರತೀಯರು ಹೆಮ್ಮೆ ಪಡುತ್ತಾರೆ. ಯಾರೋ ಬಾಲಿವುಡ್ ನಟನೊಬ್ಬ ತನ್ನ ಮಗನಿಗೆ ಆರ್ಯನ್ ಎಂಬ ಹೆಸರಿಟ್ಟ ಎಂದು ಅನೇಕ ದಕ್ಷಿಣ ಭಾರತೀಯ ದ್ರಾವಿಡರೂ ತಮ್ಮ ಮಕ್ಕಳಿಗೆ 'ಆರ್ಯನ್' ಎಂದು ಹೆಸರಿಟ್ಟು ಕೃತಾರ್ಥರಾಗಿದ್ದಾರೆ. ಇದಕ್ಕಿಂತ ಹೆಚ್ಚಾಗಿ ಅನೇಕ ಜಾತಿಗಳವರು ತಮ್ಮ ಜಾತಿಯು ಕ್ಷತ್ರಿಯ ವರ್ಗದಲ್ಲಿ ಬರುತ್ತದೆ ಎಂದು ಹೇಳುತ್ತಾ ತಮ್ಮ ಜಾತಿಯ ಹೆಸರಿನ ಕೊನೆಗೆ ಕ್ಷತ್ರಿಯ ಎಂದು ಜೋಡಿಸಿ ಹೆಮ್ಮೆ ಪಡುತ್ತಾರೆ. ಬ್ರಿಟಿಷರು ಉತ್ತರ ಭಾರತದಲ್ಲಿ ಅನೇಕ ಹಿಂದೂ ಜನಾಂಗಗಳನ್ನು "ಮಾರ್ಷಿಯಲ್ ರೇಸ್" ಎಂದು ವರ್ಗೀಕರಿಸಿದರು. ಆದರೆ ದಕ್ಷಿಣ ಭಾರತದಲ್ಲಿ ಬ್ರಿಟಿಷರು ಯಾವ ಜನಾಂಗವನ್ನೂ ಮಾರ್ಷಿಯಲ್ ರೇಸ್ ಎಂದು ಕರೆಯಲಿಲ್ಲ. ಈ ಬಗ್ಗೆ ಆಗಿನ ಬ್ರಿಟಿಷ್ ವೈಸ್ರಾಯರನ್ನು ಒಬ್ಬ ಪತ್ರಕರ್ತ ಕೇಳಿದಾಗ ಅವರು ಹೇಳಿದ್ದೇನೆಂದರೆ "ಯೋಧ ಜನಾಂಗವೆಂದು ನಾವು ಹೆಸರಿಸಿದವರೆಲ್ಲಾ ಮೂಲತಃ ಹೆಚ್ಚು ಅಪರಾಧಿ ಮನೋವೃತ್ತಿ ಇರುವ ಜನಾಂಗಗಳು. ದಕ್ಷಿಣ ಭಾರತೀಯರು ದ್ರಾವಿಡ ಮೂಲದವರಾದುದರಿಂದ ಅವರಲ್ಲಿ ಅಪರಾಧಿ ಪ್ರವೃತ್ತಿ ಕಡಿಮೆ. ಆದರೆ ಉತ್ತರ ಭಾರತೀಯರು ಆರ್ಯನ್ ಮೂಲದವರಾದುದರಿಂದ ಅವರಲ್ಲಿ ಅಪರಾಧಿ ಪ್ರವೃತ್ತಿ ರಕ್ತಗತವಾಗಿ ಬಂದಿದೆ. ಅದಕ್ಕಾಗಿ ಈ ಕರಾಳಸತ್ಯವನ್ನು ನೇರವಾಗಿ ಹೇಳಿ ಇಡೀ ಜನಾಂಗದ ಮನ ನೋಯಿಸುವ ಬದಲು ಅವರನ್ನು ಯೋಧ ಜನಾಂಗ ಅರ್ಥಾತ್ ಕ್ಷತ್ರಿಯ ವರ್ಗ ಎಂದು ಕರೆದು ಅವರ ಸ್ವಪ್ರತಿಷ್ಠೆಗೆ ಸ್ವಲ್ಪ ಗಾಳಿ ಊದಿದ್ದೇವೆ ಅಷ್ಟೇ!"



ಹಾಗಾಗಿ ಆ ಬ್ರಿಟಿಷ್ ವೈಸ್ರಾಯ್ ಹೇಳಿದಂತೆ ತಮ್ಮದು ಆರ್ಯ ಮೂಲ ಅಥವಾ ಕ್ಷತ್ರಿಯ ಮೂಲ ಎಂದು ಹೆಮ್ಮೆ ಪಡುವುದು ತಾವು ಅಪರಾಧಿ ಮನೋವೃತ್ತಿಯುಳ್ಳ ಜನಾಂಗ ಎಂದು ಹೆಮ್ಮೆ ಪಡುವುದಕ್ಕೆ ಸಮ ಅಲ್ಲವೇ?

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ವನಿತಾ, ಚೇತನ ಪ್ರಕರಣ- ವೈದಿಕರ ಖೆಡ್ಡದಲ್ಲಿ ಬಂಟರು!?

ಕರಾವಳಿ ಜಿಲ್ಲೆ ಧಾರ್ಮಿಕ ಸೌಹಾರ್ದತೆಗೆ ಹೆಸರಾದಂತಹ ನಾಡು. ಇಲ್ಲಿ ನೆಲೆಸಿದ ಎಲ್ಲಾ ಮತಧರ್ಮ ಸಮುದಾಯಗಳು ಇಲ್ಲಿನ ಸಂಸ್ಕೃತಿಗೆ ಅದರದ್ದೇ ಆದಂತಹ ಕೊಡುಗೆಗಳನ್ನು ನೀಡುತ್ತಾ ಬಂದಿವೆ. ಅವುಗಳಲ್ಲಿ ಬಂಟರ ಕೊಡುಗೆಯೂ ಮಹತ್ವದ್ದು. ಆದರೀಗ ಈ ಸಮುದಾಯದ ಕೆಲ ನಾಯಕರು ಇಲ್ಲಿನದ್ದಲ್ಲದ ವೈದಿಕ ಸಂಸ್ಕೃತಿಯತ್ತ ಹೆಚ್ಚು ವಾಲುತ್ತಿರುವಂತೆ ಭಾಸವಾಗುತ್ತಿದ್ದು ಇದು ಮೂಲ ತುಳುವ ಸಂಸ್ಕೃತಿಗೆ ದೊಡ್ಡ ಹೊಡೆತ ಎನಿಸಿಕೊಳ್ಳುವ ಅಪಾಯವಿದೆ.


ಮೊನ್ನೆ ಉಡುಪಿಯಲ್ಲಿ ಸಿಪಿಎಂ ಪಕ್ಷ ಪಂಕ್ತಿಭೇದ, ಮಡೆಸ್ನಾನಗಳಂತಹ ಅಸಮಾನತೆಯನ್ನು ಸಾ... ಸಂಪ್ರದಾಯಗಳ ವಿರುದ್ಧ ಹಮ್ಮಿಕೊಂಡಿದ್ದ ಅನಿರ್ದಿಷ್ಟಾ... ಪ್ರತಿಭಟನೆಯಲ್ಲಿ ಹೋರಾಟಗಾರ್ತಿ ಅತ್ರಾಡಿ ಅ... ಶೆಟ್ಟಿಯವರು ಉಡುಪಿ ದೇಗುಲದಲ್ಲಿ ವ... ಶೆಟ್ಟಿಯವರನ್ನು ಜಾತಿಯ ನೆಪದಲ್ಲಿ ಊಟದ ... ಎಬ್ಬಿಸಿ ಅವಮಾನಿಸಿದ ಘಟನೆಯ ಬಗ್ಗೆ ಮಾತಾ... "ತುಳುವರದ್ದು ಮಠದ ಸಂಸ್ಕೃತಿಯಲ್ಲ ಮೂಲತಃ ದೈವ... ನಂಬಿ ಹಿರಿಯರು ಹೇಳಿದ ಸತ್ಯದ ಹಾದಿಯಲ್ಲಿ ಬ... ನಡೆಸುವ ವಿಶಿಷ್ಟ ಸಂಸ್ಕೃತಿ. ನಮಗೆ ದೈವ ಮು... ಹೊರತು ವೈದಿಕ ದೇವರಲ್ಲ" ಎಂದಿದ್ದಾರೆ. ಹಾಗೆ... ಪೇಜಾವರ ಶ್ರೀಗಳು ಮೊದಲು ತಮ್ಮ ವ... ಹತ್ತಿಕೊಂಡಿರುವ ಜಾತಿಯ ಕ್ಯಾನ್ಸರನ್ನು ಸಂಪೂರ್ಣ ನಿ... ಬಳಿಕ ದಲಿತ ಕೇರಿಯತ್ತ ಯಾತ್ರೆ ಹೊರಡಲಿ ... ಎಚ್ಚರಿಕೆಯ ಮಾತನ್ನಾಡಿದ್ದಾರೆ.



ಹೌದು, ದಲಿತರದ್ದು ಅನಾದಿಕಾಲದಿಂದ... ಸಾಮಾಜಿಕವಾಗಿ ಸೇವೆಗೆಂದೇ ಬಂಬಿತವಾದ ಸಮುದಾ... ವಾದರೆ, ಬಂಟ ಸಮುದಾಯದ್ದು ಅಂತಹ ದುಸ್ಥಿತಿ... ಹಾಗಿದ್ದೂ ಕೂಡ ವೈದಿಕರಿಂದ ಅದೂ ಉಪನ್ಯಾಸಕಿ... ಸಮಾಜದಲ್ಲಿ ಗೌರವದ ಸ್ಥಾನವುಳ್ಳ ಬಂಟ ಮಹಿಳೆಯೊ... ಜಾತಿ ನೆಪದಿಂದ ಅಪಮಾನಿತಳಾಗುತ್ತಾರೆಂದರೆ ಗಾಳಿ ... ದಿಕ್ಕಿಗೆ ಬೀಸುತ್ತಿದೆಯೆಂದೇ ಅರ್ಥವಾಗುತ್ತಿಲ್ಲ.

ಬಂಟರು ಸ್ವಾಭಿಮಾನ ಸಾಹಸಗಳಿಗೆ ಮಾದ... ದಂತವರು. ಇಂತವರೇ ವೈದಿಕ ಕಂದಾಚಾರ... ಬಲಿಯಾಗುತ್ತಿದ್ದರೆ (ಮರ್ಯಾದೆಯ ಕಾರಣಕ್ಕಾಗಿ ... ಸಂಗತಿಗಳು ಬೆಳಕಿಗೆ ಬಾರದಿರುವುದೇ ಹೆಚ್ಚು) ಉಳಿದ... ಪಾಡೇನು? ಇದಕ್ಕೂ ಹೆಚ್ಚಿನ ಸೋಜಿಗದ ಸಂಗತಿ...

ಅಪ್ಪು ಬೆನ್ ತಟ್ಟಿದ ದಿನ ಮರೆಯಲಾರೆ...



ಪುನೀತ್ ರಾಜಕುಮಾರ್ ಧ್ವನಿಯಲ್ಲಿ 'ಸವಾರಿ-2' ಚಿತ್ರದ 'ಮೋಟು ಬೀಡಿ ಹಚ್ಕೊಂಡು... ಲುಂಗಿ ಟೈಟು ಮಾಡ್ಕೊಂಡು... ನಾಲ್ಕು ಸ್ಟೆಪ್ ಹಾಕೋಣ ಹೊಂಟೈತೆ ಸವಾರಿ...' ಎಂದು ಶುರುವಾಗುವ ಹಾಡಿನ ಮೂಲಕ ಚಿತ್ರಸಾಹಿತಿಯಾಗುತ್ತಿರುವ ಯುವಕವಿ ಮಂಜುನಾಥ.ಎಂ.ದೊಡ್ಡಮನಿ ಇಲ್ಲಿ ಮಾತಾಡಿದ್ದಾರೆ.

ನೀವು ಮೂಲತಃ ಯಾವೂರಿನವರು? ನಿಮ್ಮ ತಂದೆ, ತಾಯಿ ಕುಟುಂಬದ ಹಿನ್ನೆಲೆ ಹಾಗೂ ನಿಮ್ಮ ಓದಿನ ಬಗ್ಗೆ ಹೇಳ್ತೀರಾ?


ನಾನು ದಾವಣಗೆರೆಯ ಹುಡುಗ, ನಾನು ಹುಟ್ಟಿ ಬೆಳೆದದ್ದೆಲ್ಲ ಅಲ್ಲೇ. ನನಗೆ ನನ್ನೂರು ಅಂದ್ರೆ ಸಿಕ್ಕಾಪಟ್ಟೆ ಇಷ್ಟ. ಅಪ್ಪ ದೊಡ್ಡಮನಿ ಮಹೇಶ್ವರಪ್ಪ ಅಮ್ಮ ಡಿ.ಜಯಮ್ಮ. ಅಕ್ಕ ಕಲ್ಪನ. ನನ್ನ ಇಂದಿನ ಎಲ್ಲಾ ಏಳಿಗೆಯ ರೂವಾರಿ. ಇನ್ನು ನನಗೊಬ್ಬ ತಮ್ಮ ಇದಾನೆ. ಅವನ ಹೆಸರು ದರ್ಶನ್.

ನಿಮಗೆ ಸಾಹಿತ್ಯದ ಬಗ್ಗೆ ಒಲವು ಮೂಡಿದ್ದು ಹೇಗೆ?

ನಿಜ ಹೇಳ್ತೀನಿ ಈಗ್ಲೂ ನನಗೆ ಸಾಹಿತ್ಯ ಅಂದರೇನು ಅಂತ ಸರಿಯಾಗಿ ಗೊತ್ತಿಲ್ಲ, ಸಾಹಿತ್ಯದತ್ತ ಒಲವು ಹೇಗೆ ಶುರುವಾಯ್ತು ಅಂತ ಹೇಳೋದು ಕಷ್ಟ. ಆದರೆ ನನ್ನ ಸ್ಕೂಲ್ ಲೈಫ್‌ನಲ್ಲೇ ಸಣ್ಣ ಸಣ್ಣ ಕವಿತೆಗಳನ್ನ ಬರೀತಾ ಇದ್ದೆ. ಆಗೆಲ್ಲ ನನ್ನ ಟೀಚರ್ಸ್ ಬೆನ್ ತಟ್ತಾ ಇದ್ರು. ತುಂಬಾ ಖುಷಿ ಆಗ್ತಾ ಇತ್ತು, ಹೆಚ್ಚು ಹೆಚ್ಚು ಭಾವಗೀತೆಗಳನ್ನ ಕೇಳ್ತಾ ಇದ್ದೆ. ಕೈಯಲ್ಲಿರೋ ಸ್ಕೂಲ್ ಸಿಲಬಸ್‌ಗಿಂತ ಸಿಕ್ಕಸಿಕ್ಕ ಬೇರೆ ಬೇರೆ ಸಾಹಿತ್ಯ ಪುಸ್ತಕಗಳನ್ನ ಹೆಚ್ಚು ಇಂಟರೆಸ್ಟ್‌ನಿಂದ ಓದುತ್ತಾ ಇದ್ದೆ. ಅಲ್ದೆ ಫೇಸ್‌ಬುಕ್‌ನಲ್ಲಿ ಮೊದಮೊದಲು ಚಿಕ್ಕದಾಗಿ ಸಾಲುಗಳನ್ನ ಬರೆದು ಪೋಸ್ಟ್ ಮಾಡ್ತಾ ಇದ್ದೆ. ಫ್ರೆಂಡ್ಸ್ ಎಲ್ಲಾ ಇಷ್ಟ ಪಟ್ಟು ಪ್ರೋತ್ಸಾಹಿಸಿದರು. ಅಷ್ಟು ಸಾಕಿತ್ತು ನನಗೆ ನಾನು ಒಬ್ಬ ಕವಿಯಾಗೋಕೆ. ಅಂದಿನಿಂದ ಇಂದಿನವರಿಗೂ ಕವಿತೆಗಳನ್ನ, ಕಥೆಗಳನ್ನ ಬರೀತ ಬಂದಿದೀನಿ. ತುಂಬಾ ಜನ ಇಷ್ಟ ಪಡ್ತಾರೆ. 'ಮಂಜು ಕರಗುವ ಮುನ್ನ' ಮತ್ತು 'ಖಾಲಿ ಪುಟದ ಕವನ' ಅನ್ನೋ ನನ್ನ ಎರಡು ಕವನ ಸಂಕಲನಗಳನ್ನು ಹೊರತಂದಿದೀನಿ.

ಚಿತ್ರ ಸಾಹಿತಿ ಆಗೋ ಕನಸು ಹೇಗೆ ಹುಟ್ಟಿತು?

ಅದೊಂದಿನ ಮನೇಲಿ ಎಲ್ಲಾ ರಾಜಕುಮಾರ್ ಅವರ ಹಾಡು ಕೇಳ್ತಾ ಇದ್ವಿ. ಯಾವ ಹಾಡು ಅಂತ ಅಷ್ಟು ಸರಿಯಾಗಿ ನನಗೆ ನೆನಪಿಲ್ಲ, ಸಡನ್ ಆಗಿ ಅಮ್ಮ ನೀನು ಈ ಥರ ಹಾಡು ಬರಿ, ಎಲ್ಲರೂ ಕೇಳೋಥರ ಅಂತ ಹೇಳಿದ್ರು. ಅವತ್ತೇ ಅನ್ಕೊಂಡೆ ನಾನು ಫಿಲ್ಮ್‌ಗೆ ಹಾಡು ಬರೀಬೇಕು ಅಂತ. ನಂಗೆ ಇಷ್ಟ ಆಗೋ ಹಾಡುಗಳನ್ನ ಕೇಳ್ತಾ ಕೇಳ್ತಾ ಅದೇ ಧಾಟಿಯಲ್ಲಿ ಸಾಹಿತ್ಯ ಬರೆಯೋದನ್ನ ಅಭ್ಯಾಸ ಮಾಡ್ತಾ ಹೋದೆ. ಆ ಥರ ಬರೆದ ಸಾಹಿತ್ಯವನ್ನ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡ್ತಾ ಬಂದೆ. ಇದನ್ನೆಲ್ಲ ಗಮನಿಸುತ್ತ ಇದ್ದ ಡಾ.ನಾಗೇಂದ್ರ ಪ್ರಸಾದ್ ಅವರು ಒಮ್ಮೆ ಅವರೇ ಕಾಲ್ ಮಾಡಿ ರಿಯಾಲಿಟಿ ಶೋನಲ್ಲಿ ಭಾಗವಹಿಸೋಕೆ ಅವಕಾಶ ಮಾಡಿಕೊಟ್ರು. ಹೀಗಾಗಿ ಚಿತ್ರ ಸಾಹಿತಿ ಆಗೋ ಕನಸು ಮತ್ತಷ್ಟು ಗಟ್ಟಿಯಾಗಿ ನನ್ನಲ್ಲಿ ಬೇರೂರಿತು ಅನ್ನಬಹುದು. ಒಂದೇ ಮಾತಲ್ಲಿ ಹೇಳೋದಾದ್ರೆ ನನ್ನ ತಾಯೀನೆ ನನ್ನಲ್ಲಿ ಈ ಕನಸು ಹುಟ್ಟುಹಾಕಿದ್ದು...



ನೀವು ಬರೆದ ಮೊದಲ ಚಿತ್ರ ಗೀತೆ ಯಾವುದು?

'ಸವಾರಿ-2' ಚಿತ್ರದ ಪೀಪಿ ಸಾಂಗ್ ಅಂತ ಸೌಂಡ್ ಎಬ್ಬಿಸ್ತಾ ಇರೋ 'ಮೋಟು ಬೀಡಿ ಹಚ್ಕೊಂಡು, ಲುಂಗಿ ಟೈಟು ಮಾಡ್ಕೊಂಡು ನಾಲ್ಕು ಸ್ಟೆಪ್ ಹಾಕೋಣ ಹೊಂಟೈತೆ ಸವಾರಿ' ಅನ್ನೋ ಹಾಡು ನನ್ನ ಮೊದಲ ಚಿತ್ರಗೀತೆ ಅಂತ ಹೆಮ್ಮೆಯಿಂದ ಹೇಳಿಕೊಳ್ತೀನಿ. ಮೊದಲನೇ ಹಾಡು ಅನ್ನೋದಕ್ಕಿಂತ ಹೆಚ್ಚು ಖುಷಿ ಕೊಟ್ಟಿದ್ದು ಈ ಹಾಡನ್ನ ಪುನೀತ್ ರಾಜ್ಕುಮಾರ್ ಅವರು ಹಾಡಿರೋದು. ಹಲವು ವರ್ಷಗಳಿಂದ ಚಿತ್ರ ಸಾಹಿತಿ ಆಗ್ಬೇಕು ಅಂತ ಕಾಯ್ತಾ ಇದ್ದೇ ಹೊಟತು ನಾ ಬರೆಯೋ ಹಾಡು ಇಂಥವರೇ ಹಾಡ್ತಾರೆ ಅನ್ನೋ ಯಾವ ಯೋಚ್ನೆನೂ ಕನಸಲ್ಲೂ ಕಂಡಿರಲಿಲ್ಲ. ಅಂತದ್ರಲ್ಲಿ 'ಸವಾರಿ-2' ಚಿತ್ರದ ನಿರ್ದೇಶಕ ಜೇಕಬ್ ವರ್ಗಿಸ್ ಹಾಗೂ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಅವರು ತಮ್ಮ ಚಿತ್ರಕ್ಕೆ ಅವಕಾಶ ಮಾಡಿ ಕೊಡೋದಲ್ದೆ ಯೂಥ್ ಐಕಾನ್ ಪುನೀತ್ ಅವರಿಂದ ಹಾಡಿಸಿದ್ದು ನನ್ನ ಹಲವು ವರ್ಷಗಳ ಪರಿಶ್ರಮಕ್ಕೆ ಸಿಕ್ಕ ಭಾಗ್ಯ ಅನ್ಕೊಳ್ತೀನಿ. ಅಲ್ದೆ ಈ ಮೂಲಕ ಮಣಿಕಾಂತ್ ಕದ್ರಿ ಅವರಿಗೆ ಥ್ಯಾಂಕ್ಸ್ ಹೇಳೋಕೆ ಇಷ್ಟ ಪಡ್ತೀನಿ.

ನಿಮ್ಮ ಮೊದಲ ಗೀತೆಯನ್ನೇ ಪುನೀತ್ ರಾಜಕುಮಾರ್ ಅವರು ಹಾಡಿದ್ದಾರೆ. ಆ ಹಾಡನ್ನು ಅವರು ಹಾಡುವಾಗಿನ ಕ್ಷಣಗಳ ಅನುಭವ ಹೇಗಿತ್ತು ನಿಮಗೆ?

ಅದೊಂದು ವಂಡರ್‌ಫುಲ್ ಅನುಭವ ಸರ್. ಆ ಕ್ಷಣಗಳನ್ನು ಯಾವತ್ತೂ ಮರೆಯಲಾರೆ. ಅವತ್ತೊಂದಿನ ಮಣಿಕಾಂತ್ ಸರ್ ಕಾಲ್ ಮಾಡಿ ಸಾಂಗ್ ರೆಕಾರ್ಡಿಂಗ್ ಇದೆ ಬನ್ನಿ ಅಂತ ಹೇಳಿದ್ರು. ನಾನು ಸ್ಟುಡಿಯೋಗೆ ಹೋಗಿದ್ದೆ. ನನ್ನ ಸಾಹಿತ್ಯಕ್ಕೆ ಪುನೀತ್ ಅವರು ದನಿಯಾಗ್ತಾರೆ ಅಂತ ಗೊತ್ತಿತ್ತು. ಆದ್ರೆ, ಆ ದಿನ ಅವತ್ತೇ ಅನ್ನೋದು ಗೊತ್ತಿರ್ಲಿಲ್ಲ. ಇದೆಲ್ಲ ನಂಗೆ ಫಸ್ಟ್ ಟೈಮ್ ಅಲ್ವ ಸರ್ ಸ್ವಲ್ಪ ಭಯದ ಜೊತೆ ಒಳಗೊಳ್ಗೆ ಖುಷಿ ಇತ್ತು, ಸಕತ್ ನರ್ವಸ್ ಆಗಿ ಬಿಟ್ಟಿದ್ದೆ. ರಾಘಣ್ಣ ಜೊತೆ ಪುನೀತ್ ಸರ್ ಬಂದ್ರು . ಕೈ ಕುಲ್ಕಿ ಬೆನ್ ತಟ್ಟಿ ಅಪ್ಪು ಅಪ್ಕೊಂಡ್ರು, ಆ ಫೀಲೆ ಬೇರೆ ಬಿಡಿ... ಹೇಳೋಕ್ ಆಗೋಲ್ಲ. ಲಿರಿಕ್ಸ್ ಬಗ್ಗೆ ರಾಘಣ್ಣ ಸಹ ಮೆಚ್ಚುಗೆ ಮಾತುಗಳನ್ನ ಆಡಿದರು. ರೆಕಾರ್ಡಿಂಗ್ ಎಲ್ಲ ಮುಗಿದ ಮೇಲೆ ಪುನೀತ್ ಸರ್ 'ನೀವು ಬೆಳಿಬೇಕು. ಇನ್ನೂ ನಿಮ್ಮಿಂದ ಹೆಚ್ಚು ಸಾಹಿತ್ಯವನ್ನ ಎಕ್ಸ್‌ಪೆಕ್ಟ್ ಮಾಡ್ತೀನಿ. ಒಳ್ಳೆದಾಗ್ಲಿ' ಅಂದ್ರು. ನನ್ನ ಕಣ್ಣುಗಳು ಹನಿಗೂಡಿದ್ವು. ಮತ್ತೊಮ್ಮೆ ಅಪ್ಪು ಅಪ್ಕೊಂಡ್ರು. ಬಿಡಿ ಅವೊಂದು ದಿನದ ಬಗ್ಗೆ ಎಷ್ಟು ಹೇಳಿದ್ರು ಕಡಿಮೆ ಅನಿಸುತ್ತೆ.

ಚಿತ್ರ ಸಾಹಿತಿಗೆ ಅಧ್ಯಯನಶೀಲ ಗುಣ ಇರಬೇಕಾಗುತ್ತೆ. ನೀವು ಯಾವ ಯಾವ ಸಾಹಿತಿಗಳ ಕೃತಿಗಳನ್ನು ಓದಿಕೊಂಡಿದ್ದಿರಾ?

ಹೌದು, ಅದು ತುಂಬಾ ಅವಶ್ಯಕ. 'ಒಳ್ಳೆ ಬರಹಗಾರ ಆಗೋಕು ಮುಂಚೆ ಒಳ್ಳೆ ಓದುಗ ಆಗಿರಬೇಕು' ಅನ್ನೋದು ನನ್ನ ನಂಬಿಕೆ. ಮೊದ್ಲೇ ಹೇಳಿದೀನಿ ಸಿಕ್ಕ ಸಿಕ್ಕ ಪುಸ್ತಕನೆಲ್ಲಾ ಓದುತ್ತ ಇರ್ತೀನಿ. ಪುಸ್ತಕಗಳೇ ನನಗೆ ಗುಡ್ ಫ್ರೆಂಡ್ಸ್. ನಾನು ಕುವೆಂಪು, ಎಸ್.ಎಲ್.ಬೈರಪ್ಪ ಮತ್ತು ತೇಜಸ್ವಿ ಅವರ ಪುಸ್ತಕಗಳನ್ನ ಹೆಚ್ಚು ಓದುತೀನಿ. ಜೊತೆಗೆ ಕೆ.ಎಸ್.ನರಸಿಂಹಸ್ವಾಮಿ ಹಾಗು ಡಾ.ದೊಡ್ಡರಂಗೇಗೌಡ ಅವರ ಕವನ ಸಂಕಲನಗಳು ನನ್ನ ಕಲೆಕ್ಷನ್‌ನಲ್ಲಿವೆ. ಇನ್ನು ಹೊಸ ಬರಹಗಾರರ ಪುಸ್ತಕಗಳನ್ನು, ಆರ್ಟಿಕಲ್‌ಗಳನ್ನ ಹೆಚ್ಚು ಓದುತ್ತೀನಿ.

ಸಂದರ್ಶನ

ಇವತ್ತಿನ ದಿನಮಾನದಲ್ಲಿ ಚಿತ್ರ ಸಾಹಿತ್ಯ ಎಲ್ಲೋ ಒಂದು ಕಡೆ ತನ್ನ ಗುಣಮಟ್ಟವನ್ನು ಕಳೆದುಕೊಳ್ಳುತ್ತಾ ಇದೆ ಅನ್ನೋ ಆತಂಕ ಇದೆ. ಇಂತಹ ಸಂದರ್ಭದಲ್ಲಿ ನೀವು ಯಾವ ರೀತಿ ಸಾಹಿತ್ಯ ಬರೆಯಲು ಇಚ್ಛಿಸುತ್ತಿರಿ?

ಇಲ್ಲ ಅಂತ ಆತಂಕ ನನಗಿಲ್ಲ, ಯಾಕಂದ್ರೆ ಎಲ್ಲದಕ್ಕೂ ಅದಕ್ಕೆ ತಕ್ಕನಾದ ಗುಣಮಟ್ಟ ಅನ್ನೋದು ಇದ್ದೆ ಇರುತ್ತೆ. ಕಾಲಕ್ಕೆ ತಕ್ಕಂತೆ ಸಾಹಿತ್ಯ ಬದಲಾಗೋದ್ರಲ್ಲಿ ಯಾವ ತಪ್ಪಿಲ್ಲ. ಚಿತ್ರದ ಹೀರೋ ಒಬ್ಬ ರೌಡಿ ಆಗಿದ್ರೆ ಅಥವಾ ಪೋರ್ಕಿ ಆಗಿದ್ರೆ ಸಾಹಿತ್ಯವನ್ನು ಆ ಪಾತ್ರದ ಭಾಷೆಯಲ್ಲೇ ಬರಿಬೇಕಾಗಿರುತ್ತೆ; ಅದೂ ಅಲ್ದೆ ಇಲ್ಲಿ ಸಾಹಿತಿಗೆ ಸ್ವತಂತ್ರ ಕಡಿಮೇನೆ. ನಿರ್ದೇಶಕನ ದೃಷ್ಟಿಯಲ್ಲಿ ಏನಿರುತ್ತೋ ಅದನ್ನೇ ನಾವು ಬರಿಬೇಕಾಗುತ್ತೆ, ಯೋಗ್‌ರಾಜ್ ಭಟ್ ಅವರ ತರಹ ಟ್ರೆಂಡ್‌ಗೆ ತಕ್ಕಂತೆ ಸಾಹಿತ್ಯ ಕೊಡೋದು ನನಗಿಷ್ಟ ಆಗುತ್ತೆ. ಈಗ ನಾನು ಟಪ್ಪಾಂಗುಚ್ಚಿ ಸಾಹಿತ್ಯ ಬರ್‌ದಿದೀನಿ. ಮುಂದೆ ಎಲ್ಲಾ ಥರದ ಸಾಹಿತ್ಯ ಬರೀಬೇಕು ಅನ್ಕೊಂಡಿದಿನಿ.

ನಿಮ್ಮ ಮುಂದಿನ ಯೋಜನೆಗಳು?

ಚಿತ್ರರಂಗದಲ್ಲೇ ಸಂಪೂರ್ಣವಾಗಿ ನನ್ನನ್ನು ನಾನು ತೊಡಗಿಸಿಕೊಳ್ಳೇಕು ಅಂತ ಇದೀನಿ. ಅಂತಹ ಅವಕಾಶಕ್ಕೆ ಕಾಯ್ತಾ ಇದೀನಿ. ಅಲ್ದೆ ಕೆಲವು ಚಿತ್ರಕಥೆಗಳನ್ನ ಬರ್ದಿದೀನಿ. ಆಕ್ಟಿಂಗ್‌ನಲ್ಲಿ ತುಂಬಾ ಇಂಟರೆಸ್ಟ್ ಇದೆ. ಎಲ್ಲದಕ್ಕೂ ಟೈಮ್ ಬರಬೇಕು. ಮ್ಯೂಸಿಕ್ ಕ್ಷೇತ್ರದಲ್ಲೂ ಏನಾದ್ರು ಮಾಡೋ ಆಸೆ. ಸಂಗೀತ ಕಲಿತಾ ಇದೀನಿ. ಸದ್ಯದಲ್ಲೇ ಹೊಸ ಕವನಸಂಕಲನ ಮತ್ತು ಕಥಾಸಂಕಲನ ಬಿಡುಗಡೆ ಮಾಡೋ ಯೋಚನೆ ಇದೆ...



ಸಂದರ್ಶಕ: ಹೃದಯಶಿವ

ಹೊಗಳಿಕೆ ತೆಗಳಿಕೆ

ವಹಿಸುವುದಾಗಲೀ, ಪ್ರಚೋದನಾಕಾರಿ ವಿಚಾರಗಳಲ್ಲಿ ಪಾಲ್ಗೊಳ್ಳುವುದಾಗಲೀ ಇತ್ತೀಚಿನ ದಿನಗಳಲ್ಲಿ ಹೆಚ್ಚೆಚ್ಚಾಗಿ ಕಾಣಸಿಗುತ್ತಿರುವುದು ಇಲ್ಲಿನ ದೌರ್ಭಾಗ್ಯವೆಂದೇ ಹೇಳಬಹುದು.

ವನಿತಾ ಶೆಟ್ಟಿ ಪ್ರಕರಣದ ಬಳಿಕ ನಡೆದ ಸಣ್ಣ ಸಂಚಲನೆಗೆ ಎಚ್ಚೆತ್ತ ಪುರೋಹಿತರ ಚಾಣಾಕ್ಷ ಟ್ರಬಲ್ ಶೂಟರ್ ಪೇಜಾವರ ಶ್ರೀಗಳು ತಕ್ಷಣವೇ ಫೀಲ್ಡಿಗಿಳಿದು ಬೆಂಗಳೂರಿನ ಮಾಜಿ ಆಯುರ್ವೇದ ಪಂಡಿತ ಗುರೂಜಿಯೊಬ್ಬರ ಮೂಲಕ ತಕ್ಷಣಕ್ಕೆ ಮಧ್ಯಸ್ಥಿಕೆ ನಡೆಸಿ ಪ್ರಕರಣದ ಕಾವನ್ನು ಆರಂಭದಲ್ಲೇ ಚಿವುಟಿ ಕುಗ್ಗಿಸಿದ್ದರು. ಬಳಿಕ ಸಿಪಿಎಂ ಪಕ್ಷದ ಪ್ರತಿಭಟನೆಯಿಂದ ಘಟನೆಗೆ ಮರುಜೀವ ಸಿಗಬಾರದೆಂಬ ಮುಂಜಾಗ್ರತೆಗಾಗಿ ಘಟನೆಯ ಬಳಿಕ ವಿಟ್ಲ ಪರಿಸರದ ಬಂಟ ಸ್ವಾಮಿಯನ್ನು ಮುಂದೆ ನಿಂತು ಸನ್ಮಾನಿಸಿ ಅವರನ್ನು ಇಂದ್ರಚಂದ್ರ ಎಂದು ಇನ್ನಿಲ್ಲದಂತೆ ಹೊಗಳಿದರಲ್ಲದೇ ಮೊನ್ನೆ ಉಡುಪಿಯ ಕೆಮ್ಮಣ್ಣು ತೋನ್ಸೆಯ ಸಮಾರಂಭವೊಂದರಲ್ಲಿ ಬಂಟರನ್ನು ಸಂಸ್ಕೃತಿ ರಕ್ಷಕರೆಂದು ಹಾಡಿ ಹೊಗಳಿ ಅಟ್ಟಕ್ಕೇರಿಸಿದರು. ಇವೆಲ್ಲ ಅವರ ತಂತ್ರದ ಭಾಗಗಳೆಂಬುದು ಅವರನ್ನು ಬಲ್ಲವರಿಗೆ ತಿಳಿದದ್ದೇ. ಬಂಟರು ತಿರುಗಿ ಬೀಳಬಾರದು ಜೊತೆಗೆ ವೈದಿಕಶಾಹಿಯ ರಕ್ಷಣೆ ಹಾಗು ಕಾಲಾಳು ಸೇನೆಗೆ ಅವರು ಅತ್ಯವಶ್ಯವೂ ತಾನೆ? ಅದೂಅಲ್ಲದೇ ಧಾರ್ಮಿಕ ಸಮಾರಂಭಗಳಿಗೆಲ್ಲ ಬೇಕಾಬಿಟ್ಟಿ ಹಣಸುರಿಯುವವರೂ ಇವರುಗಳೇ ತಾನೆ ಇಂಥವರನ್ನು ಬಿಟ್ಟಿರುವುದಾದರೂ ಹೇಗೆ ಸಾಧ್ಯ?

ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬಾಳಬೇಕಾಗಿದ್ದ ಯುವಜನತೆ ಮತಾಂಧರ ಕೆಟ್ಟ ಉಪದೇಶಗಳಿಗೆ ಬಲಿಪಶುಗಳಾಗಿ ಬಳಕೆಯಾಗುತ್ತಿದ್ದಾರೆ. ಇದಕ್ಕೆ ಇತ್ತೀಚೆಗಿನ ಉದಾಹರಣೆಯೆಂದರೆ ಉದ್ಯೋಗಕ್ಕಾಗಿ ವಿದೇಶಕ್ಕೆ ಹೋಗಲು ಎಲ್ಲಾ ತಯಾರಾಗಿ ಹೊರಟಿದ್ದ ಎಳೆವಯಸ್ಸಿನ ತರುಣ ಚೇತನ್ ಕುಮಾರ್ ಶೆಟ್ಟಿ. ಈತ ಮತಾಂಧ ಶಕ್ತಿಗಳ ಪ್ರಚೋದನೆಯಿಂದ ಅವನ ಅಜ್ಜನ ಪ್ರಾಯದ ಸುರೇಶ್ ಭಟ್ಟರ ಮುಖಕ್ಕೆ ಸಗಣಿ ಹಚ್ಚಿ ಹಲ್ಲೆಗೆ ಮುಂದಾಗಿ ಇದೀಗ ಜೈಲಿನ ಕಂಬಿ ಎಣಿಸುತ್ತಾ ಕುಳಿತಿದ್ದಾನೆ. ಇಂತಹ ಆದರ್ಶ ಯಾವುದರ ಮುನ್ಸೂಚನೆ?

ನಾಯಕತ್ವ ಗುಣದ ಬಂಟರು ವೈದಿಕೀಕರಣದ ಸಂಕೋಲೆಯಿಂದ ಈಗಲಾದರೂ ಹೊರಬಂದು ಸೌಹಾರ್ದ ಸಮಾನತೆಯ ಸಮಾಜಕಟ್ಟುವ ಕಾರ್ಯಕ್ಕೆ ಹೆಗಲು ಕೊಟ್ಟು ಎಲ್ಲರನ್ನೂ ಮುನ್ನಡೆಸುವಂತಾಗಲಿ ಎಂಬುದು ಸಹೃದಯರೆಲ್ಲರ ಆಶಯ.


- ಅವಿನಾಶ್ ಎಂ ಎಸ್, ಈ ಮೇಲ್ ಮೂಲಕ

ಮಹಿಳೆಯೊಬ್ಬರಿಗೆ ಅವಮಾನವಾಗಿಯೂ ಕೂಡ ಮಾತೃ ಪ್ರಧಾನ ವ್ಯವಸ್ಥೆಯ ಹೆಗ್ಗಳಿಕೆಯುಳ್ಳ ಸಮುದಾಯವೊಂದು ಯಾವ ಪ್ರತಿರೋಧ ಅಥವಾ ಈ ಕುರಿತಾಗಿ ಯಾವುದೇ ಸ್ಪಷ್ಟ ನಿರ್ಧಾರ ತಳೆಯುವ ಗೋಜಿಗೇ ಹೋಗದೇ ತಣ್ಣಗೆ ಕುಳಿತಿರುವುದು ಅಚ್ಚರಿಗೆ ಕಾರಣವಾಗಿದೆ.

ಅಮೃತಾ ಶೆಟ್ಟಿಯವರು ಹೇಳಿದಂತೆ ತುಳುನಾಡಿನಲ್ಲಿ ನಾಯಕತ್ವ (ಮುಂದಾಳತ್ವದ) ಗುಣವುಳ್ಳ ಬಂಟ ಸಮುದಾಯದ ತೀರ್ಮಾನ ತುಳುವರ ಮೂಲಸಂಸ್ಕೃತಿಯ ಅಳಿವು-ಉಳಿವಿನ ಪ್ರಶ್ನೆಗೆ ನೇರವಾಗಿ ಸಂಬಂಧಿಸಿದೆ. ಒಂದೋ ಬಿಡಲಾಗದೆಂದು ಇತ್ತೀಚಿನ ದಿನಗಳಲ್ಲಿ ಭೂತಾರಾಧನೆ ಇತ್ಯಾದಿಗಳಲ್ಲಿ ಸಂಬಂಧವಿಲ್ಲದಿದ್ದರೂ ಆಗುತ್ತಿರುವಂತೆ ಪೂರ್ತಿಯಾಗಿ ವೈದಿಕೀಕರಣದ ತೆಕ್ಕೆಗೆ ಬಿದ್ದು ಶರಣಾಗುವುದು ಇಲ್ಲಾ ತುಳುವರ ಮೂಲ ಸಂಸ್ಕೃತಿಯನ್ನು ಕಾಪಾಡಿಕೊಳ್ಳುವುದು. ಈ ಅಳಿವುಉಳಿವಿನ ವಿಚಾರದಲ್ಲಿ ಬಂಟರ ಪಾತ್ರ ಅತ್ಯಂತ ಪ್ರಮುಖವಿರುತ್ತದೆ. ಆದರೆ ಆಗುತ್ತಿರುವುದೇನು?

ಬಂಟರು ಪುರೋಹಿತಶಾಹಿಗಳ ದಾಸ್ಯತ್ವಕ್ಕೆ ... ಜಾರುತ್ತಿದ್ದಾರೆಯೇ? ಈ ಅನುಮಾನ ... ಸಹಜವಾಗಿಯೇ ಇದೀಗ ... ಕರಾವಳಿಯ ಸೌಹಾರ್ದಕ್ಕೆ, ಕೋಲ್ಮಿಂಚಿನ ... ಸಂಘಟನೆಗಳ ... ಮುಂದಾಳತ್ವ





ಸಾಬರಿಗೆ ಮಾಡಿದ ಅವಮಾನದಂತೆ ಭಾಸವಾಗುತ್ತದೆ. ಮುಂದೆ ಹೀಗಾಗದಂತೆ ನೋಡಿಕೊಳ್ಳಿ.

-ಪತ್ರಿಕೆಯ ಓದುಗ, ಎಸ್‌ಎಂ ಎಸ್‌ಮೂಲಕ

ವಿನಾಶ ಪುರುಷ ಮೋದಿಯ ಕೈಗೆ ಭಾರತವನ್ನು ಒಪ್ಪಿಸುವುದೆಂದರೆ ನಮ್ಮ ಊಟಕ್ಕೆ ನಾವೇ ವಿಷ ಬೆರೆಸಿಕೊಂಡಂತೆ.

-ರವಿಕುಮಾರ್, ಹಾಸನ

ಇನ್ನು ಮುಂದೆ ವಾಟಿಸ್ಸೆಯಿಂದ ರಾಜಕೀಯ ವಿಶ್ಲೇಷಣಾ ಮಾಡಿಸಿ, ಮಜವಾಗಿರುತ್ತೆ.

-ನಾಗ, ಎಸ್ ಎಂ ಎಸ್ ಮೂಲಕ

ಗೌರಿ ಲಂಕೇಶ್ ಪತ್ರಿಕೆ ಪ್ರತಿಯೊಬ್ಬರೂ ಓದಲೇ ಬೇಕಾದ ಪತ್ರಿಕೆ. ನಿಮ್ಮ ತಂಡಕ್ಕೆ ಜಯವಾಗಲಿ.

-ಸಾಜಿದ್ ಜಾನ್ವಲೆ

ಮೇ 14ರ ಸಂಚಿಕೆಯಲ್ಲಿ ಶುದ್ಧೋದನ ಅವರು ತಮ್ಮ ವರದಿಯಲ್ಲಿ ಬಳಸಿದ ಭಾಷೆ ಬೇಸರ ತಂದಿದೆ. ಉದಾಹರಣೆಗೆ ಅವರು ಬೇಕಿದ್ದರೆ ಎಸ್‌ಡಿಪಿಐ ಪಕ್ಷವನ್ನು ಬೈಯಲಿ. ಆದರೆ ಅದನ್ನು 'ಸಾಬಿಗಳ ಆರೆಸ್ಸೆಸ್' ಅನ್ನುವುದು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ SMS ಕಳುಹಿಸಬಹುದು. ಚಿಕ್ಕದಾಗಿ ಮತ್ತು ಚೊಕ್ಕವಾಗಿ

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 28-05-2014 RNI No. KARKAN2005/14648

ಮುತ್ತುಲಕ್ಷ್ಮಿಯಾಗಿ ಪೂಜಾ ಗಾಂಧಿ

ಎ.ಎಂ.ಆರ್.ರಮೇಶ್ ಎಂದಾಕ್ಷಣ ತಕ್ಷಣ ನೆನಪಾಗೋದು 'ಸೈನೈಡ್' ಸಿನಿಮಾ. ರಾಜೀವ್ ಗಾಂಧಿ ಹತ್ಯೆಯ ಸುತ್ತಲ ಘಟನೆಗಳನ್ನು 'ಸೈನೈಡ್'



ಮೂಲಕ ಇವರು ತೆರೆದಿಟ್ಟದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ತಾಂತ್ರಿಕವಾಗಿ ಬಹಳ ಶ್ರೀಮಂತಿಕೆಯಿಂದ ಕೂಡಿದ್ದ 'ಸೈನೈಡ್' ಕನ್ನಡ ಚಿತ್ರರಂಗದ ಮಟ್ಟಿಗೆ ಒಂದು ವಿಶಿಷ್ಟ ಸಿನಿಮಾ. ಆ ಚಿತ್ರದ ಹೆಗ್ಗಳಿಕೆ ಎಷ್ಟರಮಟ್ಟಿನದು ಎಂದರೆ ಸ್ವತಃ ರಾಮಗೋಪಾಲ್ ವರ್ಮ ಆ ಚಿತ್ರವನ್ನು ಮೆಚ್ಚಿಕೊಂಡಿದ್ದರು, ರಮೇಶ್ ಅವರನ್ನು ಅಭಿನಂದಿಸಿದ್ದರು.

ಅಂಥದೊಂದು ಚಿತ್ರವನ್ನು ಕನ್ನಡಕ್ಕೆ ಕೊಟ್ಟಂಥ ರಮೇಶ್ ಅದೇ ಹುರುಪಿನಲ್ಲಿ ನಿರ್ದೇಶಿಸಿದ ಮತ್ತೊಂದು ಚಿತ್ರವೆಂದರೆ 'ಅಟ್ಟಹಾಸ'. ಮೇಕಿಂಗ್ ವಿಷಯದಲ್ಲಿ 'ಅಟ್ಟಹಾಸ' ಚಿತ್ರವು 'ಸೈನೈಡ್' ಚಿತ್ರದಷ್ಟು ಅದ್ಭುತವೆನಿಸದಿದ್ದರೂ ವೀರಪ್ಪನ್ ಬದುಕನ್ನಾಧರಿಸಿದ ಈ ಸಿನಿಮಾ ಕನ್ನಡ ಚಿತ್ರ ಪ್ರೇಮಿಗಳು ಒಂದುಕ್ಷಣ ಬೆರಗಿನಿಂದ ತನ್ನೆಡೆಗೆ ನೋಡುವಂತೆ ಮಾಡಿತ್ತು.

ಇಂತಹ ರಮೇಶ್ ಈಗ ಮತ್ತೊಂದು ನೈಜ ಘಟನೆಯನ್ನು ಆಧಾರವಾಗಿಟ್ಟುಕೊಂಡು ಸಿನಿಮಾ ಮಾಡಲು ಹೊರಟಿದ್ದಾರೆ. ಆ ಚಿತ್ರದ ಹೆಸರೇ 'ಮುತ್ತುಲಕ್ಷ್ಮಿ'. ಈ ಮುತ್ತುಲಕ್ಷ್ಮಿ ಎಂಬ ಹೆಸರನ್ನು ಎಲ್ಲೋ ಕೇಳಿದ್ದೇವಲ್ಲಾ ಎನಿಸಬಹುದು. ಈ ಮುತ್ತುಲಕ್ಷ್ಮಿ ಬೇರಾರು ಅಲ್ಲ; ಸ್ವತಃ ವೀರಪ್ಪನ್ ಹೆಂಡತಿ. ವೀರಪ್ಪನ್ ಜೊತೆ ಮೂರು ವರ್ಷಗಳ ಕಾಲ ಸಂಸಾರ ಮಾಡಿದಂಥ ಹೆಣ್ಣು, ವೀರಪ್ಪನ್ ನಂತಹ ವ್ಯಕ್ತಿಯನ್ನು ಕಟ್ಟಿಕೊಂಡ ತಪ್ಪಿನಿಂದಾಗಿ ತನ್ನಿಡೀ ಬದುಕಿನುದ್ದಕ್ಕೂ ಸಂಕಷ್ಟಗಳನ್ನು ಎದುರಿಸುತ್ತಲೇ ಬಂದ ಮಹಿಳೆ. ಈಗ 'ಮುತ್ತುಲಕ್ಷ್ಮಿ' ಮೂಲಕ ಆಕೆ ಪಟ್ಟ ಪಾಡುಗಳನ್ನು ನಿಜವಾಗಿ ತೆರೆಗೆ ತರಲು ರಮೇಶ್ ಹೊರಟಿದ್ದಾರೆ. ಮುತ್ತುಲಕ್ಷ್ಮಿಯಾಗಿ ಪೂಜಾ ಗಾಂಧಿ ನಟಿಸುತ್ತಿದ್ದಾರೆ.

ರವಿಚಂದ್ರನ್ ದಾನಿಯಾದಾಗ



ಕನ್ನಡದ ಮಟ್ಟಿಗೆ ಕೊಡುಗೈ ದಾನಿ, ಕಲಿಯುಗ ಕರ್ಣ ಎಂಬಿತ್ಯಾದಿ ಬಿರುದುಗಳಿಗೆ ಪಾತ್ರವಾಗಿರೋದು ಅಂಬರೀಶ್. ಈಗ ಆ ಪಟ್ಟಿಗೆ ರವಿಚಂದ್ರನ್ ಅವರನ್ನೂ ಸೇರಿಸಬಹುದು. 'ಅದು ಹೇಗೆ?' ಅಂತೀರಾ...

ಮೊನ್ನೆ ಏನಾಯಿತೆಂದರೆ, ನಟ ರವಿಶಂಕರ್ ಗೌಡ ('ಪಯಣ' ಹೀರೋ) ರವಿಚಂದ್ರನ್ ಅವರ ಮನೆಗೆ ಹೋಗಿದ್ದಾರೆ. ಹೋದವರೇ ರವಿಚಂದ್ರನ್ ಅವರ ಜೊತೆಯಲ್ಲೇ ಮಧ್ಯಾಹ್ನ ಊಟ ಮಾಡಿದ್ದಾರೆ. ಊಟದ ಮಧ್ಯೆ ಹೀಗೇ ಮಾತಾಡುತ್ತಾ "ಸರ್, ನಾನು ನನ್ನ ಹೆಂಡತಿ ಮತ್ತು ಮಗನೊಂದಿಗೆ ಸಿಂಗಾಪುರಕ್ಕೆ ಹೋಗಬೇಕು" ಅಂತ ಕ್ಯಾಶುಯಲ್ ಆಗಿ ಹೇಳಿದ್ದಾರೆ. ರವಿಶಂಕರ್ ಯಾವಾಗ ಈ ಮಾತು ಹೇಳಿದರೋ ರವಿಚಂದ್ರನ್‌ನ ಅವರಿಗೆ ಏನನ್ನಿಸಿತೋ ಗೊತ್ತಿಲ್ಲ, ತಕ್ಷಣ ಐವತ್ತು ಸಾವಿರ ರೂಪಾಯಿ ಬಂಡಲನ್ನು ತೆಗೆದು ರವಿಶಂಕರ್ ಕೈಗಿಟ್ಟು "ಎಂಜಾಯ್ ಮಾಡ್ ಹೋಗು" ಅಂತ ಹೇಳಿಬಿಟ್ಟಿದ್ದಾರೆ.

ಈ ಅನಿರೀಕ್ಷಿತ ಘಟನೆಯಿಂದ ರವಿಶಂಕರ್ ಕ್ಷಣಕಾಲ ಬೆರಗಾಗಿದ್ದಾರೆ. ರವಿಚಂದ್ರನ್ ತರಹದವರು ಹೀಗೆ ಪ್ರೀತಿಯಿಂದ ನೀಡಿದ್ದನ್ನು ಅಷ್ಟೇ ಪ್ರೀತಿಯಿಂದ ಸ್ವೀಕರಿಸಬೇಕಾದುದು ಸರಿಯೆಂದು ಅರಿತ ರವಿಶಂಕರ್ ಗೌಡ ಆ ಹಣವನ್ನು ಪಡೆದುಕೊಂಡಿದ್ದಾರೆ.

ರವಿಚಂದ್ರನ್ ಅವರ ನೇರವಮಾತುಗಳನ್ನು ಜೀರ್ಣಿಸಿಕೊಳ್ಳಲಾಗದ ಎಷ್ಟೋ ಜನ ರವಿಚಂದ್ರನ್ ಅಹಂಕಾರಿ ಎಂದು ಭಾವಿಸುತ್ತಾರೆ. ಅಂಥವರಿಗೆ ಈ ಘಟನೆ ಅಚ್ಚರಿ ಉಂಟುಮಾಡಬಲ್ಲದು ಅಲ್ಲವೇ?





ಉಪ್ಪಿ-2 ಮುಂದಕ್ಕೆ

'ಸೂಪರ್' ಎಂಬ ಅದ್ಭುತದ ಚಿತ್ರವನ್ನು ನೀಡಿ ನಂತರ ಉಪೇಂದ್ರ ಅವರು 'ಉಪ್ಪಿ-2' ಎಂಬುದೊಂ ಚಿತ್ರವನ್ನು ನಿರ್ದೇಶಿಸುತ್ತಿರುವುದು ನಿಮಗೆ ಗೊತ್ತಿರುವಂಥ ಈ ಚಿತ್ರವು ಸೆಪ್ಟೆಂಬರ್ ಹದಿನೆಂಟರಂದು ಬಿಡುಗಡೆಯಾ ಬೇಕಿತ್ತು, ಅವತ್ತು ಉಪೇಂದ್ರ ಹುಟ್ಟಿದ ದಿನ. ಆದರೆ ಈ ಬಿಡುಗಡೆಯ ದಿನಾಂಕ ಮುಂದಕ್ಕೆ ಹೋಗಿದೆ. ಇಷ್ಟಕ 'ಉಪ್ಪಿ-2' ಮುಂದಕ್ಕೆ ಹೋಗಲು ಕಾರಣ ಉಪೇಂದ ಬ್ಯುಸಿ ಶೆಡ್ಯೂಲ್ ಅಂತೆ.

ಸದ್ಯಕ್ಕೆ 'ಬಸವಣ್ಣ' ಹಾಗೂ 'ಸೂಪರ್‌ಸ್ಟಾರ್ ರಂಗ' ಚಿತ್ರಗ ಕಂಪ್ಲೀಟ್ ಆಗುತ್ತಿರುವುದರಿಂದ ಮುಂದಿನ ಜೂನ್ ತಿಂಗಳಲ್ಲಿ 'ಉಪ್ಪಿ-2' ಶೂಟಿಂ ಮತ್ತೆ ಆರಂಭವಾಗುತ್ತದಂತೆ. ಅಂದಹಾಗೆ, ತಮ್ಮ ಕನಸಿನ ಚಿತ್ರವಾದ 'ಉಪ್ಪಿ-2'ವ ಆತುರಾತುರಕ್ಕೆ ಸುತ್ತಿ ಬಿಡುಗಡೆ ಮಾಡುವುದು ಉಪೇಂದ್ರರಿಗೆ ಇಷ್ಟವಿಲ್ಲವಂ ಸಂಯಮದಿಂದ, ಕ್ರಿಯಾಶೀಲತೆಯಿಂದ, ಶಾಂತಮನಸ್ಸಿನಿಂದ ಚಿತ್ರವನ್ನು ಮಾಡಬೇಕೆಂ ಬಯಕೆ ಹೊಂದಿದ್ದಾರಂತೆ.

ಅಂದರೆ ಈ ಚಿತ್ರ ಇನ್ನು ತೆರೆಗೆ ಬರಬೇಕಾದರೆ ಎರಡು ಸಾವಿರದ ಹದಿನೈ ಬರಬೇಕಾಗುತ್ತದೆ. ಉಪೇಂದ್ರ ಒಳ್ಳೆಯ ಸಿನಿಮಾ ಕೊಡುವುದಾದರೆ ತಡವಾದ ಪರವಾಗಿಲ್ಲ ಅನ್ನೋದು ಅಭಿಮಾನಿಗಳ ಬಯಕೆಯಂತೆ. ಈ ಬಾರಿಯಾದ ಉಪೇಂದ್ರ ಒಂದೊಳ್ಳೆ ಚಿತ್ರವನ್ನು ಕೊಡಲಿ. ತಮ್ಮ ಹಳೆಯ ಕರಾಮತ್ತನ್ನು ಮತ್ತೊ ಕನ್ನಡಿಗರಿಗೆ ತೋರಲಿ ಎಂಬುದು ನಮ್ಮ ಬಯಕೆ.

'ಜಸ್ಟ್ ಲವ್' ತೆರೆಗೆ

ಸಂಕಲನಕಾರ ನಾಗೇಂದ್ರ ಅರಸ್ ನಿರ್ದೇಶನದ 'ಜಸ್ಟ್ ಲವ್' ಚಿತ್ರವು ತೆ ಬರಲು ಸಿದ್ಧವಾಗಿದೆ. ಎರಡು ಕೋಟಿ ಖರ್ಚು ಮಾಡಿ ತೆಗೆಯಲಾಗಿರುವ ಚಿತ್ರದಲ್ಲಿ ಪ್ರಮುಖವಾಗಿ ಜೆ.ಕೆ. ಅಲಿಯಾಸ್ ಜೆ.ಕಾರ್ತಿಕ್ ನಟಿಸಿದ್ದಾರೆ. ಇ 'ಅಶ್ವಿನಿ ನಕ್ಷತ್ರ' ಧಾರಾವಾಹಿ ಮೂಲಕ ತಕ್ಕಮಟ್ಟಿಗೆ ಜನಪ್ರಿಯರಾದವರು. ಮೊದಲ ಬಾರಿಗೆ ಹಿರಿತೆರೆಯಲ್ಲಿ ಹೀರೋ ಆಗುವ ಮೂಲಕ ಅದ ಪರೀಕ್ಷಿಸಿಕೊಳ್ಳಲು ಹೊರಟಿರುವ ಜೆ.ಕೆ. 'ಜಸ್ಟ್ ಲವ್' ಬಗ್ಗೆ ತೀರಾ ಭರ ಇಟ್ಟುಕೊಂಡಿದ್ದಾರಂತೆ.

ಈ ಚಿತ್ರದಲ್ಲಿ ಜೆ.ಕೆ. ಅವರಿಗೆ ಜೋಡಿಯಾಗಿ ಪಂಜಾಬ್ ಮೂಲದ ನೆ ಸಕ್ಸೇನ ಜೊತೆಯಾಗಿದ್ದಾರೆ. ಅಂದಹಾಗೆ ಈ ಜೆ.ಕೆ. ಈ ಮೊದಲು ಹಿರಿತೆರೆ ಒಂದಿಷ್ಟು ಖಳನಾಯಕನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದರು.

ಮಗನ ದಾರಿಯೇ ಬೇರೆ

ನನ್ನ ತಂದೆ ಖ್ಯಾತ ಬರಹಗಾರರಾಗಿದ್ದು, ಅವರು ಉತ್ತಮ ರಾಜಕೀ ವಿಡಂಬನಾಕಾರರು ಕೂಡಾ. ನನಗೆ ಅವರಷ್ಟು ರಾಜಕೀಯ ಪ್ರಜ್ಞೆ ಇಲ್ಲ. ಅ ಅವರು ತಮ್ಮ ವೃತ್ತಿಜೀವನದ ಪ್ರಾರಂಭದಲ್ಲಿ ನಿರ್ದೇಶಿಸಿದ್ದ 'ದಶಾವತಾರ' ವಿಡಂಬನಾತ್ಮಕ ಧಾರಾವಾಹಿ ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದೆ ಪ್ರಭಾವದಿಂದಲೇ 'ಹಿಂಗ್ಯಾಕೆ' ಎಂಬ ಹಾಸ್ಯಭರಿತ ಚಲನಚಿತ್ರವನ್ನು ನಿರ್ದೇಶಿಸಿ ಮೊದಲು ಗಂಭೀರ ಚಿತ್ರವನ್ನು ಮಾಡಲು ಯೋಜಿಸಿದ್ದೆ. ಈ ಬಗ್ಗೆ ಗೆಳೆಯ ಹಿರಿಯರ ಬಳಿ ಸಲಹೆ ಕೇಳಿದಾಗ, ಈಗಿನ ಯುವಪೀಳಿಗೆ ಒಪ್ಪುವಂತಹ ಚಿತ್ರವನ್ನು ನಿರ್ದೇಶಿಸುವಂತೆ ಸಲಹೆ ನೀಡಿದರು. ಅದರಂತೆ ಮೂರು ತಿ ಕಾಲ ಚಿತ್ರಕತೆ ರಚಿಸಲು ಸಮಯ ತೆಗೆದುಕೊಂಡು 'ಹಿಂಗ್ಯಾಕೆ' ಎಂಬ ಹಾಸ್ಯಭರಿತ ಚಲನಚಿತ್ರವನ್ನು ಕೈಗೆತ್ತಿಕೊಂಡಿದ್ದೇನೆ' ಎಂಬ ಮಾತುಗಳನ್ನು ಆಡಿದವರು ಬೇರಾರೂ ಅಲ್ಲ, ಟಿ.ಎನ್.ಸೀತಾರಾಂ ಅವರ ಪುತ್ರ ಟಿ.ಎಸ್.ಸತ್ಯಜಿತ್.



ಈಗಾಗಲೇ ಚಿತ್ರವು ರೆಡಿಯಾಗಿದ್ದು ಮಳೆಗಾಲಕ್ಕೂ ಮೊದಲೇ ಬಿಡುಗಡೆಯಾಗುತ್ತಿದೆಯಂತೆ. ಒಂದೇ ಒಂದು ಹ ಇಲ್ಲದ ಈ ಚಿತ್ರಕ್ಕೆ ವಿಶೇಷ ಪ್ರಚಾರತಂತ್ರಗಳನ್ನು ಪ್ರಯೋಗಿಸಲಾಗುವುದಂತೆ. ತಮ್ಮದೇ ಹಾದಿ ಹಿಡಿದು ಪ್ರಸಿದ್ಧಿ ಪಡೆದರೆ ಮಗ ಬೇರೊಂದು ಮಾರ್ಗ ಪಯಣಿಸಲು ಹೊರಟಿದ್ದಾರೆ. ಆಲ್ ದಿ ಬೆಸ್ಟ್ ಸತ್ಯಜಿತ್...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com